**ಸಂಪುಟ:** 05 **ಸಂಚಿಕೆ:** 226 **ಪುಟಗಳು:** 08 **ಶುಕ್ರವಾರ** 31 **ಅಕ್ಟೋಬರ್** 2025

www.udayavahini.in epaper.udayavahini.in Udaya vahini news Udaya vahini news Udayavahini news youtube udayavahininews@gmail.com

ಸಂಪಾದಕರು: ಟಿ. ಹೊಂಬೇಗೌಡ

RNI No. KARKAN/2021/80833

9448225696 +91 8035841833 ₹5

**ಮುಂಜಾನೆ ಮಾತು**

ನಿಮ್ಮ ಆಲೋಚನೆಗಳೆಲ್ಲವೂ ಸರಿಯಾಗಿದೆ ಎಂದು ನಂಬಿಕೊಳ್ಳಬೇಡಿ. ನಿಮ್ಮ ಮನಸ್ಸು ನಿಮ್ಮನ್ನು ವಂಚಿಸಿದಷ್ಟು ಇನ್ಯಾರೂ ವಂಚಿಸಲಾರರು

# ಉದಯ ವಾಹಿನಿ

ಸರ್ವ ಸಮಾನತೆಯ ಕನ್ನಡ ದಿನಪತ್ರಿಕೆ

ಉದಯ ವಾಹಿನಿ

ವರದಿಗಾರರು ಬೇಕಾಗಿದ್ದಾರೆ

ಎಂಎ., ಜರ್ನಲಿಸಂ ಮಾಡಿರುವಂತಹ ಉತ್ಸಾಹಿ ಯುವಕ ಯುವತಿಯರು ತಾಲ್ಲೂಕು ಹಾಗೂ ಜಿಲ್ಲಾ ಮಟ್ಟಗಳಲ್ಲಿ ಕೆಲಸ ಮಾಡುವಂತಹ

ರಾಜ್ಯದಾದ್ಯಂತ ವರದಿಗಾರರು ಬೇಕಾಗಿದ್ದಾರೆ

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ:

9448225696
+91 8035841833

#: 1230 'JAYAMAHAL 13th cross, 2nd phase, Girinagar, Bangalore-560085. (Near to Bangalore one park, opposite mandya medical)
udayavahininews@gmail.com

## ವಿದ್ಯಾರ್ಥಿಗಳ ಉತ್ತೀರ್ಣ ಕನಿಷ್ಠ ಅಂಕ ಇಳಿಕೆ ಬೇಡ : ಸಭಾಪತಿ

• **ಉದಯವಾಹಿನಿ, ಬೆಂಗಳೂರು**

ಶಾಲಾ ವಿದ್ಯಾರ್ಥಿಗಳಿಗೆ ಕನಿಷ್ಠ ಉತ್ತೀರ್ಣ ಅಂಕಗಳನ್ನು 35ಕ್ಕೆ ತರುವಂತೆ ರಾಜ್ಯ ಸರ್ಕಾರಕ್ಕೆ ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿಯವರು ಆಗ್ರಹಿಸಿದ್ದಾರೆ. 33 ಅಂಕಗಳನ್ನು ಗಳಿಸಿದ ವಿದ್ಯಾರ್ಥಿಗಳನ್ನು ಉತ್ತೀರ್ಣರೆಂದು ಪರಿಗಣಿಸಲಾಗುತ್ತದೆ ಎಂದು ಸಚಿವ ಮಧು ಬಂಗಾರಪ್ಪ ಅವರು ಈ ಹಿಂದೆ ಹೇಳಿದ್ದರು. ಈ ಹಿನ್ನೆಲೆಯಲ್ಲಿ ಮಧು ಬಂಗಾರಪ್ಪ ಅವರಿಗೆ ಪತ್ರ ಬರೆದಿರುವ ಹೊರಟ್ಟಿಯವರು 33 ಅಂಕದ ಬದಲಿಗೆ 35 ಅಂಕಗಳನ್ನೇ ನಿಗದಿಪಡಿಸಬೇಕು. ವಿದ್ಯಾರ್ಥಿಗಳ ಭವಿಷ್ಯತ್ತಿನ ದೃಷ್ಟಿಯಿಂದ ಹಿಂದಿದ್ದ ನಿಯಮವೇ ಉತ್ತಮ ಎಂದು ಅವರು ಹೇಳಿದ್ದಾರೆ. ಜೊತೆಗೆ, ಪ್ರೌಢಶಾಲೆಗಳು, ಪದವಿಪೂರ್ವ ಕಾಲೇಜುಗಳಲ್ಲಿ ಖಾಲಿ ಇರುವ ಶಿಕ್ಷಕರ ಹುದ್ದೆಗಳನ್ನು ಕೂಡಲೇ ಭರ್ತಿ ಮಾಡಬೇಕು ಎಂದು ಮನವಿ ಮಾಡಿದ್ದಾರೆ.

## ಡಿಕೆಶಿ ಕನಸಿನ ಸುರಂಗ ಮಾರ್ಗ ಯೋಜನೆಗೆ ಎದುರಾಯ್ತು ವಿಘ್ನ

• **ಉದಯವಾಹಿನಿ, ಬೆಂಗಳೂರು**

ಡಿಸಿಎಂ ಡಿ.ಕೆ.ಶಿವಕುಮಾರ್ ಅವರ ಕನಸಿನ ಯೋಜನೆಯಾದ ಸುರಂಗ ಮಾರ್ಗ ನಿರ್ಮಾಣ ಕಾಮಗಾರಿಗೆ ವಿಘ್ನ ಎದುರಾಗಿದೆ. 17 ಕಿ.ಮೀ ಉದ್ದದ ಸುರಂಗ ಮಾರ್ಗದ ಬದಲಿಗೆ ಕೇವಲ ಒಂದು ಕಿ.ಮೀ ಉದ್ದದ ಸುರಂಗ ಮಾತ್ರ ನಿರ್ಮಾಣ ಮಾಡಲು ಬಿ ಸ್ಮೈಲ್ ಸಂಸ್ಥೆ ನಿರ್ಧರಿಸಿದೆ. 17 ಕಿ.ಮೀ ಉದ್ದದ ಸುರಂಗ ಮಾರ್ಗ ನಿರ್ಮಾಣಕ್ಕೆ ಪರಿಸರವಾದಿಗಳು, ತಜ್ಞರು, ನಾಗರಿಕರು ಭಾರಿ ವಿರೋಧ ವ್ಯಕ್ತಪಡಿಸಿದ್ದ ಹಿನ್ನೆಲೆಯಲ್ಲಿ ಕೇವಲ 1 ಕಿ.ಮೀ ಉದ್ದದ ಸುರಂಗ ಮಾರ್ಗ ಮಾತ್ರ ನಿರ್ಮಿಸಿ ಉಳಿದ ಕಡೆಗಳಲ್ಲಿ ಮಾಮೂಲು ರಸ್ತೆ ನಿರ್ಮಾಣ ಮಾಡಲಾಗುತ್ತಿದೆ. ಆರಂಭದಲ್ಲಿ ಹೆಬ್ಬಾಳದಿಂದ ಸಿಲ್ಕ್ ಬೋರ್ಡ್ ಜಂಕ್ಷನ್‌ವರೆಗಿನ 1 ಕಿಲೋಮೀಟರ್ ಉದ್ದದ ಸುರಂಗ ಕೊರೆಯಲು ಯೋಜನೆ ರೂಪಿಸಲಾಗಿದೆ.ಹೆಬ್ಬಾಳದ ಎಸ್ಟೀಮ್ ಮಾಲ್‌ನಿಂದ ಪಶುವೈದ್ಯಕೀಯ ಆಸ್ಪತ್ರೆ ವರೆಗೆ ಮಾತ್ರ ಸುರಂಗ ನಿರ್ಮಿಸಲಾಗುತ್ತಿದೆ. 1ಕಿ.ಮೀ ಉದ್ದದ ಸುರಂಗ ಮಾರ್ಗ ಕಾಮಗಾರಿ ಯಶಸ್ವಿಯಾದರೆ ಮುಂದಿನ ದಿನಗಳಲ್ಲಿ ಈ ಯೋಜನೆಯನ್ನು ವಿಸ್ತರಿಸುವ ಬಗ್ಗೆ ಚಿಂತನೆ ನಡೆಸಲಾಗುವುದು ಎಂದು ಜಿಬಿಎ ಮುಖ್ಯ ಆಯುಕ್ತ ಮಹೇಶ್ವರ್ ರಾವ್ ಮಾಹಿತಿ ನೀಡಿದ್ದಾರೆ.

## ಆರ್‌ಎಸ್‌ಎಸ್ ಪಥಸಂಚಲನದಲ್ಲಿ ಭಾಗಿಯಾದ 4 ಶಿಕ್ಷಕರಿಗೆ ನೋಟೀಸ್

• **ಉದಯವಾಹಿನಿ, ಬೆಂಗಳೂರು**

ಆರ್‌ಎಸ್‌ಎಸ್, ಸರ್ಕಾರದ ನಡುವಿನ ಜಟಾಪಟಿ ಬೆನ್ನಲ್ಲೇ, ಬೀದರ್ ಜಿಲ್ಲೆಯ ಔರಾಧ್ ತಾಲ್ಲೂಕಿನಲ್ಲಿ ಅ. 7, 13 ರಂದು ನಡೆದ ಪಥ ಸಂಚಲನದಲ್ಲಿ ಭಾಗವಹಿಸಿದ್ದ ನಾಲ್ವರು ಶಿಕ್ಷಕರಿಗೆ ಕಾರಣ ಕೇಳಿ ಕ್ಷೇತ್ರ ಶಿಕ್ಷಣಾಧಿಕಾರಿ ನೋಟೀಸ್ ಜಾರಿ ಮಾಡಿದ್ದಾರೆ. ಇದು ಮತ್ತೊಂದು ವಿವಾದಕ್ಕೆ ಕಾರಣವಾಗಿದ್ದು, ಸರ್ಕಾರದ ಈ ಕ್ರಮಕ್ಕೆ ಪ್ರತಿಪಕ್ಷ ಬಿಜೆಪಿ ಕಿಡಿಕಾರಿದೆ. ಅಕ್ಟೋಬರ್ 7, 13ರಂದು ಔರಾಧ್‌ನಲ್ಲಿ ಆರ್‌ಎಸ್ ಎಸ್ ಪಥಸಂಚಲನ ನಡೆದಿತ್ತು. ಶಿಕ್ಷಕರಾದ ಮಹದೇವ, ಶಾಲಿವಾನ್, ಪ್ರಕಾಶ್, ಸತೀಶ್ ಭಾಗವಹಿಸಿದ್ದರು. ನಾಲ್ಕು ಜನ ಶಿಕ್ಷಕರಿಗೆ ಕ್ಷೇತ್ರ ಶಿಕ್ಷಣಾಧಿಕಾರಿ ನೋಟೀಸ್ ಜಾರಿ ಮಾಡಿದ್ದಾರೆ. ದಲಿತ ಸೇನೆ ವತಿಯಿಂದ ಔರಾಧ್ (ಬಿ) ನ ಆದರ್ಶ ವಿದ್ಯಾಲಯದ ಸಹ ಶಿಕ್ಷಕ ಮಹಾದೇವ್ ಚಿಟಗಿರೆ, ಬಿ.ಆರ್.ಸಿ ಕಚೇರಿಯ ಸಿಬ್ಬಂದಿ ಶಾಲಿವಾನ್ ಉದಗಿರಿ ಹಾಗೂ ಎಕಂಬಾ ಗ್ರಾಮದ ಸಿ ಆರ್ ಪಿ ಪ್ರಕಾಶ್ ಬರದಾಪೂರೆ ಅವರ ವಿರುದ್ಧ ದೂರು ನೀಡಲಾಗಿತ್ತು. ಹಾಗೆಯೇ ಬಹುಜನ ಸೇವಾ ಸಮಿತಿ ವತಿಯಿಂದ ಬಳತ್ (ಕೆ) ಸಹಿಪ್ರಾ ಶಾಲೆಯ ಸಹ ಶಿಕ್ಷಕ ಸತೀಶ್ ಮಾನಕಾರಿ ಅವರ ವಿರುದ್ಧ ದೂರು ನೀಡಲಾಗಿತ್ತು. ಜೊತೆಗೆ ಶಿಕ್ಷಕರ ವಿರುದ್ಧ ಕ್ರಮಕ್ಕೆ ಆಗ್ರಹಿಸಿದ್ದರು.



# ಕಸ ರಸ್ತೆಗೆ ಎಸೆದರೆ ಕಷ್ಟ ಕಷ್ಟ!

ಇನ್ನುಮುಂದೆ ರಸ್ತೆಯಲ್ಲಿ ಕಸ ಹಾಕಿದ್ರೆ ಮನೆಗೆ ಡೋರ್ ಡೆಲಿವರಿ ಮಾಡಲಿದೆ

ಬೆಂಗಳೂರಲ್ಲಿ ಎಲ್ಲೆಂದರಲ್ಲಿ ಕಸ ಎಸೆಯುವ ಮುನ್ನ ಎಚ್ಚರ!

1 ನಗರದ 198 ವಾರ್ಡ್‌ಗಳಲ್ಲಿ ಕಸ ಎಸೆಯುವವರ ಮೇಲೆ ನಿಗಾ ವಹಿಸಲು ಮಾರ್ಷಲ್‌ಗಳ ನಿಯೋಜನೆ

2 ಬೆಂಗಳೂರಿಗೆ ದೇಶದ ಐದನೇ ಅತ್ಯಂತ ಕೊಳಕು ನಗರ ಹಣೆಪಟ್ಟಿ

3 ಎಲ್ಲೆಂದರಲ್ಲಿ ಕಸ ಎಸೆಯುವವರ ಮೇಲೆ ಕ್ರಮಕ್ಕೆ ಮುಂದಾದ ಘನತ್ಯಾಜ್ಯ ನಿರ್ವಹಣಾ ಸಂಸ್ಥೆ



ಒಂದು ಕಾಲದಲ್ಲಿ ಭಾರತದ ಸ್ವಚ್ಛ ನಗರ ಮತ್ತು ಗಾರ್ಡನ್ ಸಿಟಿ ಎಂದು ಹೆಸರುವಾಸಿಯಾಗಿದ್ದ ಬೆಂಗಳೂರು ಈಗ ರಾಷ್ಟ್ರೀಯ ಸ್ವಚ್ಛತಾ ರ್‍ಯಾಂಕಿಂಗ್ ಪಟ್ಟಿಯಲ್ಲಿ 5ನೇ ಸ್ಥಾನಕ್ಕೆ ಕುಸಿದಿದೆ. ಸ್ವಚ್ಛ ಸರ್ವೇಕ್ಷಣ್ 2025 ಸಮೀಕ್ಷೆಯ ಪ್ರಕಾರ, ಒಂದು ಮಿಲಿಯನ್ ಗಿಂತ(10 ಲಕ್ಷ) ಹೆಚ್ಚಿನ ಜನಸಂಖ್ಯೆ ಹೊಂದಿರುವ ನಗರಗಳಲ್ಲಿ ಬೆಂಗಳೂರು ದೇಶದ ಐದನೇ ಅತ್ಯಂತ ಕೊಳಕು ನಗರವಾಗಿದೆ. ಇತ್ತ ಬೆಂಗಳೂರು ಸ್ವಚ್ಛತ್ತಾ ಪಟ್ಟಿಯಲ್ಲಿ ಕುಸಿದಿದ್ದರೆ ಅಹಮದಾಬಾದ್, ಭೂಪಾಲ್ ಮತ್ತು ಲಕ್ನೋಗಳನ್ನು ಭಾರತದ ಹೊಸ ಸ್ವಚ್ಛ ನಗರಗಳೆಂದು ಗುರುತಿಸಲಾಗಿದೆ. ಈ ನಿಟ್ಟಿನಲ್ಲಿ ಎಚ್ಚರಗೊಂಡಿರುವ ಬೆಂಗಳೂರು ಘನತ್ಯಾಜ್ಯ ನಿರ್ವಹಣಾ ಸಂಸ್ಥೆ ಅಧಿಕಾರಿಗಳು ಬೆಂಗಳೂರನ್ನು ಮತ್ತೆ ಸ್ವಚ್ಛ ನಗರವನ್ನಾಗಿ ಮಾಡುವ ಮೂಲಕ ಬೆಂಗಳೂರಿನ ಮೊದಲಿನ ಸೌಂದರ್ಯವನ್ನು ಮರಳಿಸಲು ವಿನೂತನ ಪ್ರಯತ್ನ ಮಾಡಲು ಸಿದ್ದವಾಗಿದ್ದಾರೆ.

**ದೇಶದಲ್ಲೇ 5ನೇ ಕೊಳಕು ನಗರ ಬೆಂಗಳೂರು**

• **ಉದಯವಾಹಿನಿ, ಬೆಂಗಳೂರು**

ನಿಮ್ಮ ಮನೆಯ ಕಸ, ತ್ಯಾಜ್ಯಗಳನ್ನು ಕಸದ ಬುಟ್ಟಿಯಲ್ಲಿ ಹಾಕಿ ಪಾಲಿಕೆಯ ಗಾಡಿ ಬಂದಾಗ ಕೊಡುವ ಬದಲು ಎಲ್ಲೆಂದರಲ್ಲಿ ಸುರಿಯುತ್ತೀರಾ, ಖಾಲಿ ಸೈಟ್‌ಗಳಲ್ಲಿ ತೆಗೆದುಕೊಂಡು ಹೋಗಿ ಕಸ, ತ್ಯಾಜ್ಯ ಹಾಕಿದರೆ ಇನ್ನು ಮುಂದೆ ಎಚ್ಚರ...ಎಚ್ಚರ.. ಗ್ರೇಟರ್ ಬೆಂಗಳೂರು ಪ್ರಾಧಿಕಾರ ಅಡಿಯಲ್ಲಿ ಬರುವ ಬೆಂಗಳೂರು ಘನತ್ಯಾಜ್ಯ ನಿರ್ವಹಣಾ ಲಿಮಿಟೆಡ್ ಬೆಂಗಳೂರಿನ ಐದು ಮಹಾನಗರ ಪಾಲಿಕೆಗಳ 190 ವಾರ್ಡ್‌ಗಳಲ್ಲಿ ಕಸ ಸುರಿಯುವ ಹಬ್ಬ (ಕಸ ಎಸೆಯುವ ಉತ್ಸವ)ವನ್ನು ಪ್ರಾರಂಭಿಸಿದೆ. ಬಿಎಸ್‌ಡಬ್ಲ್ಯುಎಂಎಲ್ ವ್ಯವಸ್ಥಾಪಕ ನಿರ್ದೇಶಕ ಕರೀ ಗೌಡ ಈ ಬಗ್ಗೆ ಮಾಧ್ಯಮ ಪ್ರತಿನಿಧಿಗಳಿಗೆ ಮಾಹಿತಿ ನೀಡಿದ್ದಾರೆ. ಕಸ ಎಸೆಯುವ ವಿರುದ್ಧ ಅಭಿಯಾನ ಪ್ರಾರಂಭವಾಗಿದ್ದು, ಉಪಮುಖ್ಯಮಂತ್ರಿ ಮತ್ತು ಬೆಂಗಳೂರು ಅಭಿವೃದ್ಧಿ ಸಚಿವ ಡಿ.ಕೆ. ಶಿವಕುಮಾರ್ ಅವರು ಕಟ್ಟುನಿಟ್ಟಿನ ಸೂಚನೆಗಳನ್ನು ಅನುಸರಿಸಿ ಕಸದ ಕಾಟವನ್ನು ನಿಯಂತ್ರಿಸಲಾಗುತ್ತಿದೆ ಎಂದರು.

ನಮ್ಮ ಮಾರ್ಷಲ್‌ಗಳು ಹೋಗಿ ಎಲ್ಲೆಂದರಲ್ಲಿ ಕಸ ಸುರಿಯುವವರ ವೀಡಿಯೋವನ್ನು ರೆಕಾರ್ಡ್ ಮಾಡಿದ್ದಾರೆ. ಅವರ ಮನೆಗಳು ಮತ್ತು ಅವರ ಫೋನ್ ಸಂಖ್ಯೆಯನ್ನು ಸಹ ಟ್ರ್ಯಾಕ್ ಮಾಡಿದ್ದಾರೆ. ಈಗ ಅಂತಹ ಕಸ ಎಸೆಯುವವರ ಕೊಳಕು ಕೃತ್ಯಕ್ಕೆ ಪುರಾವೆ ಒದಗಿಸಿದ್ದೇವೆ ಎಂದರು.

ಬಿಎಸ್‌ಡಬ್ಲ್ಯುಎಂಎಲ್‌ನ ಇಂಜಿನಿಯರ್‌ಗಳು ಹೇಳುವಂತೆ, ಮನೆ ಬಾಗಿಲಲ್ಲಿ ಆಟೋ ಟಿಪ್ಪರ್‌ಗಳನ್ನು ತೆಗೆದುಕೊಂಡು ಹೋಗಿ ಸರಿಪಡಿಸುವುದು, ಕಸದ ಬ್ಲಾಕ್‌ಸ್ಪಾಟ್ ಗಳನ್ನು ಸರಿಪಡಿಸುವುದು ಮತ್ತು ಹಲವಾರು ಜಾಗೃತಿ ಅಭಿಯಾನಗಳನ್ನು ನಡೆಸುತ್ತಿದ್ದರೂ, ಸಾರ್ವಜನಿಕರು ಬಂದು ಪ್ಲಾಸ್ಟಿಕ್ ಚೀಲಗಳ ಪಾಲಿಥಿನ್ ಚೀಲಗಳಲ್ಲಿ ಕಟ್ಟಿ ಕಸವನ್ನು ಬೀದಿ ಮೂಲೆಗಳಲ್ಲಿ ಎಸೆಯುತ್ತಾರೆ, ಹೀಗೆ ಮಾಡದಂತೆ ನಾವು ಇನ್ನು ಮುಂದೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳುತ್ತೇವೆ ಎಂದರು.

ಬೆಂಗಳೂರು ಪೂರ್ವ ನಗರ ನಿಗಮದಲ್ಲಿ ನಡೆದ ವಾಕ್ ವಿತ್ ಸಿಟಿಜನ್ಸ್ ಇನಿಶಿಯೇಟಿವ್ ನಂತರ ಅಧಿಕಾರಿಗಳೊಂದಿಗೆ ಇತ್ತೀಚೆಗೆ ನಡೆದ ಸಭೆಯಲ್ಲಿ, ಡಿಸಿಎಂ ಬೆಂಗಳೂರಿನಾದ್ಯಂತ ಕಸ ಎಸೆದು ನಗರದ ಸೌಂದರ್ಯವನ್ನು ಹಾಳು ಮಾಡುವವರ ಕ್ರಮ ನಿಯಂತ್ರಿಸಲು ಜಿಬಿಎ ಮುಖ್ಯ ಆಯುಕ್ತ ಮಹೇಶ್ವರ ರಾವ್ ಅವರಿಗೆ ಸ್ಥಾಯಿ ಸೂಚನೆಗಳನ್ನು ನೀಡಿದ್ದಾರೆ ಎಂದು ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಈ ಕುರಿತು ಮಾತನಾಡಿರುವ ಸಿಇಒ ಕರೀ ಗೌಡ ಪದೇ ಪದೇ ಎಚ್ಚರಿಕೆ ನೀಡಿದ್ದರೂ, ಅನೇಕ ಜನರು ನಮ್ಮ ವಾಹನಗಳಿಗೆ ತ್ಯಾಜ್ಯವನ್ನು ಹಸ್ತಾಂತರಿಸುವ ಬದಲು ಎಲ್ಲೆಂದರಲ್ಲಿ ಕಸ ಹಾಕುತ್ತಲೇ ಇದ್ದಾರೆ. ಹಾಗಾಗಿ ಅಂತಹವರಿಗೆ ಬುದ್ದಿ ಕಲಿಸುವ ಮೂಲಕ ಅವರಿಗೆ ಜವಾಬ್ದಾರಿಯನ್ನು ಅರಿವು ಮಾಡಿಸುವ ಉದ್ದೇಶದಿಂದ ಇದು ಕೊನೆಯ ಆಯ್ಕೆಯಾಗಿದೆ ಎಂದು ಹೇಳಿದ್ದಾರೆ.

## ಬೆಂಗಳೂರು ರಸ್ತೆ ಬದಿ ಕಸ ಎಸೆಯುವವರ ಎಡೆಮುರಿ ಕಟ್ಟಲು ಬೆಂಗಳೂರು ಘನತ್ಯಾಜ್ಯ ನಿರ್ವಹಣಾ ಸಂಸ್ಥೆ ಮಾಸ್ಟರ್ ಪ್ಲಾನ್



**ಎಲ್ಲೆಂದರಲ್ಲಿ ಕಸ ಹಾಕುವ ಮುನ್ನ ಎಚ್ಚರ!**

ಅಧಿಕಾರಿಗಳ ಪ್ರಕಾರ ಬೆಂಗಳೂರಿನ 198 ವಾರ್ಡ್‌ಗಳಲ್ಲಿ ಮಾರ್ಷಲ್‌ಗಳನ್ನು ನಿಯೋಜಿಸಲಾಗಿದೆ. ಇವರು ಕಸ ಎಸೆಯುವವರನ್ನು ಗುರುತಿಸುವ, ವೀಡಿಯೋ ರೆಕಾರ್ಡಿಂಗ್ ಮಾಡುವ ಕಾರ್ಯವನ್ನು ನಿರ್ವಹಿಸುತ್ತಾರೆ. ನಂತರ, ಕಪ್ಪು ಚುಕ್ಕೆಗಳಲ್ಲಿ ಕಂಡುಬರುವ ಕಸವನ್ನು ಆಯಾ ಮನೆಗಳಿಗೆ ಹಿಂತಿರುಗಿಸಲಾಗುತ್ತದೆ. ಇನ್ನು, ಈ ಯೋಜನೆ ಮನೆ-ಮನೆಗೆ ತೆರಳಿ ತ್ಯಾಜ್ಯ ಸಂಗ್ರಹಣಾ ವ್ಯವಸ್ಥೆ ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುವ ಪ್ರದೇಶಗಳಲ್ಲಿ ಮಾತ್ರ ನಡೆಯಲಿದೆ ಎಂದು ತ್ಯಾಜ್ಯ ನಿರ್ವಹಣಾ ಸಂಸ್ಥೆ ಹೇಳಿದೆ.

## ಕಾಂಗ್ರೆಸ್ ಸರಕಾರದಿಂದ ಒಳಮೀಸಲಾತಿ ಆದೇಶ ರದ್ದು ಮಾಡುವ ದುರುದ್ದೇಶ

• **ಉದಯವಾಹಿನಿ, ಬೆಂಗಳೂರು**

ಈಗಿನ ವೇಳಾಪಟ್ಟಿ ಪ್ರಕಾರ ಡಿಸೆಂಬರ್ 8ಕ್ಕೆ ಬೆಳಗಾವಿ ಅಧಿವೇಶನ ಆರಂಭ ಆಗಲಿದೆ. ಅಷ್ಟರೊಳಗೆ ಸುಪ್ರೀಂ ಕೋರ್ಟ್, ಹೈಕೋರ್ಟಿನಲ್ಲಿ ಕೇಸುಗಳು ದಾಖಲಾಗಿ ಒಳಮೀಸಲಾತಿ ಕುರಿತ ಆದೇಶ ರದ್ದಾಗಬೇಕೆಂಬುದೇ ಸಿದ್ದರಾಮಯ್ಯರ ಸರಕಾರದ ದುರುದ್ದೇಶ ಎಂದು ಮಾಜಿ ಉಪ ಮುಖ್ಯಮಂತ್ರಿ ಹಾಗೂ ಸಂಸದ ಗೋವಿಂದ ಕಾರಜೋಳ ಅವರು ಆರೋಪಿಸಿದ್ದಾರೆ.

ಬಿಜೆಪಿ ರಾಜ್ಯ ಕಾರ್ಯಾಲಯ ಜಗನ್ನಾಥ ಭವನದಲ್ಲಿ ಇಂದು ಮಾಧ್ಯಮಗಳ ಜೊತೆ ಮಾತನಾಡಿದ ಅವರು, ಕಳೆದ 30 ವರ್ಷಗಳಿಂದ ರಾಜ್ಯದಲ್ಲಿ ಪರಿಶಿಷ್ಟ ಜನಾಂಗ, ಜಾತಿಯಲ್ಲಿ ಒಳ ಮೀಸಲಾತಿ ಜಾರಿ ಆಗಬೇಕು. 101 ಜಾತಿಗಳಿಗೆ ಸಾಮಾಜಿಕ ನ್ಯಾಯದಲ್ಲಿ ಎಲ್ಲರಿಗೂ ಮೀಸಲಾತಿ ಸೌಲಭ್ಯ ಸಿಗಬೇಕೆಂದು ನಿರಂತರ ಹೋರಾಟ ಮಾಡಿದ್ದರ ಪ್ರಯುಕ್ತ ನರೇಂದ್ರ ಮೋದಿ ಜೀ ಅವರ ಸರಕಾರವು ಮುತುವರ್ಜಿ ವಹಿಸಿ ನ್ಯಾಯ ದೊರಕಿಸಿ ಕೊಟ್ಟು ಇಂದಿಗೆ ಒಂದು ವರ್ಷ 3 ತಿಂಗಳಾಗಿದೆ. ಆದರೂ ಕರ್ನಾಟಕದ




ಸಿದ್ದರಾಮಯ್ಯರ ನೇತೃತ್ವದ ಕಾಂಗ್ರೆಸ್ ಸರಕಾರವು ವಿಳಂಬ ನೀತಿ ಜೊತೆಗೆ ಗೊಂದಲ ಸೃಷ್ಟಿಸುತ್ತಿದೆ ಎಂದು ಆಕ್ಷೇಪಿಸಿದರು.

ದೋಷಭರಿತ ಆದೇಶಗಳನ್ನು ಮಾಡುತ್ತಿದೆ. ಈ ಮೂಲಕ ಪರಿಶಿಷ್ಟ ಜನಾಂಗದವರಿಗೆ ಅನ್ಯಾಯ ಮಾಡುತ್ತಿದೆ ಎಂದು ಆರೋಪಿಸಿದರು. ಸಿದ್ದರಾಮಯ್ಯರ ಸರಕಾರದ ಆದೇಶವನ್ನು ಪ್ರಶ್ನಿಸಿ ಈಚೆಗೆ ಹೈಕೋರ್ಟಿನಲ್ಲಿ ಕೇಸ್ ಬಂದಾಗ ರಾಜ್ಯ ಸರಕಾರದ ಕಡೆಯಿಂದ ಯಾರೂ ಹಾಜರಾಗಿಲ್ಲ; ಹೀಗಾಗಿ ಆದೇಶ ಭಾಗಶಃ ತಡೆಯಾಗಿದೆ ಎಂದು ವಿವರಿಸಿದರು.

**101 ಜಾತಿಯ ಹಿತ ಬಯಸುತ್ತಿಲ್ಲ..**

**ಒಂದು ಜಾತಿಯ ಹಿತಕ್ಕಾಗಿ ಸಿದ್ದರಾಮಯ್ಯನವರು ಈ ದೊಂಬರಾಟ ಮಾಡುತ್ತಿದ್ದಾರೆ. 101 ಜಾತಿಯ ಹಿತ ಕಾಯಲು ಅವರು ಬಯಸುತ್ತಿಲ್ಲ ಎಂದು ಗೋವಿಂದ ಕಾರಜೋಳ ಅವರು ಆರೋಪ ವ್ಯಕ್ತಪಡಿಸಿದರು. ಆರ್ಥಿಕ ಸಂಕಷ್ಟ ಇರುವುದರಿಂದ ನೇಮಕಾತಿ ಮುಂದೆ ಹೋದಷ್ಟೂ ಅವರಿಗೆ ಒಳ್ಳೆಯದೆಂಬ ಭಾವನೆ ಇದೆ. ಖಜಾನೆ ಖಾಲಿ ಆಗಿದೆ. ನೇಮಕಾತಿ ಮಾಡಲೂ ಅವರು ತಯಾರಿಲ್ಲ ಎಂದು ದೂರಿದರು.**

ಮತ್ತೆ ಈ ಜನಾಂಗಕ್ಕೆ ಮೋಸ ಮಾಡಲು ಸಿದ್ದರಾಮಯ್ಯರ ಸರಕಾರ ಇವತ್ತು ಸಂಪುಟ ಸಭೆ ನಡೆಸುತ್ತಿದೆ. ಕರಡು ಮಸೂದೆ ಮಂಡಿಸಲು ಸಿದ್ಧತೆ ಮಾಡಿಕೊಂಡಿದ್ದಾರೆ. 5ರೊಳಗೆ ಹೈಕೋರ್ಟಿಗೆ ರಾಜ್ಯ ಸರಕಾರ ತನ್ನ ವಾದವನ್ನು ಮಂಡಿಸಲು ಬೇಕಾದ ವಿವರಣೆ ನೀಡಬೇಕಾಗಿದೆ ಎಂದು ತಿಳಿಸಿದರು.

## ಆಕ್ಟೀವ್ ಆದ ಸಿದ್ದರಾಮಯ್ಯ ಬಣ, ರಾಜಣ್ಣ ಮನೆಯಲ್ಲಿ ಸಿಎಂಗೆ ಔತಣಕೂಟ

### ■ ಸಚಿವ ಸಂಪುಟ ಪುನಾರಚನೆ ಸೇರಿದಂತೆ ಹಲವು ವಿಚಾರಗಳ ಬಗ್ಗೆ ಚರ್ಚೆ ನಡೆಯುವ ಸಾಧ್ಯತೆ

• **ಉದಯವಾಹಿನಿ ಬೆಂಗಳೂರು**

ರಾಜ್ಯ ರಾಜಕೀಯದಲ್ಲಿ ನಡೆಯುತ್ತಿರುವ ಬೆಳವಣಿಗೆಗಳು ದಿನಕ್ಕೊಂದು ತಿರುವು ಪಡೆದುಕೊಳ್ಳುತ್ತಿದೆ. ಸಿಎಂ ಸಿದ್ದರಾಮಯ್ಯ ಬಣ ಹಾಗೂ ಡಿಸಿಎಂ ಡಿಕೆ ಶಿವಕುಮಾರ್ ಬಣ ತೆರೆಮರೆಯಲ್ಲಿ ನಾನಾ ರೀತಿಯ ತಂತ್ರಗಾರಿಕೆ ಪ್ರಯೋಗ ಮಾಡುತ್ತಿದೆ. ಈ ನಡುವೆ ಸಿದ್ದರಾಮಯ್ಯ ಬಣ ಆಕ್ಟೀವ್ ಆಗಿದ್ದು, ನವೆಂಬರ್ 7 ರಂದು ಕೆ ಎನ್ ರಾಜಣ್ಣ ನಿವಾಸದಲ್ಲಿ ಸಿಎಂಗಾಗಿ ಔತಣಕೂಟ ಹಮ್ಮಿಕೊಳ್ಳಲಾಗಿದೆ.

ನವೆಂಬರ್ 7 ರಂದು ಸಿಎಂ ಸಿದ್ದರಾಮಯ್ಯ ತುಮಕೂರು ಪ್ರವಾಸ ಕೈಗೊಳ್ಳಲಿದ್ದಾರೆ. ಇದೇ ಸಂದರ್ಭದಲ್ಲಿ ಕೆ ಎನ್ ರಾಜಣ್ಣ ಅವರ ಮನೆಗೂ ಭೇಟಿ ಕೊಡಲಿದ್ದಾರೆ. ಸಿಎಂ ಸಿದ್ದರಾಮಯ್ಯಗೋಸ್ಕರ ರಾಜಣ್ಣ ಅವರು ಔತಣಕೂಟವನ್ನು ಆಯೋಜಿಸಿದ್ದಾರೆ. ಈ ಔತಣಕೂಟದಲ್ಲಿ ಸಿದ್ದರಾಮಯ್ಯ ಅವರ ಆಪ್ತ ಸಚಿವರು ಭಾಗಿಯಾಗುವ ಸಾಧ್ಯತೆ ಇದೆ.

**ಕುತೂಹಲ ಕೆರಳಿಸಿದ ತುಮಕೂರು ಪ್ರವಾಸ**



**ಔತಣಕೂಟ ನೆಪದಲ್ಲಿ ಚರ್ಚೆ?**

ರಾಜಣ್ಣ ನಿವಾಸದಲ್ಲಿ ಹಮ್ಮಿಕೊಳ್ಳಲಾಗಿರುವ ಔತಣಕೂಟ ನಾನಾ ರೀತಿಯ ಚರ್ಚೆಗೆ ಗ್ರಾಸವಾಗುತ್ತಿದೆ. ಔತಣಕೂಟದ ಹೆಸರಿನಲ್ಲಿ ರಾಜ್ಯ ರಾಜಕಾರಣದ ಸದ್ಯದ ಬೆಳವಣಿಗೆಗಳ ಬಗ್ಗೆ ಚರ್ಚೆ ನಡೆಸುವ ಉದ್ದೇಶ ಇದರ ಹಿಂದೆ ಇದೆ ಎನ್ನಲಾಗುತ್ತಿದೆ. ಸಚಿವ ಸಂಪುಟ ಪುನಾರಚನೆ ಸೇರಿದಂತೆ ಇತರ ವಿಚಾರಗಳ ಬಗ್ಗೆ ಚರ್ಚೆ ಆಗುವ ಸಾಧ್ಯತೆ ಇದೆ.

**ಪುತ್ರನ ಭವಿಷ್ಯ ರಾಜಣ್ಣ ಚಿಂತೆ!**

ಮತಕಳ್ಳತನದ ಕುರಿತಾಗಿ ಕಾಂಗ್ರೆಸ್ ಹೋರಾಟ ನಡೆಸುತ್ತಿರುವ ಸಂದರ್ಭದಲ್ಲಿ ಕೆ ಎನ್ ರಾಜಣ್ಣ ಅವರು ಕಾಂಗ್ರೆಸ್ ಪಕ್ಷದ ನಿಲುವಿಗೆ ವಿರುದ್ಧವಾದ ಹೇಳಿಕೆ ನೀಡಿದ್ದರು. ಈ ಕಾರಣಕ್ಕಾಗಿ ಏಕಾಏಕಿ ಅವರನ್ನು ಸಂಪುಟದಿಂದ ವಜಾ ಮಾಡಲಾಗಿತ್ತು.

**ರಾಜಕೀಯದಲ್ಲಿ ಮಹತ್ವದ ಬದಲಾವಣೆ**

**ರಾಜ್ಯದಲ್ಲಿ ಸಚಿವ ಸಂಪುಟ ಪುನಾರಚನೆಗೆ ಹೈಕಮಾಂಡ್ ಒಪ್ಪಿಗೆ ನೀಡಿದಲ್ಲಿ ಅಥವಾ ನೀಡದಿದ್ದಲ್ಲಿ ಯಾವ ರೀತಿಯ ಬದಲಾವಣೆಗಳು ಆಗಲಿವೆ ಎಂಬುದರ ಬಗ್ಗೆ ಮಾಜಿ ಸಚಿವ ಕೆ ಎನ್ ರಾಜಣ್ಣ ಅವರು ಭವಿಷ್ಯ ನುಡಿದಿದ್ದಾರೆ. ರಾಜ್ಯದಲ್ಲಿ ನಾಯಕತ್ವ ಬದಲಾವಣೆಯ ಕುರಿತು ತೀವ್ರ ಚರ್ಚೆಗಳು ನಡೆಯುತ್ತಿರುವ ಈ ಸಂದರ್ಭದಲ್ಲಿ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಪರ ಮತ್ತು ವಿರೋಧದ ಚರ್ಚೆಗಳು ಆರಂಭಗೊಂಡಿವೆ. ಸಚಿವ ಸಂಪುಟ ಪುನಾರಚನೆಯ ಬಗ್ಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಸೂಚನೆ ನೀಡಿದ ನಂತರ ರಾಜ್ಯ ಕಾಂಗ್ರೆಸ್ಸಿನಲ್ಲಿ ಅನೇಕ ಹೊಸ ಬೆಳವಣಿಗೆಗಳು ಆರಂಭವಾಗಿವೆ. ಕೆಲವು ತಿಂಗಳುಗಳ ಹಿಂದೆ, ಸಂಪುಟದಿಂದ ವಜಾಗೊಂಡಿದ್ದ ಕೆ ಎನ್ ರಾಜಣ್ಣ ಅವರನ್ನು ಮತ್ತೆ ಸಚಿವ ಸಂಪುಟಕ್ಕೆ ಸೇರಿಸುವ ಪ್ರಯತ್ನಗಳು ನಡೆಯುತ್ತಿವೆ. ಸಿದ್ದರಾಮಯ್ಯ ಅವರ ಬೆಂಬಲಿಗರಾದ ಸಚಿವರು ಈ ಕುರಿತು ಗೌಪ್ಯ ಸಭೆಗಳನ್ನು ನಡೆಸಿ ಮಾತುಕತೆ ಮಾಡಿದ್ದಾರೆ ಎಂಬ ಮಾಹಿತಿ ಇದೆ.**

ಇದರಿಂದ ರಾಜಣ್ಣ ಅವರ ರಾಜಕೀಯಕ್ಕೆ ಹಿನ್ನಡೆ ಉಂಟಾಗಿದೆ. ಮತ್ತೊಂದು ಕಡೆಯಲ್ಲಿ ಪುತ್ರ ರಾಜೇಂದ್ರ ಅವರ ರಾಜಕೀಯ ಭವಿಷ್ಯದ ಬಗ್ಗೆಯೂ ರಾಜಣ್ಣ ಚಿಂತಿತರಾಗಿದ್ದಾರೆ. ಒಂದು ವೇಳೆ ಸಚಿವ ಸಂಪುಟ ಪುನಾರಚನೆ ಆದರಲ್ಲಿ ನನಗೆ ಅವಕಾಶ ಸಿಗದೆ ಇದ್ದಲ್ಲಿ, ಪುತ್ರನಿಗೆ ಸಂಪುಟದಲ್ಲಿ ಅವಕಾಶ ಕೊಡಬೇಕು ಎಂಬ ಲೆಕ್ಕಾಚಾರ ಇದೆ. ಈ ಎಲ್ಲಾ ಹಿನ್ನೆಲೆಯಲ್ಲಿ ರಾಜಣ್ಣ ಮನೆಯಲ್ಲಿ ಸಿಎಂ ಸಿದ್ದರಾಮಯ್ಯ ಅವರಿಗೆ ಆಯೋಜಿಸಿರುವ ಔತಣಕೂಟ ಸಾಕಷ್ಟು ಕುತೂಹಲಕ್ಕೆ ಕಾರಣವಾಗಿದೆ.

**ಗೌಪ್ಯ ಸಭೆಗಳು:** ಸಿಎಂ ಸಿದ್ದರಾಮಯ್ಯ ಅವ ಆಪ್ತ ಸಚಿವರು ಗೌಪ್ಯ ಸಭೆಗಳನ್ನು ನಡೆಸುತ್ತಿದ್ದಾರೆ. ಈಗಾಗಲೇ ಗೃಹ ಸಚಿವ ಡಾ. ಜಿ ಪರಮೇಶ್ವರ್ ಮತ್ತು ಎಚ್ ಸಿ ಮಹದೇವಪ್ಪ ಅವರು ಗೌಪ್ಯ ಸಭೆ ನಡೆಸಿ ಕೆಲವು ವಿಚಾರಗಳ ಬಗ್ಗೆ ಮಾತುಕತೆ ನಡೆಸಿದ್ದಾರೆ. ದಲಿತ ಸಿಎಂ ವಿಚಾರ ಮುನ್ನೆಲೆಗೆ ಬರುತ್ತಿದ್ದ ಸಂದರ್ಭದಲ್ಲಿ ಅವರ ಸಭೆ ಕುತೂಹಲಕ್ಕೆ ಕಾರಣವಾಗಿದೆ. ಒಟ್ಟಿನಲ್ಲಿ ಸಿದ್ದರಾಮಯ್ಯ ಬಣ ಸಕ್ರಿಯವಾಗುತ್ತಿದೆ. ನವೆಂಬರ್ 14 ಎಂದು ಸಿಎಂ ಸಿದ್ದರಾಮಯ್ಯ ಅವರು ದೆಹಲಿಗೆ ತೆರಳುತ್ತಿದ್ದಾರೆ. ದೆಹಲಿಯಲ್ಲಿ ಹೈಕಮಾಂಡ್ ನಾಯಕರನ್ನು ಭೇಟಿ ಮಾಡಿ ಮಾತುಕತೆ ನಡೆಸಲಿದ್ದಾರೆ. ಸಿಎಂ ದೆಹಲಿ ಭೇಟಿ ಬಳಿಕ ಸದ್ಯ ರಾಜ್ಯದಲ್ಲಿ ನಡೆಯುತ್ತಿರುವ ರಾಜಕೀಯ ಬೆಳವಣಿಗೆಗಳು ಯಾವ ದಿಕ್ಕನ್ನು ಪಡೆದುಕೊಳ್ಳಲಿದೆ ಎಂಬುವುದು ಬಹುತೇಕ ಖಚಿತವಾಗಲಿದೆ.

**ಮುಸ್ಲಿಮರು ಕಾಂಗ್ರೆಸ್ಸಿಗೆ ಯಾಕೆ ವೋಟ್ ಹಾಕ್ತಾರೆ : ಕಾರಣ ವಿವರಿಸಿ ರಾಜಣ್ಣ:** ಮುಸ್ಲಿಂ ಸಮುದಾಯದವರು ತಮ್ಮ ಮತವನ್ನು ಕಾಂಗ್ರೆಸ್ ಪಕ್ಷಕ್ಕೆ ಮಾತ್ರ ಸೀಮಿತಗೊಳಿಸಿರುವುದಕ್ಕೆ ಕಾರಣವನ್ನು ವಿವರಿಸಿದ ಕೆ ಎನ್ ರಾಜಣ್ಣ ಅವರು, ಮುಸ್ಲಿಮರಿಗೆ ಬೇರೆ ಆಯ್ಕೆಗಳಿಲ್ಲದ ಕಾರಣ ಕಾಂಗ್ರೆಸ್‌ಗೆ ಮತ ಹಾಕುತ್ತಿದ್ದಾರೆ ಎಂದಿದ್ದಾರೆ. ಈ ಹೇಳಿಕೆಗೆ ಪ್ರತಿಕ್ರಿಯಿಸಿದ ಬಿಜೆಪಿ ನಾಯಕ ಆರ್ ಅಶೋಕ ಅವರು, ರಾಜಣ್ಣ ತಮ್ಮ ಸತ್ಯವಂತಿಕೆಯಿಂದಾಗಿ ಸಚಿವ ಸ್ಥಾನವನ್ನು ಕಳೆದುಕೊಂಡರು ಎಂದು ಟೀಕಿಸಿದ್ದಾರೆ.

**ಈ ದಿನದ ದರ** ಪೆಟ್ರೋಲ್: 103.50 ₹/L | ಡೀಸೆಲ್ : 90.03 ₹/L | ಬಂಗಾರ: ₹12,148/Gram24ct ₹11,135/Gram22ct | ಬೆಳ್ಳಿ: ₹151.00/Gram



## ಸಿದ್ಧಸೂಕ್ತಿ

**ಡಾ ಆರೂಢಭಾರತೀ ಸ್ವಾಮೀಜಿ**
**ಶ್ರೀ ಸಿದ್ಧಾರೂಢ ಮಿಷನ್ ಆಶ್ರಮ**
**ರಾಮೋಹಳ್ಳಿ**

ಒಬ್ಬ ಹೇಳಿದ : ಸರ್ವದೇವನಮಸ್ಕಾರಃ ಕೇಶವಂ ಪ್ರತಿ ಗಚ್ಛತಿ = ಎಲ್ಲಾ ದೇವರ ನಮಸ್ಕಾರ ಕೃಷ್ಣನಿಗೇ ಸೇರುತ್ತದೆ.
ಮತ್ತೊಬ್ಬ ಹೇಳಿದ: ಸರ್ವ ದೇವನಮಸ್ಕಾರಃ ಈಶ್ವರಂ ಪ್ರತಿ ಗಚ್ಛತಿ = ಎಲ್ಲಾ ದೇವರ ನಮಸ್ಕಾರ ಈಶ್ವರನಿಗೆ ಸೇರುತ್ತದೆ. ಈಗ ಜಗಳ ಯಾವುದು ಸರಿ? ಯಾವುದು ತಪ್ಪು?
ಉತ್ತರ : ಎರಡೂ ಸರಿ.
ಅದ್ಹೇಗೆ?
ಉತ್ತರ : ದೇವನೊಬ್ಬ ನಾಮ ಹಲವು.

# ತನಿಖೆಗೆ ಸಹಕರಿಸುವಂತೆ ಓಲಾ ಸಂಸ್ಥೆಯ ಅಧಿಕಾರಿಗಳಿಗೆ ಕರ್ನಾಟಕ ಹೈಕೋರ್ಟ್ ಸೂಚನೆ

• **ಉದಯವಾಹಿನಿ, ಬೆಂಗಳೂರು**

ಇಂಜಿನಿಯರ್ ಕೆ. ಅರವಿಂದ್ ಆತ್ಮಹತ್ಯೆಗೆ ಸಂಬಂಧಿಸಿದಂತೆ ನಡೆಯುತ್ತಿರುವ ಕ್ರಿಮಿನಲ್ ತನಿಖೆಗೆ ಸಹಕರಿಸುವಂತೆ ಓಲಾ ಎಲೆಕ್ಟ್ರಿಕ್ ಟೆಕ್ನಾಲಜೀಸ್ ಪ್ರೈವೇಟ್ ಲಿಮಿಟೆಡ್‌ನ ಸಿಇಒ ಮತ್ತು ಎಂಡಿ ಭವಿಶ್ ಅಗರ್ವಾಲ್ ಮತ್ತು ಹೋಮೋಲೋಗೇಶನ್ ಇಂಜಿನಿಯರಿಂಗ್ ಮುಖ್ಯಸ್ಥ ಸುಬ್ರತ್ ಕುಮಾರ್ ದಾಸ್ ಅವರಿಗೆ ಕರ್ನಾಟಕ ಹೈಕೋರ್ಟ್ ನಿರ್ದೇಶಿಸಿದೆ.

ತಮ್ಮ ವಿರುದ್ಧ ದಾಖಲಾಗಿರುವ ಎಫ್‌ಐಆರ್ ಪ್ರಶ್ನಿಸಿ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಮೊಹಮ್ಮದ್ ನವಾಜ್, ಅರ್ಜಿದಾರರಿಗೆ ನೀಡಲಾದ ಮಧ್ಯಂತರ ರಕ್ಷಣೆಯನ್ನು ನವೆಂಬರ್ 17 ರವರೆಗೆ ವಿಸ್ತರಿಸಿ, ತನಿಖೆಯ ನೆಪದಲ್ಲಿ ಕಿರುಕುಳ ನೀಡದಂತೆ ಪೊಲೀಸರಿಗೆ ನಿರ್ದೇಶನ ನೀಡಿದರು.



ಅರವಿಂದ್ ಅವರ ಸಹೋದರ ಅಶ್ವಿನ್ ಕಣ್ಣನ್ ಅವರು ಸುಬ್ರಹ್ಮಣ್ಯಪುರ ಪೊಲೀಸರಿಗೆ ಸಲ್ಲಿಸಿದ ದೂರಿನಲ್ಲಿ ಆತ್ಮಹತ್ಯೆಗೆ ಪ್ರಚೋದನೆ ನೀಡಿದ್ದಾರೆ ಎಂದು ಆರೋಪಿಸಲಾಗಿದ್ದು, ಬಿಎನ್ಎಸ್ ಕಾಯ್ದೆಯ ಸೆಕ್ಷನ್ 108ರ ಅಡಿಯಲ್ಲಿ ಎಫ್‌ಐಆರ್ ದಾಖಲಾಗಿದೆ. ಅರ್ಜಿದಾರರು ಕೆಲಸದ ಸ್ಥಳದಲ್ಲಿ ಕಿರುಕುಳ ನೀಡುತ್ತಿದ್ದಾರೆ. ಅಲ್ಲದೆ, ತನ್ನ ವೇತನ ಮತ್ತು ಇತರೆ ಭತ್ಯೆಯನ್ನು ತನಗೆ ನೀಡದೆ ಕಿರುಕುಳ ನೀಡುತ್ತಿದ್ದಾರೆ.

ಇದರಿಂದ ಬೇಸತ್ತು ಆತ್ಮಹತ್ಯೆ ಮಾಡಿಕೊಂಡಿರುವುದಾಗಿ ಸಂತ್ರಸ್ತ ಡೆತ್‌ನೋಟ್‌ನಲ್ಲಿ ತಿಳಿಸಿದ್ದಾರೆ. ವಿಚಾರಣೆಯ ಸಮಯದಲ್ಲಿ, ಅರ್ಜಿದಾರರು ಡೆತ್‌ನೋಟ್‌ನ ಸತ್ಯಾಸತ್ಯತೆಯನ್ನು ಪ್ರಶ್ನಿಸಿದರು.

ಅದನ್ನು ಮೃತರ ಬದಲು ದೂರುದಾರರು ರಚಿಸಿರಬಹುದು ಎಂದು ವಾದಿಸಿದರು. ಅರವಿಂದ್ ಅವರ ಸಾವಿಗೆ ಸಂಬಂಧಿಸಿದ ಚಿತ್ರಗಳು ಮತ್ತು ಸಂದರ್ಶನಗಳ ಪ್ರಸರಣವು ಸಂಸ್ಥೆಯ ಖ್ಯಾತಿಗೆ ಹಾನಿಯುಂಟು ಮಾಡಿದೆ. ಅದರ ಷೇರು ಬೆಲೆಯ ಮೇಲೆ ಪರಿಣಾಮ ಬೀರಿದೆ ಮತ್ತು ಉದ್ಯೋಗಿಗಳ ನಿರ್ಗಮನಕ್ಕೆ ಕಾರಣವಾಗಿದೆ ಎಂದಿದ್ದಾರೆ.

ದೂರುದಾರರ ಪರ ವಕೀಲರು ಓಲಾ ಎಲೆಕ್ಟ್ರಿಕ್ ಅನ್ನು 'ಈಸ್ಟ್ ಇಂಡಿಯಾ ಕಂಪನಿ'ಗೆ ಹೋಲುತ್ತದೆ ಎಂದು ಬಣ್ಣಿಸಿ, ಕಂಪನಿಯ ಅಧಿಕಾರಿಗಳು ತಮ್ಮ ಮೇಲಿನ ಆರೋಪದಿಂದ ತಪ್ಪಿಸಿಕೊಳ್ಳಲು ಯತ್ನಿಸುತ್ತಿದ್ದಾರೆ ಎಂದು ಆರೋಪಿಸಿದರು. ಪೊಲೀಸರು ತನಿಖೆಗಾಗಿ ನೋಟಿಸ್ ನೀಡಿದ್ದರೂ, ಅರ್ಜಿದಾರರು ವಿಚಾರಣೆಗೆ ಹಾಜರಾಗುವ ಬದಲು ಪತ್ರಗಳ ಮೂಲಕ ಮಾತ್ರ ಉತ್ತರಿಸಿದ್ದಾರೆ ಎಂದು ನ್ಯಾಯಾಲಯಕ್ಕೆ ತಿಳಿಸಲಾಯಿತು. ಬಳಿಕ ತನಿಖೆಗೆ ಸಹಕರಿಸುವಂತೆ ನ್ಯಾಯಾಲಯವು ಅರ್ಜಿದಾರರಿಗೆ ಸೂಚಿಸಿತು. ಅರ್ಜಿದಾರರ ವಿರುದ್ಧ ಸಲ್ಲಿಸಲಾದ ಯಾವುದೇ ಅಂತಿಮ ವರದಿಯನ್ನು ಸೂಕ್ತ ಸಮಯದಲ್ಲಿ ಪ್ರಶ್ನಿಸಬಹುದು ಎಂದು ನ್ಯಾಯಾಲಯವು ಹೇಳಿದೆ.

# ರಾಜ್ಯ ಸರ್ಕಾರಕ್ಕೆ ಬಸವರಾಜ ಹೊರಟ್ಟಿ ಆಗ್ರಹ

• **ಉದಯವಾಹಿನಿ, ಬೆಂಗಳೂರು**

ಶಾಲಾ ವಿದ್ಯಾರ್ಥಿಗಳಿಗೆ ಕನಿಷ್ಠ ಉತ್ತೀರ್ಣ ಅಂಕಗಳನ್ನು 35 ಕ್ಕೆ ತರುವಂತೆ ರಾಜ್ಯ ಸರ್ಕಾರಕ್ಕೆ ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿಯವರು ಆಗ್ರಹಿಸಿದ್ದಾರೆ. 33 ಅಂಕಗಳನ್ನುಗಳಿಸಿದ ವಿದ್ಯಾರ್ಥಿಗಳನ್ನು ಉತ್ತೀರ್ಣರೆಂದು ಪರಿಗಣಿಸಲಾಗುತ್ತದೆ ಎಂದು ಸಚಿವ ಮಧು ಬಂಗಾರಪ್ಪ ಅವರು ಈ ಹಿಂದೆ ಹೇಳಿದ್ದರು. ಈ ಕುರಿತು ಪ್ರಾಥಮಿಕ, ಪ್ರೌಢ ಶಿಕ್ಷಣ ಸಚಿವ ಮಧು ಬಂಗಾರಪ್ಪ



ಅವರಿಗೆ ಪತ್ರ ಬರೆದಿರುವ ಹೊರಟ್ಟಿಯವರು, ಇದು ಸರಿಯಾದ ಕ್ರಮವಲ್ಲ. ಇದು ಬೋಧನೆಯ ಗುಣಮಟ್ಟ ಮತ್ತು ಕಲಿಕೆಯ ಗುಣಮಟ್ಟವನ್ನು ತೋರಿಸುತ್ತದೆ ಎಂದು ಹೇಳಿದ್ದಾರೆ. ಬಂಗಾರಪ್ಪ ಅವರ ನಿರ್ಧಾರವನ್ನು ದುರದೃಷ್ಟಕರ.ಸ್ಪರ್ಧಾತ್ಮಕ ಜಗತ್ತಿನಲ್ಲಿ ಯಾವುದೇ ವಿದ್ಯಾರ್ಥಿ ಪರೀಕ್ಷೆಗಳನ್ನು ಎದುರಿಸುವುದು ಮುಖ್ಯ. ಅಂಕಗಳನ್ನು ಗಳಿಸುವುದು ಪರೀಕ್ಷೆಗಳ ಮುಖ್ಯ ಉದ್ದೇಶಗಳಲ್ಲಿ ಒಂದಾಗಿದ್ದರೂ, ಇದು ವಿದ್ಯಾರ್ಥಿಯು ತನ್ನ ಗಮನ, ಧೈರ್ಯ, ಸ್ಮರಣಶಕ್ತಿ, ಕಲಿಕಾ ಸಾಮರ್ಥ್ಯ ಮತ್ತು ಇತರ ಸಮಗ್ರ ಬೆಳವಣಿಗೆಯನ್ನು ಸುಧಾರಿಸಲು ಸಹಾಯ ಮಾಡುತ್ತದೆ. ವಿದ್ಯಾರ್ಥಿಯ ಪ್ರತಿಭೆಯನ್ನು ಹೊರತರಲು ಸಹಾಯ ಮಾಡುತ್ತದೆ. ಇದು ಅವರ ಭವಿಷ್ಯಕ್ಕೆ ಸಹಾಯ ಮಾಡುತ್ತದೆ. ಈ ನಿಟ್ಟಿನಲ್ಲಿ, 35 ಅಂಕಗಳನ್ನು ಬಹಳ ಹಿಂದಿನಿಂದಲೂ ನಿಗದಿಪಡಿಸಲಾಗಿದೆ. ಇದು ವೈಜ್ಞಾನಿಕ ಮಾನದಂಡವಾಗಿದೆ. ಅದನ್ನು 33 ಅಂಕಗಳಿಗೆ ಇಳಿಸುವುದು ಸರಿಯಲ್ಲ ಎಂದು ತಿಳಿಸಿದ್ದಾರೆ.

# ತಂದೆಯ ಭಾವುಕ ಪೋಸ್ಟ್ ವೈರಲ್ ಬಳಿಕ ಎಸ್‌ಐ, ಕಾನ್‌ಸ್ಟೆಬಲ್ ಅಮಾನತು!

• **ಉದಯವಾಹಿನಿ, ಬೆಂಗಳೂರು**

ತನ್ನ ಇದ್ದೊಬ್ಬಳೇ ಮಗಳು ಸಾವಿಗೀಡಾದ ಸಮಯದಲ್ಲಿ ಎದುರಿಸಿದ ಕಿರುಕುಳ ಭ್ರಷ್ಟಾಚಾರವನ್ನು ಎದುರಿಸಿದ ಬಗ್ಗೆ ತಂದೆಯೊಬ್ಬರು ಸಾಮಾಜಿಕ ಮಾಧ್ಯಮದಲ್ಲಿ ಅಳಲು ತೋಡಿಕೊಂಡಿದ್ದ ಪೋಸ್ಟ್ ವೈರಲ್ ಆದ ನಂತರ, ಪೊಲೀಸ್ ಸಬ್ ಇನ್ಸ್‌ಪೆಕ್ಟರ್ ಮತ್ತು ಕಾನ್‌ಸ್ಟೆಬಲ್‌ರನ್ನು ಅಮಾನತುಗೊಳಿಸಲಾಗಿದೆ. ಭಾರತ್ ಪೆಟ್ರೋಲಿಯಂ ಕಾರ್ಪೊರೇಷನ್ ಲಿಮಿಟೆಡ್‌ನ (ಬಿಪಿಸಿಎಲ್) ನಿವೃತ್ತ ಮುಖ್ಯ ಹಣಕಾಸು ಅಧಿಕಾರಿ ಶಿವಕುಮಾರ್ ಕೆ ಎಂಬುವವರು ಸೆಪ್ಟೆಂಬರ್‌ನಲ್ಲಿ ತಮ್ಮ 34 ವರ್ಷದ ಮಗಳು ಮೆದುಳಿನಲ್ಲಿನ ರಕ್ತಸ್ರಾವದಿಂದಾಗಿ ಮೃತಪಟ್ಟ ನಂತರ ಸಂಕಷ್ಟದ ಸಮಯದಲ್ಲಿಯೂ ತಾವು ಅನುಭವಿಸಿದ ಯಾತನೆಯನ್ನು ಲಿಂಕ್ಡ್‌ಇನ್ ಪೋಸ್ಟ್‌ನಲ್ಲಿ ಹಂಚಿಕೊಂಡಿದ್ದರು. ಈಗ ಅಳಿಸಲಾಗಿರುವ ಪೋಸ್ಟ್‌ನಲ್ಲಿ, ಆಂಬ್ಯುಲೆನ್ಸ್ ಸೇವೆಯಿಂದ ಹಿಡಿದು ಎಫ್‌ಐಆರ್ ಪ್ರತಿ, ಅಂತ್ಯಕ್ರಿಯೆ ಮತ್ತು ಮರಣ ಪ್ರಮಾಣಪತ್ರ ಪಡೆಯುವವರೆಗೂ ಪ್ರತಿ ಹಂತದಲ್ಲಿಯೂ ಅಧಿಕಾರಿಗಳು ಲಂಚಕ್ಕೆ ಬೇಡಿಕೆ ಇಟ್ಟಿದ್ದರು ಎಂದು ಶಿವಕುಮಾರ್ ಆರೋಪಿಸಿದ್ದರು. ಬೆಳ್ಳಂದೂರು ಪೊಲೀಸ್ ಠಾಣೆಯ ಇನ್ಸ್‌ಪೆಕ್ಟರ್ ಮತ್ತು ಕಾನ್‌ಸ್ಟೆಬಲ್ ಲಂಚ ಕೇಳಿದ್ದರು ಮತ್ತು ನಮ್ಮೊಂದಿಗೆ ಅತ್ಯಂತ ಕೆಟ್ಟದಾಗಿ ನಡೆದುಕೊಂಡರು ಎಂದು ಆರೋಪಿಸಿದ್ದರು.

# 1.85 ಲಕ್ಷ ರೂ. ಫೋನ್ ಬುಕ್ ಮಾಡಿದ್ದ ಟೆಕ್ಕಿಗೆ ಶಾಕ್



• **ಉದಯವಾಹಿನಿ, ಬೆಂಗಳೂರು**

ಆನ್‌ಲೈನ್‌ನಲ್ಲಿ 1.85 ಲಕ್ಷ ರೂ. ಮೌಲ್ಯದ ಸ್ಯಾಮ್‌ಸಂಗ್ ಫೋನ್ ಬುಕ್ ಮಾಡಿದ್ದ ಟೆಕ್ಕಿಗೆ ಡೆಲಿವರಿ ಬಾಕ್ಸ್‌ನಲ್ಲಿ ಕಲ್ಲಿಟ್ಟು ವಂಚಿಸಿರುವ ಘಟನೆ ಬೆಂಗಳೂರಿನಲ್ಲಿ ನಡೆದಿದೆ. ಸಾಫ್ಟ್‌ವೇರ್ ಇಂಜಿನಿಯರ್ ಪ್ರೇಮಾನಂದ್ ವಂಚನೆಗೆ ಒಳಗಾದ ವ್ಯಕ್ತಿ. ಇವರು 1.85 ಲಕ್ಷ ರೂ. ಮೌಲ್ಯದ ಫೋನ್ ಅನ್ನು ಅಮೆಜಾನ್ ಆ್ಯಪ್‌ನಲ್ಲಿ ಬುಕ್ ಮಾಡಿದ್ದರು. ನಿಗದಿ ದಿನಾಂಕದಂತೆ ಆರ್ಡರ್ ಡೆಲಿವರಿಯಾಗಿತ್ತು. ಬಾಕ್ಸ್ ಓಪನ್ ಮಾಡಿ ನೋಡಿದ ಟೆಕ್ಕಿಗೆ ಶಾಕ್ ಆಗಿದೆ. ಮೊಬೈಲ್ ಬಾಕ್ಸ್‌ನಲ್ಲಿ ಚೌಕಾಕಾರದ ಕಲ್ಲನ್ನು ಇಟ್ಟು ವಂಚಿಸಲಾಗಿದೆ. ಫೋನ್‌ಗಾಗಿ ಟೆಕ್ಕಿ ಸಂಪೂರ್ಣ ಹಣ ಪಾವತಿ ಮಾಡಿದ್ದರು. ಡೆಲಿವರಿ ಬಾಯ್‌ಗೆ ಕರೆ ಮಾಡಿದರೆ ರೆಸ್ಪಾನ್ಸ್ ಸಿಕ್ಕಿಲ್ಲ. ಕೊನೆಗೆ ಎನ್‌ಸಿಆರ್‌ಪಿ ಪೋರ್ಟಲ್‌ನಲ್ಲಿ ದೂರು ದಾಖಲಿಸಲಾಗಿದೆ.

ಮೊಬೈಲ್ ಭಾರ ಇರುವಷ್ಟೇ ತೂಕದ ಚೌಕಾಕಾರದ ಕಲ್ಲನ್ನು ಬಾಕ್ಸ್‌ನಲ್ಲಿಟ್ಟು ಟೆಕ್ಕಿಗೆ ವಂಚಿಸಲಾಗಿದೆ. ಈ ಸಂಬಂಧ ಕುಮಾರಸ್ವಾಮಿ ಲೇಔಟ್ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಲಾಗಿದೆ

# ಹೆಸರಘಟ್ಟ ಬಳಿ ಕ್ವಾಂಟಮ್ ಸಿಟಿಗೆ ಭೂಮಿ ಮಂಜೂರು

## ಬೆಂಗಳೂರಿನಲ್ಲಿ ಕ್ವಾಂಟಮ್ ತಂತ್ರಜ್ಞಾನ ಕ್ಷೇತ್ರದಲ್ಲಿ ಹೂಡಿಕೆ ಮಾಡುವಂತೆಯೂ ಉದ್ಯಮಿಗಳಿಗೆ ಆಹ್ವಾನ

• **ಉದಯವಾಹಿನಿ, ಬೆಂಗಳೂರು**

ಉದ್ದೇಶಿತ ಕ್ವಾಂಟಮ್ ಸಿಟಿ ನಿರ್ಮಾಣ ಯೋಜನೆಗೆ ಬೆಂಗಳೂರಿನ ಹೆಸರಘಟ್ಟ ಬಳಿ ಭೂಮಿ ಮಂಜೂರಾಗಿದ್ದು, ಇದರ ಪರಿಣಾಮಕಾರಿ ಅನುಷ್ಠಾನಕ್ಕಾಗಿ ಆ ಕ್ಷೇತ್ರದ ವಿಜ್ಞಾನಿಗಳನ್ನು ಒಳಗೊಂಡ ಟಾಸ್ಕ್‌ಫೋರ್ಸ್ ರಚಿಸಲು ಸರ್ಕಾರ ಮುಂದಾಗಿದೆ.

ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವ ಎನ್.ಎಸ್.ಬೋಸರಾಜು ಈ ಬಗ್ಗೆ ಮಾಹಿತಿ ನೀಡಿದ್ದು, ಸ್ವಿಟ್ಜರ್ಲೆಂಡ್‌ನಲ್ಲಿ ನಡೆದ 'ಸ್ವಿಸ್‌ನೆಕ್ಸ್ ಕ್ವಾಂಟಮ್ ಸಮ್ಮಿಟ್'ನಲ್ಲಿ ಸಾಕಷ್ಟು ಉದ್ಯಮಿಗಳೊಂದಿಗೆ ನಡೆಸಿದ ಮಾತುಕತೆಯು ಫಲಪ್ರದವಾಗಿದೆ. ಇದೇ ವೇಳೆ ಬೆಂಗಳೂರಿನಲ್ಲಿ ಕ್ವಾಂಟಮ್ ತಂತ್ರಜ್ಞಾನ ಕ್ಷೇತ್ರದಲ್ಲಿ ಹೂಡಿಕೆ ಮಾಡುವಂತೆಯೂ ಉದ್ಯಮಿಗಳಿಗೆ ಆಹ್ವಾನ ನೀಡಲಾಯಿತು, ಎಂದು ತಿಳಿಸಿದರು.


☛ ಉದಯವಾಹಿನಿ ಚಿತ್ರ

**ಸಾವಿರಾರು ಕೋಟಿ ರೂ. ವೆಚ್ಚದಲ್ಲಿ ನಿರ್ಮಾಣ**

**1000 ಕೋಟಿ ರೂ. ಅನುದಾನ:** ಮುಖ್ಯವಾಗಿ ಆರೋಗ್ಯ, ಕೃಷಿ, ವಿದ್ಯುತ್ ಕ್ಷೇತ್ರದಲ್ಲಿ ಕ್ವಾಂಟಮ್ ಕಂಪ್ಯೂಟಿಂಗ್ ಬಳಕೆಗೆ ವಿಶೇಷ ಒತ್ತು ನೀಡುವ ಪ್ರಯತ್ನ ನಡೆದಿದೆ. ಉದ್ದೇಶಿತ 'ಕ್ವಾಂಟಮ್ ಸಿಟಿಗೆ 1000 ಕೋಟಿ ರೂ. ಅನುದಾನವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಈಗಾಗಲೇ ಘೋಷಿಸಿದ್ದಾರೆ. ಅದೇ ರೀತಿ ಕೇಂದ್ರ ಸರಕಾರ ಕೂಡ ಈ ಕ್ಷೇತ್ರಕ್ಕೆ 6,000 ಕೋಟಿ ರೂ. ಕಾಯ್ದಿರಿಸಿದೆ, ಎಂದು ತಿಳಿಸಿದರು.

ಕ್ವಾಂಟಮ್ ಕ್ಷೇತ್ರಕ್ಕೆ ಸಂಬಂಧಪಟ್ಟಂತೆ ಸಂಶೋಧನೆಗೆ ಆದ್ಯತೆ ನೀಡಲಾಗಿದೆ. ಕ್ಯೂ-5 ಎಂಬ ಸಂಸ್ಥೆಯು 1336 ಕೋಟಿ ರೂ. ಹೂಡಿಕೆಗೆ ಮುಂದಾಗಿದೆ. ಸಂಶೋಧನಾ ಕೇಂದ್ರ ಸೇರಿದಂತೆ ಪೂರಕ ವ್ಯವಸ್ಥೆ ರೂಪಿಸಿಕೊಳ್ಳಲು ಹೂಡಿಕೆ ಸಂಸ್ಥೆಗಳಿಗೆ ಅಗತ್ಯವಾದ ಭೂಮಿಯನ್ನು ಕೆಐಎಡಿಬಿ ವತಿಯಿಂದ ಹಂಚಿಕೆಗೆ ಪ್ರಯತ್ನಿಸಲಾಗುವುದು,'' ಎಂದು ಹೇಳಿದರು. ಕೆಸ್ಟೆಫ್ಸ್ ವ್ಯವಸ್ಥಾಪಕ ನಿರ್ದೇಶಕ ಸದಾಶಿವ ಪ್ರಭು ಪಾಲ್ಗೊಂಡಿದ್ದರು.

**ಟಾಸ್ಕ್ ಫೋರ್ಸ್ ರಚಿಸಲಾಗುವುದು**

**ವಿಶ್ವದಲ್ಲಿ ಕ್ವಾಂಟಮ್ ತಂತ್ರಜ್ಞಾನಕ್ಕೆ ಹೆಚ್ಚು ಒತ್ತು ನೀಡಲಾಗುತ್ತಿದ್ದು, ನಮ್ಮಲ್ಲೂ ಅವಕಾಶಗಳು ಸಾಕಷ್ಟಿವೆ. ಕ್ವಾಂಟಮ್ ತಂತ್ರಜ್ಞಾನಕ್ಕೆ ಪೂರಕ ಮೂಲಸೌಕರ್ಯ ಅಭಿವೃದ್ಧಿಗೆ ಆದ್ಯತೆ ನೀಡಲಾಗಿದೆ. ಅದಕ್ಕೆಂದೇ ಟಾಸ್ಕ್ ಫೋರ್ಸ್ ರಚಿಸಲಾಗುವುದು, ಎಂದು ಹೇಳಿದರು.**

**ಐಐಎಸ್ಸಿ ಸಂಸ್ಥೆ ಜತೆಗೂಡಿ ಕೋರ್ಸ್**

**ಪ್ರಮುಖವಾಗಿ ಕ್ವಾಂಟಮ್ ಸಂಶೋಧನೆಯಲ್ಲಿ ತೊಡಗಿಕೊಂಡಿರುವ ವಿಶ್ವದ ಪ್ರಮುಖ ಸಂಸ್ಥೆಗಳಾದ ಇಟಿಎಚ್ ಜ್ಯೂರಿಚ್, ಸೆರಿ ಸೇರಿದಂತೆ ನಾನಾ ಸಂಸ್ಥೆಗಳ ಪ್ರತಿನಿಧಿಗಳೊಂದಿಗೆ ಚರ್ಚೆ ಚರ್ಚಿಸಲಾಯಿತು. ಕರ್ನಾಟಕದಲ್ಲಿ ಕ್ವಾಂಟಮ್ ಪರಿಣಿತ ಮಾನವ ಸಂಪನ್ಮೂಲ ಅಭಿವೃದ್ಧಿಗಾಗಿ ಐಐಎಸ್ಸಿ ಸಂಸ್ಥೆ ಜತೆಗೂಡಿ ಕೋರ್ಸ್‌ಗಳನ್ನೂ ಪ್ರಾರಂಭಿಸಲಾಗಿದೆ, ಎಂದು ವಿವರ ನೀಡಿದರು.**

# 13 ರಿಂದ 15 ವರ್ಷದೊಳಗಿನ ಸರ್ಕಾರಿ ಶಾಲಾ ಬಾಲಕಿಯರಿಗೆ HPV ಲಸಿಕೆ ಅಭಿಯಾನ

• **ಉದಯವಾಹಿನಿ, ಬೆಂಗಳೂರು**

ರಾಜ್ಯದ ಮಹಿಳೆಯರಲ್ಲಿ ಇತ್ತೀಚೆಗೆ ಹೆಚ್ಚುತ್ತಿರುವ ಗರ್ಭಕಂಠದ ಕ್ಯಾನ್ಸರ್ ನ್ನು ಕಡಿಮೆ ಮಾಡುವ ಉದ್ದೇಶದಿಂದ, ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನ ವಿಶ್ವವಿದ್ಯಾಲಯ ಸರ್ಕಾರಿ ಶಾಲೆಗಳಲ್ಲಿ 13 ರಿಂದ 15 ವರ್ಷದೊಳಗಿನ ಬಾಲಕಿಯರಿಗೆ ಹ್ಯೂಮನ್ ಪ್ಯಾಪಿಲೋಮವೈರಸ್ ಲಸಿಕೆಗಳನ್ನು ಒದಗಿಸಲು ಖಾಸಗಿ ಹೂಡಿಕೆದಾರರು ಮತ್ತು ವೈದ್ಯರೊಂದಿಗೆ ಚರ್ಚೆ ನಡೆಸುತ್ತಿದೆ.




RGUHSನ ಅಧಿಕಾರಿಯೊಬ್ಬರು ಈ ಬಗ್ಗೆ ಮಾಹಿತಿ ನೀಡಿ, ಈ ಲಸಿಕೆಗಳ ಮಿತಿಯ ಬೆಲೆ ನಿರ್ಧರಿಸಲು, ಲಸಿಕೆಯ ಬ್ರ್ಯಾಂಡ್, ಅದರಲ್ಲಿರುವ ಅಂಶಗಳೇನೇನು ಎಂದು ನಿರ್ಧರಿಸಲು ಒಂದು ವಾರ ತೆಗೆದುಕೊಳ್ಳಬಹುದು.

ವಿವಿಧ ಬ್ರಾಂಡ್‌ಗಳ ಲಸಿಕೆಗಳು 2,000 ರಿಂದ 5,000 ರೂಪಾಯಿಗಳವರೆಗೆ ವಿಭಿನ್ನ ಬೆಲೆ ಶ್ರೇಣಿಗಳನ್ನು ಹೊಂದಿವೆ. ಹೆಣ್ಣುಮಕ್ಕಳಿಗೆ ಲಸಿಕೆ ನೀಡುವ ಮೊದಲು ತಾಯಂದಿರನ್ನು ಪರೀಕ್ಷಿಸಲು ವಿವಿಧ ಸ್ಕ್ರೀನಿಂಗ್ ಕೇಂದ್ರಗಳನ್ನು ಸ್ಥಾಪಿಸಲಾಗುವುದು ಎಂದು ಹೇಳಿದರು.

**ಸುತ್ತೋಲೆ ಬಿಡುಗಡೆ:** ಗರ್ಭಕಂಠದ ಕ್ಯಾನ್ಸರ್ ತಡೆಗಟ್ಟಲು ಲಸಿಕೆ ಹಾಕುವ ಕುರಿತು RGUHS ನಿಂದ ಒಂದು ವಾರದಲ್ಲಿ ಸುತ್ತೋಲೆ ಬಿಡುಗಡೆಯಾಗಲಿದೆ. ಈ ರೋಗದ ಬಗ್ಗೆ ಅಭಿಯಾನಗಳು, ಶಾಲೆಗಳಲ್ಲಿ ಸಿಬ್ಬಂದಿಗೆ ತರಬೇತಿ ನೀಡುವುದು ಮತ್ತು ಜಾಗೃತಿ ಮೂಡಿಸುವುದನ್ನು ರಾಜ್ಯಾದ್ಯಂತ ವೈದ್ಯರು ಮಾಡುತ್ತಾರೆ.

**ಇದು ಒಳ್ಳೆಯ ಉಪಕ್ರಮ ಆದರೆ ಇದರ ಅನುಷ್ಠಾನವನ್ನು ತ್ವರಿತಗೊಳಿಸಬೇಕು. ಮಹಿಳೆಯರಲ್ಲಿ ಗರ್ಭಕಂಠದ ಕ್ಯಾನ್ಸರ್ ಹೆಚ್ಚಾಗಿದ್ದು, ಶೇಕಡಾ 25ರಷ್ಟು ಭಾರತದಲ್ಲಿದೆ. ಗರ್ಭಕಂಠದ ಕ್ಯಾನ್ಸರ್‌ನಿಂದಾಗಿ ವರ್ಷಕ್ಕೆ ಸುಮಾರು 75,000 ಮಹಿಳೆಯರು ಮೃತಪಡುತ್ತಿದ್ದಾರೆ. ಅವುಗಳನ್ನು ಮುಂದುವರಿದ ಹಂತದಲ್ಲಿ ಪತ್ತೆ ಮಾಡಲಾಗುತ್ತದೆ. ಆರಂಭ ಹಂತದಲ್ಲಿ ಪತ್ತೆಹಚ್ಚಿದರೆ ಸಂಪೂರ್ಣವಾಗಿ ತಡೆಗಟ್ಟಬಹುದು ಎಂದು ಸ್ತ್ರೀರೋಗ ತಜ್ಞೆ HPV ಆರೋಗ್ಯ ರಕ್ಷಣಾ ಪ್ರತಿಷ್ಠಾನದ ನಿರ್ದೇಶಕಿ ಡಾ. ಹೇಮಾ ದಿವಾಕರ್ ಹೇಳುತ್ತಾರೆ.**

ಲಸಿಕೆ ಹಾಕುವ ಮೊದಲು ವಿದ್ಯಾರ್ಥಿಗಳನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಬೇಕಾಗುತ್ತದೆ ಎಂದರು.

ಹೆಣ್ಣುಮಕ್ಕಳಿಗೆ ಲಸಿಕೆ ಹಾಕುವಾಗ ಪರೀಕ್ಷಿಸಬೇಕಾದ ಅಂಶಗಳಿವೆಯೇ ಎಂದು ಕೇಳಿದಾಗ, ಇದು ಪೋಲಿಯೊದಂತಹ ಸಾರ್ವತ್ರಿಕ ರೋಗನಿರೋಧಕ ಶಕ್ತಿಯಾಗಿದ್ದು, 9 ರಿಂದ 14 ವರ್ಷ ವಯಸ್ಸಿನ ಹೆಣ್ಣುಮಕ್ಕಳು ಲಸಿಕೆ ಪಡೆಯಲು ಉತ್ತಮ ಸಮಯ. ಅಭಿಯಾನದ ಸಮಯದಲ್ಲಿ HPVನ್ನು ಪತ್ತೆಹಚ್ಚಲು ತಾಯಂದಿರನ್ನು ಪರೀಕ್ಷಿಸಲಾಗುತ್ತದೆ.

# ಬೆಂಬಲಿಸಿದ ನಾಯಕರ ಕುರಿತು ವರದಿ ಸಲ್ಲಿಸುವಂತೆ ಕೈ ಕಮಾಂಡ್ ಸೂಚನೆ

• **ಉದಯವಾಹಿನಿ, ಬೆಂಗಳೂರು**

ಕಾಂಗ್ರೆಸ್ ಸರ್ಕಾರದ ರಾಜಕೀಯದಲ್ಲಿ ನಾಯಕತ್ವ ಬದಲಾವಣೆ ಚರ್ಚೆಗಳ ನಡುವೆ ರಾಹುಲ್ ಗಾಂಧಿ ಬೆಂಗಳೂರಿಗೆ ಆಗಮಿಸುತ್ತಿದ್ದು, ಈ ನಡುವಲ್ಲೇ 100 ಕಾಂಗ್ರೆಸ್ ಭವನಗಳ ನಿರ್ಮಾಣಕ್ಕೆ ಬೆಂಬಲ ನೀಡಿದ ಸಚಿವರು, ಸಂಸದರು ಹಾಗೂ ಶಾಸಕರ ಕುರಿತು ವರದಿ ಸಲ್ಲಿಸುವಂತೆ ಹೈಕಮಾಂಡ್ ಸೂಚನೆ ನೀಡಿದೆ ಎಂದು ತಿಳಿದುಬಂದಿದೆ.



ಉಪಮುಖ್ಯಮಂತ್ರಿ ಮತ್ತು ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ (ಕೆಪಿಸಿಸಿ) ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರು ಮಾತನಾಡಿ, 100 ಕಾಂಗ್ರೆಸ್ ಭವನಗಳ ನಿರ್ಮಾಣಕ್ಕೆ ಬೆಂಬಲಿಸಿದ ಹಾಗೂ ಬೆಂಬಲಿಸಿದ ಸಚಿವರು, ಶಾಸಕರು ಹಾಗೂ ಸಂಸದರ ಕುರಿತು ವರದಿ ಸಲ್ಲಿಸುವಂತೆ ಹೈಕಮಾಂಡ್ ಸೂಚನೆ ನೀಡಿದೆ. ಸೂಚನೆ ಬೆನ್ನಲ್ಲೇ ವರದಿ ಸಿದ್ಧಪಡಿಸುತ್ತಿದ್ದೇವೆ. ಶೀಘ್ರದಲ್ಲೇ ವರದಿಯನ್ನು ಸಲ್ಲಿಸುತ್ತೇವೆಂದು ಹೇಳಿದರು. ಎಂಎಲ್‌ಸಿ ಚುನಾವಣೆಗೆ ಸಿದ್ಧತೆಗಳ ಕುರಿತ ಪ್ರಶ್ನೆಗೆ ಉತ್ತರಿಸಿ, ಪ್ರತಿ ಸ್ಥಾನಕ್ಕೆ 5-6 ಆಕಾಂಕ್ಷಿಗಳಿದ್ದು, ಸುಮಾರು 8 ರಿಂದ 10 ದಿನಗಳಲ್ಲಿ ಅಭ್ಯರ್ಥಿಗಳನ್ನು ಅಂತಿಮಗೊಳಿಸಲಾಗುವುದು. ಈ ಬಗ್ಗೆ ಶಾಸಕರು ಮತ್ತು ಜಿಲ್ಲಾ ಉಸ್ತುವಾರಿ ಸಚಿವರ ಅಭಿಪ್ರಾಯವನ್ನು ಸಂಗ್ರಹಿಸಲಾಗುವುದು ಎಂದರು. ಇದೇ ವೇಳೆ ಬಿಹಾರ ಚುನಾವಣೆಗೆ

**100 ಕಾಂಗ್ರೆಸ್ ಭವನಗಳ ನಿರ್ಮಾಣ**

**ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಈ ತಿಂಗಳು ಕಾಂಗ್ರೆಸ್ ಭವನಗಳಿಗ ಶಂಕುಸ್ಥಾಪನೆ ನೆರವೇರಿಸುತ್ತಾರೆಯೇ ಎಂಬ ಪ್ರಶ್ನೆಗೆ ಉತ್ತರಿಸಿ. ಸಮಯ ಕೇಳಲಾಗಿದೆ. ದಿನಾಂಕಗಳನ್ನು ಇನ್ನೂ ಅಂತಿಮಗೊಳಿಸಲಾಗಿಲ್ಲ ಎಂದು ತಿಳಿಸಿದರು.**

ಮುಖ್ಯಮಂತ್ರಿ ಮತ್ತು ಉಪಮುಖ್ಯಮಂತ್ರಿ ಪಕ್ಷಕ್ಕೆ 300 ಕೋಟಿ ರೂ. ನೀಡಿದ್ದಾರೆ ಎಂಬ ಬಿಜೆಪಿ ನಾಯಕ ಬಿ. ಶ್ರೀರಾಮುಲು ಅವರ ಆರೋಪವನ್ನು ತಳ್ಳಿಹಾಕಿದರು.

# ಚಲ್ಲಘಟ್ಟ ವೈಟ್‌ಫೀಲ್ಡ್ ನೇರಳೆ ಮಾರ್ಗದಲ್ಲಿ ಸಂಚಾರ ವ್ಯತ್ಯಯ

• **ಉದಯವಾಹಿನಿ, ಬೆಂಗಳೂರು**

ಮೆಟ್ರೊ ರೈಲು ಕೆಟ್ಟು ನಿಂತು ಚಲ್ಲಘಟ್ಟದಿಂದ ವೈಟ್ ಫೀಲ್ಡ್‌ಗೆ ಸಂಚರಿಸುವ ನೇರಳೆ ಮಾರ್ಗದಲ್ಲಿ ಗುರುವಾರ ಬೆಳಗ್ಗೆ ಸಂಚಾರ ವ್ಯತ್ಯಯವಾಗಿದೆ.

ಚಲ್ಲಘಟ್ಟದಿಂದ ಹಾಗೂ ವೈಟ್‌ಫೀಲ್ಡ್‌ನಿಂದ ಹೊರಟ ಮೆಟ್ರೋ ರೈಲುಗಳು ಅವು ನಿಂತಿದ್ದ ನಿಲ್ದಾಣಗಳಲ್ಲಿಯೇ ಸುಮಾರು 10 ನಿಮಿಷಗಳಿಗೂ ಹೆಚ್ಚು ಸಮಯ ನಿಂತು ನಂತರ ಪ್ರಯಾಣ ಆರಂಭಿಸಿತು.

ಈ ಬಗ್ಗೆ ಪ್ರತಿಕ್ರಿಯಿಸಿರುವ ಬಿಎಂಆರ್‌ಸಿಎಲ್ ಅಧಿಕಾರಿಗಳು, ವಿಳಂಬಕ್ಕಾಗಿ ನಾವು ಕ್ಷಮೆಯಾಚಿಸುತ್ತೇವೆ. ಮುಂದಿನ ಮಾಹಿತಿ ಸಿಕ್ಕ ತಕ್ಷಣ ತಿಳಿಸುತ್ತೇವೆ ಎಂದು ಮೆಟ್ರೋ ರೈಲಿನಲ್ಲಿ ಅನೌನ್ಸ್ ಮಾಡಲಾಗಿದೆ.

ಸದ್ಯ ಮೆಟ್ರೋ ರೈಲು ಸಂಚಾರ ಶುರುವಾಗಿದ್ದು, ವಿಳಂಬವಾಗಿ ಸಂಚರಿಸುತ್ತಿದೆ.



**ಮೆಟ್ರೋ ರೈಲು ಸಂಚಾರ ವ್ಯತ್ಯಯಕ್ಕೆ ಕಾರಣವೇನು**

**ಬಿಎಂಆರ್‌ಸಿಎಲ್ ಹೇಳಿದ್ದೇನು:** ನಮ್ಮ ಮೆಟ್ರೋ ನೇರಳೆ ಮಾರ್ಗದಲ್ಲಿ ತಾಂತ್ರಿಕ ಸಮಸ್ಯೆಯ ಕಾರಣ ರೈಲು ಸಂಚಾರ ವಿಳಂಬವಾಗಿದೆ. ಬೆಳಗ್ಗೆ 8.50ರಿಂದ ಮೆಟ್ರೋ ರೈಲು ಸಂಚಾರದಲ್ಲಿ ವ್ಯತ್ಯಯವಾಗಿದೆ.

ಚಲ್ಲಘಟ್ಟ-ವೈಟ್ ಫೀಲ್ಡ್ ಮಾರ್ಗದಲ್ಲಿ ಸಂಚಾರ ವ್ಯತ್ಯಯವಾಗಿದೆ. ವಿಜಯನಗರ -ಹೊಸಹಳ್ಳಿ ನಿಲ್ದಾಣಗಳ ನಡುವೆ ವ್ಯತ್ಯಯವಾಗಿದೆ. ತಾಂತ್ರಿಕ ಸಮಸ್ಯೆಯಿಂದಾಗಿ ರೈಲೊಂದು ಕೆಟ್ಟು ನಿಂತಿದ್ದೇ ಇದಕ್ಕೆ ಕಾರಣ. ಕೆಟ್ಟುನಿಂತ ರೈಲನ್ನು ಚಲ್ಲಘಟ್ಟ ನಿಲ್ದಾಣಕ್ಕೆ ಸ್ಥಳಾಂತರಿಸಲಾಗುತ್ತಿದೆ. ಆನಂತರ ಮೆಟ್ರೋ ರೈಲು ಸಂಚಾರ ಸಹಜ ಸ್ಥಿತಿಗೆ ಬರಲಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

# ಮೋದಿ ಸರ್ಕಾರದ ರಾಜಕೀಯದಿಂದಾಗಿ ರಾಜ್ಯಕ್ಕೆ ಉದ್ಯಮಗಳು ಕೈ ತಪ್ಪುತ್ತಿವೆ: ಎಂ.ಬಿ.ಪಾಟೀಲ್ ಆರೋಪ

• **ಉದಯವಾಹಿನಿ, ಬೆಂಗಳೂರು**

ಕರ್ನಾಟಕದಿಂದ ಆಂಧ್ರಪ್ರದೇಶಕ್ಕೆ ಉದ್ಯಮಗಳು ಸ್ಥಳಾಂತರವಾಗುತ್ತಿರುವುದಕ್ಕೆ ಕೇಂದ್ರ ಸರ್ಕಾರ ರಾಜಕೀಯ ಆಟವೇ ಕಾರಣ ಎಂದು ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ್ ಅವರು ಆರೋಪಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕೇಂದ್ರ ಸರ್ಕಾರವು ಬಿಜೆಪಿಯೊಂದಿಗೆ ಹೊಂದಾಣಿಕೆ ಮಾಡಿಕೊಂಡಿರುವ ರಾಜ್ಯಗಳಿಗೆ ಒಲವು ತೋರುತ್ತಿದೆ. ಕರ್ನಾಟಕದಿಂದ ಆಂಧ್ರಪ್ರದೇಶಕ್ಕೆ ಉದ್ಯಮಗಳು ಸ್ಥಳಾಂತರವಾಗುತ್ತಿರುವದಕ್ಕೆ ಕೇಂದ್ರದ ರಾಜಕೀಯ ಆಟವೇ ಕಾರಣ ಎಂದು ಆರೋಪಿಸಿದ್ದಾರೆ.

ಆಂಧ್ರಪ್ರದೇಶದ ಮುಖ್ಯಮಂತ್ರಿ ಚಂದ್ರಬಾಬು ನಾಯ್ಡು ಅವರು, ಬಿಜೆಪಿಯನ್ನು ಬೆಂಬಲಿಸುತ್ತಿರುವುದರಿಂದ, ಕೇಂದ್ರವು 22,000 ಕೋಟಿ ರೂ.ಗಳ ಪ್ರೋತ್ಸಾಹ ಧನವನ್ನು ನೀಡಿದೆ. ಇದರಿಂದಾಗಿ ಗೂಗಲ್ ಅಲ್ಲಿ ಹೂಡಿಕೆ ಮಾಡಿದೆ. ಬಿಜೆಪಿಯನ್ನು ಬೆಂಬಲಿಸಿದ್ದಕ್ಕಾಗಿ ಪ್ರಧಾನಿ ಮೋದಿ ಅವರು ನಾಯ್ಡು ಅವರಿಗೆ ನೀಡಿದ ಉಡುಗೊರೆ ಇದು ಎಂಬುದು ಸ್ಪಷ್ಟವಾಗಿದೆ ಎಂದು ಹೇಳಿದರು.



ಅದೇ ರೀತಿ, ಸೆಮಿ-ಕಂಡಕ್ಟರ್ ಸೇರಿದಂತೆ ಹಲವು ಹೈಟೆಕ್ ಉದ್ಯಮಗಳು ಕೈ ತಪ್ಪಲು ಬೇರೆ ಬೇರೆ ಕಾರಣಗಳಿದ್ದರೂ, ಕೇಂದ್ರ ಸರ್ಕಾರವು ತಮಗೆ ಬೇಕಾದ ರಾಜ್ಯಗಳಿಗೆ ಕಂಪನಿಗಳನ್ನು ಕಳುಹಿಸುತ್ತಿದೆ. ನಾವು ಕಂಪನಿಗಳೊಂದಿಗೆ ಎಲ್ಲಾ ಮಾತುಕತೆಗಳನ್ನು ಪೂರ್ಣಗೊಳಿಸಿದ್ದರೂ, ದೆಹಲಿಗೆ ಹೋದ ನಂತರ ನಿರ್ಧಾರ ಬದಲಾಗುತ್ತದೆ. ಗೂಗಲ್ ಕಂಪನಿ ಆಂಧ್ರಪ್ರದೇಶಕ್ಕೆ ತೆರಳಲು ಕೇಂದ್ರ ಸರ್ಕಾರವೇ ಕಾರಣವಾಗಿದ್ದು, ಅದು ಚಂದ್ರಬಾಬು ನಾಯ್ಡು ಅವರಿಗೆ ನೀಡಿದ ಉಡುಗೊರೆ ಎಂದು ವಾಗ್ದಾಳಿ ನಡೆಸಿದರು.

ಕರ್ನಾಟಕವು ಅತ್ಯುತ್ತಮ ಕೈಗಾರಿಕಾ ಪರಿಸರ ವ್ಯವಸ್ಥೆ, ಕೌಶಲ್ಯಪೂರ್ಣ ಮಾನವ ಸಂಪನ್ಮೂಲಗಳು ಮತ್ತು ಬೆಂಬಲಿತ ಸರ್ಕಾರಿ ನೀತಿಗಳನ್ನು ಒದಗಿಸುತ್ತದೆ.

ಕೈಗಾರಿಕೆಗಳು ರಾಜ್ಯವನ್ನು ತೊರೆಯುತ್ತಿವೆ ಎಂಬ ತಪ್ಪು ಕಲ್ಪನೆ ಹರಡಲಾಗುತ್ತಿದೆ, ಆದರೆ ಅದು ನಿಜವಲ್ಲ. ಯಾವುದೇ ಉದ್ಯಮವು ಕರ್ನಾಟಕದಿಂದ ನೆರೆಯ ರಾಜ್ಯಗಳಿಗೆ ಸ್ಥಳಾಂತರಗೊಂಡಿಲ್ಲ. ಜಾಗತಿಕ ಹೂಡಿಕೆದಾರರ ಸಭೆಯ ನಂತರ, ಕರ್ನಾಟಕವು 10.27 ಲಕ್ಷ ಕೋಟಿ ರೂ. ಮೌಲ್ಯದ ಹೂಡಿಕೆಗಳನ್ನು ಪಡೆದುಕೊಂಡಿದೆ. ಜಪಾನ್ ಮತ್ತು ಕೊರಿಯನ್ ಕಂಪನಿಗಳು ಮಾತ್ರ 6,500 ಕೋಟಿ ರೂ. ಹೂಡಿಕೆ ಮಾಡುತ್ತಿವೆ. ಹೋಂಡಾ ತನ್ನ ಕಾರ್ಯಾಚರಣೆಯನ್ನು ವಿಸ್ತರಿಸಲು ಆಸಕ್ತಿ ತೋರಿಸಿದೆ ಮತ್ತು ಫಾಕ್ಸ್‌ಕಾನ್ ಚೀನಾದ ನಂತರ ಕರ್ನಾಟಕದಲ್ಲಿ ತನ್ನ ಎರಡನೇ ಅತಿದೊಡ್ಡ ಉತ್ಪಾದನಾ ಘಟಕವನ್ನು ಸ್ಥಾಪಿಸುತ್ತಿದೆ.

**ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ನಂತರ, ಫೆಬ್ರವರಿಯಲ್ಲಿ ನಡೆದ ಜಾಗತಿಕ ಹೂಡಿಕೆದಾರರ ಸಮ್ಮೇಳನವು ಈಗಾಗಲೇ ಗಮನಾರ್ಹ ಬಂಡವಾಳ ಒಳಹರಿವು ಆಗಿ ಪರಿವರ್ತನೆಗೊಂಡಿದೆ. 10.27 ಲಕ್ಷ ಕೋಟಿ ರೂ. ಹೂಡಿಕೆಯಲ್ಲಿ ಶೇ.60 ಕ್ಕಿಂತ ಹೆಚ್ಚು ಕೈಗಾರಿಕೆಗಳು ಈಗಾಗಲೇ ಕಾರ್ಯರೂಪಕ್ಕೆ ಬಂದಿದೆ, ಇದು ಸಾವಿರಾರು ಹೊಸ ಉದ್ಯೋಗಗಳನ್ನು ಸೃಷ್ಟಿಸಿದೆ. ಕರ್ನಾಟಕದ ಕೈಗಾರಿಕಾ ನೀತಿಯು ವ್ಯವಹಾರ ಸ್ನೇಹಿಯಾಗಿದೆ. ಸುಸ್ಥಿರ, ದೀರ್ಘಕಾಲೀನ ಹೂಡಿಕೆಗಳನ್ನು ಆಕರ್ಷಿಸಲು ವಿನ್ಯಾಸಗೊಳಿಸಲಾಗಿದೆ ಎಂದು ಹೇಳಿದರು.**

# ಕಾರು ಬಿಟ್ಟು ಮನೆಯವರನ್ನ ಕರ್ಕೊಂಡು ಬಸ್‌ನಲ್ಲಿ ಓಡಾಡಲಿ: ಡಿಕೆಶಿ

## ಟನಲ್ ರಸ್ತೆ ಬೇಡ ಎಂದು ಹೇಳುವುದಕ್ಕೆ ಈ ತೇಜಸ್ವಿ ಸೂರ್ಯ ಯಾರು? ಇನ್ನು ಅವನು ಎಳಸು ಎಂದು ಡಿಕೆಶಿ ವಾಗ್ದಾಳಿ

• **ಉದಯವಾಹಿನಿ, ಬೆಂಗಳೂರು**

ಹುಡುಗ ಇನ್ನು ಎಳಸು. ಆತನಿಗೆ ಇನ್ನು ಅನುಭವವಿಲ್ಲ. ಅವನೊಬ್ಬ ವೇಸ್ಟ್ ಮೆಟೀರಿಯಲ್. ಗೌರವ ಕೊಟ್ಟು ಕರೆದು ಮಾತಾಡಿದರೆ ಬಾಯಿಗೆ ಬಂದಂತೆ ವದರುತ್ತಿದ್ದಾನೆ ಎಂದು ಡಿಸಿಎಂ ಡಿಕೆ ಶಿವಕುಮಾರ್ ಅವರು ವಾಗ್ದಾಳಿ ನಡೆಸಿದ್ದಾರೆ.

ಟನಲ್ ರಸ್ತೆ ಬೇಡ ಎಂದು ಹೇಳುವುದಕ್ಕೆ ಈ ತೇಜಸ್ವಿ ಸೂರ್ಯ ಯಾರು? ಈ ದೇಶದಲ್ಲಿ, ಪ್ರಪಂಚದಲ್ಲಿಯೇ ಟನಲ್ ರಸ್ತೆಗಳೇ ಬೇಡ ಎಂದು ಅವನು ಕೇಂದ್ರ ಸಚಿವನಾದ ಮೇಲೆ ಲೋಕಸಭೆಯಲ್ಲಿ ತೀರ್ಮಾನ ಮಾಡಲಿ ಎಂದು ಕಿಡಿ ಕಾರಿದ್ದಾರೆ.

ನಗರದ ಖಾಸಗಿ ಹೋಟೆಲ್‌ನಲ್ಲಿ ಮಾಧ್ಯಮಗಳ ಪ್ರಶ್ನೆಗೆ ಪ್ರತಿಕ್ರಿಯೆ ನೀಡಿದರು. ಟನಲ್ ರಸ್ತೆ ಯೋಜನೆಯನ್ನು ತಂತ್ರಜ್ಞರ ಅಭಿಪ್ರಾಯ ಪಡೆದು ಮಾಡಬೇಕಿತ್ತು ಎನ್ನುವ ಹೇಳಿಕೆಯ ಬಗ್ಗೆ ಕೇಳಿದಾಗ ಉತ್ತರಿಸಿದ ಡಿಸಿಎಂ ಅವರು, ಏನೋ ಹೋಗಲಿ ಅಂತ ಗೌರವ ಕೊಟ್ಟು ನನ್ನ ಜೊತೆ ಮಾತನಾಡಲು ಅವಕಾಶ ನೀಡಿದರೆ ಏನೇನೋ ಮಾತನಾಡುತ್ತಿದ್ದಾನೆ. ಆದರೆ ನಾನು ಆತನ ಬಗ್ಗೆ ಮಾತನಾಡಲು ಹೋಗುವುದಿಲ್ಲ. ಸಂಸದ ತೇಜಸ್ವಿಸೂರ್ಯನಿಗೆ ಪ್ರಪಂಚ ಹೇಗಿದೆ ಎಂದೇ ಗೊತ್ತಿಲ್ಲ ಎಂದರು.


☛ ಉದಯವಾಹಿನಿ ಚಿತ್ರ

**ಡಿಕೆ ಶಿವಕುಮಾರ್ ಕನಸಿನ ಸುರಂಗ ರಸ್ತೆಗೆ ಭಾರೀ ಹಿನ್ನಡೆ;** ಟೆಂಡರ್‌ನಲ್ಲಿ ಭಾಗವಹಿಸದ ಕಂಪನಿಗಳು ಬಿಡ್ ಅವಧಿ ವಿಸ್ತರಣೆ



**ಈತ ಏಕೆ ಕಾರಲ್ಲಿ ಓಡಾಡುತ್ತಿದ್ದಾನೆ?:** ನಾನು ಹುಡುಗನ ಬಳಿ ಕಾರಿಲ್ಲದಿದ್ದರೆ ಹೆಣ್ಣು ನೀಡುವುದಿಲ್ಲ ಎಂದಿದ್ದೆ. ಅದನ್ನೇ ಹಿಡಿದುಕೊಂಡು ಮಾತಾಡುತ್ತಿದ್ದಾನೆ. ಈತ ಏಕೆ ಕಾರಲ್ಲಿ ಓಡಾಡುತ್ತಿದ್ದಾನೆ? ಆತ, ಆತನ ಕುಟುಂಬ ಸದಸ್ಯರು ಮೆಟ್ರೋ, ಸರ್ಕಾರಿ ಬಸ್ ಬಳಸಲಿ. ಅವರ ಪಕ್ಷದ ಶಾಸಕರು ಮೆಟ್ರೋ, ಆಟೋರಿಕ್ಷಾ, ಸಾರ್ವಜನಿಕ ಸಾರಿಗೆಗಳಲ್ಲಿ ಓಡಾಡಲಿ. ಬೇಡ ಎಂದವರಾರು? ಇವರಿಗೆ ಕಾರುಗಳು ಏಕೆ ಬೇಕು? ಬೆಂಗಳೂರಿನಲ್ಲಿ 1.30 ಕೋಟಿಗೂ ಹೆಚ್ಚು ವಾಹನಗಳಿವೆ ಎಂಬುದನ್ನು ಆತ ಅರ್ಥ ಮಾಡಿಕೊಳ್ಳಬೇಕು, ಅವರಿಗೆಲ್ಲ ವಾಹನ ಬಳಸಬೇಡಿ ಎಂದು ಹೇಳಲು ಆಗುತ್ತದೆಯೇ ಎಂದು ತಿಳಿದರು.

ಮದುವೆ ಮಾಡಿಸಲು ಈ ಯೋಜನೆ ಕೈಗೆತ್ತಿಕೊಂಡಿದ್ದಾರೆ ಎನ್ನುವ ಟೀಕೆಯ ಬಗ್ಗೆ ಕೇಳಿದಾಗ, ಅದಕ್ಕೆ ನಾನು ಆತನನ್ನು ಎಳಸು ಎಂದು ಕರೆದಿದ್ದು. ನೀವೆಲ್ಲರೂ ಕ್ಯಾಮೆರಾ ಹಿಡಿದುಕೊಂಡು (ಮಾಧ್ಯಮದವರು) ಸಾರ್ವಜನಿಕ ಸಾರಿಗೆಯಲ್ಲಿ ಓಡಾಡಿಕೊಂಡು ಕೆಲಸ ಮಾಡಲು ಆಗುತ್ತದೆಯೇ ಶಾಲಾ ಮಕ್ಕಳನ್ನು ಶಾಲಾ ವಾಹನದಲ್ಲಿ ಕಳುಹಿಸುತ್ತಾರೆ. ಅವರಿಗೆ ಸಾರ್ವಜನಿಕ ಸಾರಿಗೆಯಲ್ಲಿ ಕಳುಹಿಸಿ ಎಂದು ಹೇಳಲು ಆಗುತ್ತದೆಯೇ ಎಂದರು.

**ತೇಜಸ್ವಿ ಸೂರ್ಯ ವೇಸ್ಟ್ ಮೆಟೀರಿಯಲ್**

**ಹೀ ಇಸ್ ವೇಸ್ಟ್ ಮೆಟಿರಿಯಲ್**

**ಅವನ ಬಗ್ಗೆ ನನ್ನ ಬಳಿ ಯಾವ ಪ್ರಶ್ನೆಯನ್ನೂ ಕೇಳಬೇಡಿ. ಹೋಲಿಕೆ ಮಾಡಬೇಡಿ. ಹೀ ಇಸ್ ಎ ವೇಸ್ಟ್ ಮೆಟಿರಿಯಲ್, ಖಾಲಿ ಟ್ರಂಕ್ ಆತ. ಅವರ ಪಕ್ಷದ ಹಿರಿಯ ನಾಯಕರಾದ ಅಶೋಕ್, ಅಶ್ವತ್ಥ ನಾರಾಯಣ್, ಬಸವರಾಜ ಬೊಮ್ಮಾಯಿ, ಜಗದೀಶ್ ಶೆಟ್ಟರ್ ಅಂತಹವರು ಮಾತನಾಡಿದರೆ ಉತ್ತರ ನೀಡೋಣ. ಏಕೆಂದರೆ ಅವರಿಗೆ ಇದೆಲ್ಲವೂ ಅರ್ಥವಾಗುತ್ತದೆ. ಬೆಂಗಳೂರಿನಲ್ಲಿ ಬಿಆರ್ ಟಿಎಸ್ ಮಾಡಲು ಎಲ್ಲಿ ಜಾಗವಿದೆ ಭೂ ಪರಿಹಾರ ಎಷ್ಟಾಗುತ್ತದೆ ಎನ್ನುವ ಅರಿವು ತೇಜಸ್ವಿ ಸೂರ್ಯನಿಗೆ ತಲೆಯಲ್ಲಿಯೇ ಇಲ್ಲ ಎಂದರು.**

ಈ ರಾಜ್ಯಕ್ಕೆ ಮೆಟ್ರೋ ತಂದವರು ನಾವು. ಅವರಿಗೆ ಅಧಿಕಾರ ಇದ್ದಾಗ ಏನು ಮಾಡಿದ್ದಾರೆ? ಕೇಂದ್ರದಿಂದ ಏನು ತೆಗೆದುಕೊಂಡು ಬಂದಿದ್ದಾರೆ? ಬೆಂಗಳೂರಲ್ಲಿ ಎಷ್ಟು ಪಿಲ್ಲರ್ ಹಾಕಿದ್ದಾರೆ? ಯೋಜನೆಗೆ ಹಣವೆಷ್ಟು ತಂದಿದ್ದಾರೆ? ಕೇಂದ್ರ ಸರ್ಕಾರ ಮೆಟ್ರೋ ಯೋಜನೆಗೆ ಶೇ. 11-12 ರಷ್ಟು ಹಣ ನೀಡುತ್ತಿದೆ. ಭೂ ಪರಿಹಾರ ಸೇರಿದಂತೆ ಎಲ್ಲವನ್ನೂ ನಾವೇ ನೀಡುತ್ತಿದ್ದೇವೆ ಎಂದರು.

ಅಂತರಾಳದಿಂದ... EDITORIAL

# ಕಸಾಪಕ್ಕೆ ಆಡಳಿತಾಧಿಕಾರಿ ನೇಮಕ: ತನಿಖೆಯಿಂದ ಸತ್ಯ ಹೊರಬರಲಿ

ಕನ್ನಡ ಸಾಹಿತ್ಯ ಪರಿಷತ್ತಿನ (ಕಸಾಪ) ಆಡಳಿತಾಧಿಕಾರಿಯಾಗಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕಿ ಕೆ.ಎಂ. ಗಾಯಿತ್ರಿ ಅವರು ಅಧಿಕಾರ ಸ್ವೀಕರಿಸಿದ್ದಾರೆ. ಇದರೊಂದಿಗೆ, ಕಸಾಪ ತನ್ನ ಇತಿಹಾಸದಲ್ಲಿ ಎರಡನೇ ಬಾರಿ ಆಡಳಿತಾಧಿಕಾರಿಯನ್ನು ಕಂಡಂತಾಗಿದೆ. ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ದೂರದೃಷ್ಟಿ ಮತ್ತು ಸದಾಶಯದೊಂದಿಗೆ ಆರಂಭಗೊಂಡ ಹಾಗೂ ನೂರಾ ಹತ್ತು ವರ್ಷಗಳನ್ನು ದಾಟಿ ಮುನ್ನಡೆದಿರುವ ಸಾಹಿತ್ಯ ಪರಿಷತ್ತಿನ ಘನತೆಗೆ ಆಡಳಿತಾಧಿಕಾರಿಯ ನೇಮಕ ಕಸಿವಿಸಿ ಉಂಟುಮಾಡುವಂತಹದ್ದು. ಆದರೆ, ಪರಿಷತ್ತಿನಲ್ಲಿ ನಡೆದಿದೆ ಎನ್ನಲಾದ ಹಣ ಮತ್ತು ಅಧಿಕಾರದ ದುರ್ಬಳಕೆಯ ಆರೋಪಗಳ ಹಿನ್ನೆಲೆಯಲ್ಲಿ ಸರ್ಕಾರದ ಮಧ್ಯಪ್ರವೇಶ ಅನಿವಾರ್ಯವಾಗಿತ್ತು. ಪರಿಷತ್ತಿನ ಅಧ್ಯಕ್ಷರಾಗಿದ್ದ ಮಹೇಶ ಜೋಶಿ ಅವರ ಮೇಲಿನ ಟೀಕೆ ಟಿಪ್ಪಣಿಗಳ ಹಿನ್ನೆಲೆಯಲ್ಲಿ, ಕಸಾಪ ಅಧ್ಯಕ್ಷರಿಗೆ ನೀಡಲಾಗಿದ್ದ ರಾಜ್ಯ ಸಚಿವ ಸ್ಥಾನಮಾನ ಮತ್ತು ಸವಲತ್ತುಗಳನ್ನು ಸರ್ಕಾರ ಹಿಂಪಡೆದಿತ್ತು.

> **ಬೆಂಗಳೂರು, ಹಾಸನ, ಮಂಡ್ಯ ಸೇರಿದಂತೆ ನಾಡಿನ ವಿವಿಧೆಡೆಗಳಲ್ಲಿ ಜೋಶಿಯವರ ವಿರುದ್ಧ ಪ್ರತಿಭಟನೆಗಳು ನಡೆದಿದ್ದವು. ಪರಿಷತ್ತಿನಿಂದ ಹೊರಗೆ ಬಂದಿರುವ ಕಸಾಪದ ಇಬ್ಬರು ಗೌರವ ಕಾರ್ಯದರ್ಶಿಗಳು ಅಧ್ಯಕ್ಷರ ಸರ್ವಾಧಿಕಾರಿ ಧೋರಣೆಯಿಂದ ಬೇಸತ್ತು ರಾಜೀನಾಮೆ ನೀಡಿರುವುದಾಗಿ ಹೇಳಿದ್ದಾರೆ.**

ಕರ್ನಾಟಕ ಸಂಘಗಳ ನೋಂದಣಿ ಅಧಿನಿಯಮ 1960ರ ಕಲಂ 25ರ ಅಡಿ, ಸಾಹಿತ್ಯ ಪರಿಷತ್ತಿನ ವ್ಯವಹಾರಗಳ ಬಗ್ಗೆ ವಿಚಾರಣೆ ನಡೆಸಲು ವಿಚಾರಣಾ ಅಧಿಕಾರಿಯನ್ನು ಸಹಕಾರ ಇಲಾಖೆ ನೇಮಿಸಿತ್ತು. ವಿಚಾರಣೆಗೆ ಸಂಬಂಧಿಸಿದಂತೆ ಕಸಾಪ ಅಧ್ಯಕ್ಷರು ಸಹಕಾರ ನೀಡದ ಕಾರಣದಿಂದಾಗಿ ಆಡಳಿತಾಧಿಕಾರಿ ನೇಮಿಸುವಂತೆ ಸಹಕಾರ ಇಲಾಖೆಯು ಸರ್ಕಾರಕ್ಕೆ ಶಿಫಾರಸು ಮಾಡಿತ್ತು. ಮಹೇಶ ಜೋಶಿ ಅವರನ್ನು ಅಧ್ಯಕ್ಷ ಸ್ಥಾನದಿಂದ ವಜಾ ಮಾಡಿ ಆಡಳಿತಾಧಿಕಾರಿಯನ್ನು ನೇಮಿಸುವಂತೆ ಕೆಲವು ಸಾಹಿತಿಗಳು ಹಾಗೂ ಪರಿಷತ್ತಿನ ಹಿತಚಿಂತಕರು ಸರ್ಕಾರವನ್ನು ಒತ್ತಾಯಿಸಿದ್ದರು. ಈ ಎಲ್ಲಾ ಬೆಳವಣಿಗೆಯ ಭಾಗವಾಗಿ ಪರಿಷತ್ತಿಗೆ ಆಡಳಿತಾಧಿಕಾರಿ ನೇಮಕಗೊಂಡಿದ್ದಾರೆ. ಮೂರು ತಿಂಗಳ ಅವಧಿಗೆ ಅಥವಾ ವಿಚಾರಣೆ ಪೂರ್ಣಗೊಳ್ಳುವವರೆಗೆ ಆಡಳಿತಾಧಿಕಾರಿ ಕಾರ್ಯ ನಿರ್ವಹಿಸಲಿದ್ದಾರೆ. ಮಹೇಶ ಜೋಶಿ ಅವರ ಮೇಲಿನ ಆರೋಪಗಳು ಗಂಭೀರವಾದವು ಹಾಗೂ ಪರಿಷತ್ತಿನ ವರ್ಚಸ್ಸಿಗೆ ಧಕ್ಕೆ ತರುವಂತಹವು. ಪರಿಷತ್ತಿನ ಅಧ್ಯಕ್ಷರು ಸರ್ವಾಧಿಕಾರಿಯಂತೆ ವರ್ತಿಸುತ್ತಿದ್ದಾರೆ ಎಂದು ಕೆಲವು ಲೇಖಕರು ಹಾಗೂ ಕಸಾಪದ ಕೆಲವು ಜಿಲ್ಲಾ ಘಟಕಗಳ ಅಧ್ಯಕ್ಷರು ಆರೋಪಿಸಿದ್ದಾರೆ. ಪರಿಷತ್ತಿನ ಹಣವನ್ನು ಕಸಾಪ ಅಧ್ಯಕ್ಷರ ಕುಟುಂಬದ ಸದಸ್ಯರ ಕಾರ್ಯಕ್ರಮಗಳಿಗೆ ನಿಯಮಬಾಹಿರವಾಗಿ ಬಳಕೆ ಮಾಡಿಕೊಳ್ಳಲಾಗಿದೆ; ಕಂಪ್ಯೂಟರ್ ಖರೀದಿ, ಸಿ.ಸಿ.ಟಿ.ವಿ. ಕ್ಯಾಮೆರಾ ಅಳವಡಿಕೆ, ಅಗ್ನಿಶಾಮಕ ಉಪಕರಣದ ಅಳವಡಿಕೆ ಹಾಗೂ ಪುಸ್ತಕಗಳ ಮುದ್ರಣಕ್ಕೆ ಸಂಬಂಧಿಸಿದಂತೆ ಹಣದ ದುರುಪಯೋಗ ಆಗಿದೆ ಎನ್ನುವ ಗುರುತರ ಆರೋಪಗಳು ಮಹೇಶ ಜೋಶಿ ಅವರ ಮೇಲಿವೆ. ಪರಿಷತ್ತಿನ ಆಡಳಿತ ಮಂಡಳಿಯ ನಿರ್ಣಯಗಳನ್ನು ಸಹಕಾರ ಸಂಘದ ನಿಯಮ ನಿಬಂಧನೆಗೆ ವಿರುದ್ಧವಾಗಿ ದಾಖಲಿಸಲಾಗಿದೆ ಎನ್ನುವ ಆರೋಪಗಳೂ ಇವೆ. ಕನ್ನಡ ನಾಡು–ನುಡಿಯ ಸಬಲೀಕರಣದ ನಿಟ್ಟಿನಲ್ಲಿ ಕೆಲಸ ಮಾಡಬೇಕಾದ ಸಂಸ್ಥೆ ಭ್ರಷ್ಟಾಚಾರದ ಆರೋಪಗಳ ಕಾರಣದಿಂದ ನಿರಂತರವಾಗಿ ಸುದ್ದಿಯಲ್ಲಿರುವುದು ದುರದೃಷ್ಟಕರ. ಆಡಳಿತಾಧಿಕಾರಿಯ ನೇಮಕದೊಂದಿಗೆ ಮಹೇಶ ಜೋಶಿ ಅವರ ಮೇಲಿನ ಆರೋಪಗಳ ತನಿಖೆಗೆ ಇದ್ದ ಅಡಚಣೆಗಳು ದೂರವಾಗಿವೆ. ಮಹೇಶ ಜೋಶಿ ಅವರು ಕಸಾಪ ಅಧ್ಯಕ್ಷರಾದಾಗಿನಿಂದ ಒಂದಲ್ಲಾ ಒಂದು ವಿವಾದ ನಿರಂತರವಾಗಿ ಸೃಷ್ಟಿಯಾಗುತ್ತಿದ್ದು, ಆ ವಿವಾದಗಳ ಪರಿಣಾಮ ಪರಿಷತ್ತಿನ ಮೇಲಾಗಿದೆ ಪರಿಷತ್ತಿನ ಹಿತಚಿಂತಕರೂ ಮುಜುಗರ ಅನುಭವಿಸುವಂತಾಗಿದೆ. ಪರಿಷತ್ತಿಗೆ ಅಂಟಿಕೊಂಡಿರುವ ಮಸಿಯನ್ನು ನಿವಾರಿಸುವ ನಿಟ್ಟಿನಲ್ಲಿ ತನಿಖೆಯಿಂದ ಹೊರಬರುವ ಸತ್ಯಾಂಶಗಳಿಗೆ ಮಹತ್ವದ ಪಾತ್ರವಿದೆ. ಹಾಗಾಗಿ, ತನಿಖೆಯನ್ನು ಪಾರದರ್ಶಕವಾಗಿ ನಡೆಸುವ ಹಾಗೂ ವಿಳಂಬಕ್ಕೆ ಆಸ್ಪದವಿಲ್ಲದೆ ಮುಗಿಸುವ ಜವಾಬ್ದಾರಿಯನ್ನು ಸಹಕಾರ ಇಲಾಖೆ ನಿರ್ವಹಿಸಬೇಕಾಗಿದೆ. ಪ್ರಜಾಪ್ರಭುತ್ವ ಸಂಸ್ಥೆಯೊಂದಕ್ಕೆ, ಅದರಲ್ಲೂ ಸಾಹಿತ್ಯ ಪರಿಷತ್ತಿನಂಥ ಕನ್ನಡಿಗರ ಪ್ರಾತಿನಿಧಿಕ ಸಂಸ್ಥೆಗೆ ಆಡಳಿತಾಧಿಕಾರಿಯ ನೇಮಕ ಇರುಸುಮುರುಸು ಮಾಡುವಂತಹದ್ದು. ಆದಷ್ಟು ಬೇಗ ವಿಶ್ವಾಸಾರ್ಹ ಪ್ರಜಾಪ್ರಭುತ್ವ ವ್ಯವಸ್ಥೆ ಕಸಾಪದಲ್ಲಿ ಮರಳುವಂತೆ ಸರ್ಕಾರ ನೋಡಿಕೊಳ್ಳಬೇಕಾಗಿದೆ. ಈ ಪ್ರಕರಣ ಕಸಾಪ ಸದಸ್ಯರ ಆತ್ಮಾವಲೋಕನಕ್ಕೂ ಅವಕಾಶ ಕಲ್ಪಿಸಬೇಕಾಗಿದೆ. ಪರಿಷತ್ತನ್ನು ಮುನ್ನಡೆಸಲು ಎಂಥ ವ್ಯಕ್ತಿಗಳು ಬೇಕು ಎನ್ನುವುದರ ಬಗ್ಗೆ ಹಾಗೂ ಪರಿಷತ್ತನ್ನು ನಿಜವಾದ ಅರ್ಥದಲ್ಲಿ ಕನ್ನಡಿಗರ ಪ್ರಾತಿನಿಧಿಕ ಸಂಸ್ಥೆ ಆಗಿಸುವ ನಿಟ್ಟಿನಲ್ಲಿ ಕಸಾಪ ಸದಸ್ಯರು, ಪ್ರಾಜ್ಞರು ಚಿಂತನೆ ನಡೆಸಲು ಇದು ಸಕಾಲ.





## 250 ಮೆಗಾವ್ಯಾಟ್ ಸಾಮರ್ಥ್ಯದ ಟಾಕಾ ನೈವೇಲಿ ಸ್ಥಾವರ ಮೆಘಾ ಸ್ವಾಧೀನಕ್ಕೆ

• ಉದಯವಾಹಿನಿ, ಬೆಂಗಳೂರು

ತಮಿಳುನಾಡಿನಲ್ಲಿ ಅಬುಧಾಬಿ ನ್ಯಾಷನಲ್ ಎನರ್ಜಿ ಕಂಪನಿ ಪಿಜೆಎಸ್ಸಿ (ಟಕಾ) ಮಾಲೀಕತ್ವದ ಟಿಎಕ್ಯೂಎ –ನೆಯ್ವೇಲಿ ಪವರ್ ಕಂಪನಿ ಪ್ರೈವೇಟ್ ಲಿಮಿಟೆಡ್ (ಟಕಾ ನೆಯ್ವೇಲಿ) ನ ಶೇ.100 ಪಾಲನ್ನು ಸ್ವಾಧೀನಪಡಿಸಿಕೊಳ್ಳುವ ಮೂಲಕ ದೇಶೀಯ ಮೂಲ ಸೌಕರ್ಯ ಸಂಸ್ಥೆ ಮೆಘಾ ಇಂಜಿನಿಯರ್ ಅಂಡ್ ಇನ್ಫ್ರಾಸ್ಟ್ರಕ್ಚರ್ ಸಂಸ್ಥೆಯು ವಿದ್ಯುತ್ ಉತ್ಪಾದನಾ ಕ್ಷೇತ್ರದಲ್ಲಿನ ತನ್ನ ಪ್ರಾಬಲ್ಯವನ್ನು ಹೆಚ್ಚಿಸಿಕೊಂಡಿದೆ.

ಈ ಸ್ವಾಧೀನವು ಎಂಇಐಎಲ್ ವಿಸ್ತೃತ ಇಂಧನ ಕ್ಷೇತ್ರದ ಬಂಡವಾಳಕ್ಕೆ ಗಮನಾರ್ಹ ಸೇರ್ಪಡೆಯಾಗಿದೆ . ಟಾಕಾ (TAQA) ನೆಯ್ವೇಲಿ ತಮಿಳುನಾಡಿನ ನೆಯ್ವೇಲಿಯಲ್ಲಿರುವ 250 ಮೆಘಾ ವ್ಯಾಟ್ ಲಿಗ್ನೈಟ್ ಆಧಾರಿತ ವಿದ್ಯುತ್ ಸ್ಥಾವರವನ್ನು ಹೊಂದಿದ್ದು, ಅದನ್ನು ನಿರ್ವಹಿಸುತ್ತಿದೆ. ಈ ವಿದ್ಯುತ್ ಸ್ಥಾವರವು ಸ್ಥಳೀಯ ಡಿಸ್ಕಾಮ್ನೊಂದಿಗೆ ದೀರ್ಘಾವಧಿಯ ವಿದ್ಯುತ್ ಕಡಿತ ಬದ್ಧತೆಯನ್ನು ಹೊಂದಿದೆ ಮತ್ತು ಬೆಳೆಯುತ್ತಿರುವ ಇಂಧನ ಬೇಡಿಕೆಗಳನ್ನು ಪೂರೈಸಲು ವಿಶ್ವಾಸಾರ್ಹ ಮತ್ತು ಪರಿಣಾಮಕಾರಿ ವಿದ್ಯುತ್ ಅನ್ನು ತಲುಪಿಸುವ ಸುಸ್ಥಾಪಿತ ದಾಖಲೆಯನ್ನು ಹೊಂದಿದೆ. 5.2 ಜಿಗಾ ವ್ಯಾಟ್ ಗಿಂತ ಹೆಚ್ಚಿನ ಉತ್ಪಾದನಾ ಸ್ವತ್ತುಗಳನ್ನು ಹೊಂದಿರುವ ಈ ಸ್ವಾಧೀನವು ಇಂಧನ ಕ್ಷೇತ್ರದಲ್ಲಿನ ಎಂ.ಇ.ಐ.ಎಲ್ ಸ್ಥಾನವನ್ನು ಬಲಪಡಿಸುತ್ತದೆ ಮತ್ತು ವಿಶ್ವಾಸಾರ್ಹ ಸೇವೆಯತ್ತ ಕೊಂಡೊಯ್ಯಲಿದೆ.ಉತ್ತಮ ಗುಣಮಟ್ಟದ ಇಂಧನ ಸ್ವತ್ತುಗಳನ್ನು ಹೊಂದುವ ಮತ್ತು ನಿರ್ವಹಿಸುವ ಪ್ರಯಾಣದಲ್ಲಿ ಈ ಸ್ವಾಧೀನವು ಒಂದು ಮೈಲಿಗಲ್ಲು, ಮತ್ತು ಇದು ಪ್ರಮುಖ ಮೂಲಸೌಕರ್ಯ ಸ್ವತ್ತುಗಳ ಮಾಲೀಕತ್ವದೊಂದಿಗೆ ಇ.ಪಿ.ಸಿ ಶ್ರೇಷ್ಠತೆಯನ್ನು ಪೂರೈಸುವ ನಮ್ಮ ದೀರ್ಘಕಾಲೀನ ಕಾರ್ಯತಂತ್ರವನ್ನು ಮುನ್ನಡೆಸುತ್ತದೆ. ರಾಷ್ಟ್ರೀಯ ಇಂಧನ ಭದ್ರತೆಯನ್ನು ಹೆಚ್ಚಿಸುವ, ವಿಶ್ವಾಸಾರ್ಹ ಪೂರೈಕೆಯನ್ನು ಖಚಿತಪಡಿಸುವ ಮತ್ತು ಭಾರತದ ದೀರ್ಘಕಾಲೀನ ಬೆಳವಣಿಗೆಯನ್ನು ಬೆಂಬಲಿಸುವ ಕಾರ್ಯತಂತ್ರದ ಹೂಡಿಕೆಗಳ ಮೂಲಕ ಇಂಧನ ವಲಯದಾದ್ಯಂತ ನಮ್ಮ ಹೆಜ್ಜೆ ಗುರುತನ್ನು ವಿಸ್ತರಿಸುವತ್ತ ಪ್ರಮುಖ ಹೆಜ್ಜೆಯಾಗಿದೆ.

ಉಷ್ಣ, ಜಲ ಮತ್ತು ನವೀಕರಿಸಬಹುದಾದ ಇಂಧನ ಸ್ವತ್ತುಗಳನ್ನು ಒಳಗೊಂಡ ಸಮತೋಲಿತ ಮತ್ತು ಸುಸ್ಥಿರ ಉತ್ಪಾದನಾ ಬಂಡವಾಳವನ್ನು ಅಭಿವೃದ್ಧಿಪಡಿಸಲು ನಾವು ಬದ್ಧರಾಗಿದ್ದೇವೆ. ಎಂದು ಎಂ.ಇ.ಐ.ಎಲ್ ಸಮೂಹ ಸಂಸ್ಥೆಗಳ ಪ್ರಮುಖ ಸಲೀಲ್ ಕುಮಾರ್ ಮಿಶ್ರಾ, ಹರ್ಷ ವ್ಯಕ್ತಪಡಿಸಿದ್ದಾರೆ.

ಟಾಕಾ– ನೆಯ್ವೇಲಿಯ ಸ್ವಾಧೀನವು ಸಾವಯವ ಮತ್ತು ಅಜೈವಿಕ ಬೆಳವಣಿಗೆಯ ಮೂಲಕ ದೃಢವಾದ, ವೈವಿಧ್ಯಮಯ ಇಂಧನ ಬಂಡವಾಳವನ್ನು ನಿರ್ಮಿಸುವ ಎಂ.ಇ.ಐ.ಎಲ್ ದೃಷ್ಟಿಕೋನಕ್ಕೆ ಹೊಂದಿಕೆಯಾಗುತ್ತದೆ ಮತ್ತು ಭಾರತದ ವಿದ್ಯುತ್ ಕ್ಷೇತ್ರದ ಮೂಲಭೂತ ಅಂಶಗಳಲ್ಲಿ ಕಂಪನಿಯ ವಿಶ್ವಾಸವನ್ನು ಪ್ರತಿಬಿಂಬಿಸುತ್ತದೆ.

**ಹಲವು ರಂಗಗಳಲ್ಲಿ ಎಂ.ಇ.ಐ.ಎಲ್**



**ಮೇಘಾ ಇಂಜಿನಿಯರಿಂಗ್ ಅಂಡ್ ಇನ್ಫ್ರಾಸ್ಟ್ರಕ್ಚರ್ ಸಂಸ್ಥೆ (ಎಂ.ಇ.ಐ.ಎಲ್) ಭಾರತದ ಪ್ರಮುಖ ವೈವಿಧ್ಯಮಯ ಸಂಘಟಿತ ದೇಶೀಯ ಸಂಸ್ಥೆಗಳಲ್ಲಿ ಒಂದಾಗಿದೆ, ಇದು ಮೂಲಸೌಕರ್ಯ, ಇಂಧನ, ಹೈಡ್ರೋಕಾರ್ಬನ್ಗಳು, ಉತ್ಪಾದನೆ ಮತ್ತು ಸಾರಿಗೆಯಲ್ಲಿ ಆಸಕ್ತಿ ಹೊಂದಿದೆ.ವಿದ್ಯುತ್, ತೈಲ ಮತ್ತು ಅನಿಲ, ನೀರಾವರಿ, ನೀರು ನಿರ್ವಹಣೆ ಮತ್ತು ಕೈಗಾರಿಕಾ ಉತ್ಪಾದನೆ ಸೇರಿದಂತೆ ಬಹು ಕ್ಷೇತ್ರಗಳಲ್ಲಿ ಕಾರ್ಯನಿರ್ವಹಿಸುತ್ತಿದೆ ಮತ್ತು ಭಾರತದ ಸುಸ್ಥಿರ ಅಭಿವೃದ್ಧಿ ಮತ್ತು ಸ್ವಾವಲಂಬನೆಗೆ ಕೊಡುಗೆ ನೀಡುವ ದೊಡ್ಡ ಪ್ರಮಾಣದ, ಸಂಕೀರ್ಣ ಇಂಜಿನಿಯರಿಂಗ್ ಯೋಜನೆಗಳನ್ನು ಕಾರ್ಯಗತಗೊಳಿಸುವಲ್ಲಿ ಕಂಪನಿಯು ಬಲವಾದ ದಾಖಲೆಯನ್ನು ನಿರ್ಮಿಸಿ ಮುನ್ನಡೆದಿದೆ.**

## ಸಿರಿಗನ್ನಡ ಐಸಿರಿ



**ಶ್ರೀ ಸುಭಾಷ್ ಚವ್ಹಾಣ, ಸುಹೇಚ ಪರಮವಾಡಿ**

ಕನ್ನಡ ಕನ್ನಡ ಸಿರಿಗನ್ನಡವೆನ್ನಿ
ನಮ್ಮಯ ಸಂಗಡ ಕಬ್ಬಿಗರೆ ಬನ್ನಿ
//ಪ//
ಜೈ ಕನ್ನಡ ಜೈ ಕನ್ನಡ ಜೈ ಕನ್ನಡಾಂಬೆ ನುಡಿಗನ್ನಡ
ಜಯತು ಜಯತು ಜಯಕಾರ ಸವಿಗನ್ನಡ
ನಲಿ ನಲಿದು ಕುಣಿ ಕುಣಿದಾಡುವ ಈ ಹಾಡಿಗೆ
ಹರುಷ ತರುವ ಮಮತೆಯಿಂದಲೇ ಕರುನಾಡಿಗೆ //1//
ನಿಜದರಿವಿನ ಹಣತೆ ಗುರುವಾಗಿ ಗುರಿತೋರಿ ಬೆಳಗಲಿ
ನಾಡೊಲವಿನ ಪ್ರಣತೆ ಗೆಲ್ಮೆದಾರಿ ತೋರಿ
ಹೊಳೆಯಲಿ
ಆರದಮರ ದೀವಿಗೆ ಬಂಧದ
ಬಂಧುರ ಒಲವಿದೆ
ಪಣತೊಟ್ಟು ಕಂಕಣಕಟ್ಟಿ
ಅನಂತಾನಂತ ಗೆಲುವಿದೆ
//2//
ಕನ್ನಡಮ್ಮನ ಪೂಜೆಗೆ ನಮ್ಮ ನಮ್ಮ
ತನದುಳಿವಿಗೆ ಬೆಳಗಿಸಿ ಹಣತೆ
ಗಾಡಂಧಕಾರದ ಗೋಳಿಗೆ
ಕರುನಾಡ ಚರಿತೆಯ ಕರುಳ ಬಂಧದೆಳ್ಗೆಗೆ
ಜೀವಾತ್ಮ ಪ್ರಾಣಾರ್ಪಣವಾಗಲಿ
ನಾಡು ನುಡಿ ಸೇವೆಗೆ //3//
ಜೈ ಕನ್ನಡ, ನುಡಿಗನ್ನಡ, ಸಿರಿಗನ್ನಡ, ಸವಿಗನ್ನಡ
ಜೈ ಕನ್ನಡ, ನುಡಿಗನ್ನಡ, ಸಿರಿಗನ್ನಡ, ಸವಿಗನ್ನಡ,
ಸಿರಿಗನ್ನಡ, ನುಡಿಗನ್ನಡ, ಸವಿಗನ್ನಡ, ಜೈ ಕನ್ನಡ...



–ಶಿಕ್ಷಕರು, ಸಹಿಪ್ರಾಶಾಲೆ ಮಂಜುನಾಥ ನಗರ, ಹುಬ್ಬಳ್ಳಿ ಶಹರ 79750 26724

## ಕನ್ನಡವೇ ಉಸಿರು ಎನ್ನುತ

ಸಾಮಾಜಿಕ ಕಳಕಳಿ



**ಹೆಚ್.ಎಸ್. ಪ್ರತಿಮಾ**
ಲೇಖಕರು ಸಾಮಾಜಿಕ ಚಿಂತಕಿ, ಶಿಕ್ಷಕಿ, ಹಾಸನ

ನಮ್ಮ ಮಾತೃಭಾಷೆ ಉಸಿರದು ಕನ್ನಡ ಎನ್ನೋಣ
ಸ್ವಾಭಿಮಾನದ ಬದುಕಿನಿಂದ ಭಕ್ತಿಯಲಿ ನಮಿಸೋಣ
ಕರುನಾಡಲಿ ಕನ್ನಡಾಂಬೆಗೆ ಬೆಲೆ ನೀಡೋಣ
ಇತಿಮಿತಿಯ ಆಸೆ ಆಕಾಂಕ್ಷೆ ಹೊಂದೋಣ.....
ಕನ್ನಡವೇ ನಮಗೆ ಎಲ್ಲಾ ಎನ್ನುತ, ಸಾಗುತ
ಬಾಳಲಿ ನೀ ಋಣಿಯಾಗಿ ಕನ್ನಡ ಕೇಳತ
ತನು–ಮನದಿ ಜನರೆಲ್ಲ ಕನ್ನಡಮ್ಮ ಎನ್ನಿರಿ
ಕನ್ನಡವೇ ಉಸಿರು ಎನ್ನುತ ಕೈ ಮುಗಿಯುತಿರಿ......
ಕದವಿರದ ಮನೆ ಬೇಕೆ? ಎಂಬಂತೆ ಹೇಳಿ
ಉಸಿರು ಇರದ ಜೀವ ಬೇಕೆ? ಎಂದು ಕೇಳಿ
ಪ್ರೀತಿ ಇಲ್ಲದ ಸಂಬಂದವೇಕೆ? ಬಾಳಿ ನೋಡಿ



ಕನ್ನಡವಿಲ್ಲದ ನಾಡು, ಭಾಷೆ ಏಕೆ?
ಮನದಿ ಕಾಡಿ
ತಂಪು–ಕಂಪು ನಮ್ಮಕನ್ನಡದ
ಸುಂದರ ನಾಡು
ಸಂಸ್ಕೃತಿಗೆ ಹೆಸರಾದ ನೆಲೆಯ ಬಿಡು
ನೀಡಿರಿ ಕೃತಜ್ಞತೆಯ ಕಾರ್ಯದಿ
ಭಾವ
ಸಂತಸದ ಆಗರವೇ ನಮ್ಮೆಲ್ಲರ
ಹೊಂದಾಣಿಕೆ ಜೀವ.......
ಕನ್ನಡದ ಕಂಪ ಎಲ್ಲೆಡೆಯೂ
ಸಾರುತ ಸಾಗುವ
ಬನ್ನಿ ನಮ್ಮ ನುಡಿಯ ಪಸರಿಸೋಣ
ಜೀವನವ
ನಾವೆಲ್ಲ ಒಂದೇ ಎಂದು ಸಾರ್ಥಕತೆಯ ಕಾಣೋಣ
ಅನ್ನತಿಂದ ಋಣವ ತೀರಿಸಿ ಕನ್ನಡಕ್ಕೆ ಜೈ ಎಂದು ಹೇಳೋಣ.....


## ಮಾಜಿ ಗೃಹ ಮಂತ್ರಿ, ಸರ್ದಾರ್ ವಲ್ಲಭಭಾಯಿ ಪಟೇಲ್ ರವರ 150ನೇ ವರ್ಷದ ಜನ್ಮದಿನಾಚರಣೆ

ಕಲಾ ಸಾಹಿತ್ಯ



**ಕೃಷ್ಣಪ್ಪ ಲೇಖಕರು**
ಪ್ರಗತಿ ಪರ ಚಿಂತಕ ಹಾಗೂ ವಿಮರ್ಶಕರು

ಸರ್ದಾರ್ ವಲ್ಲಭಾಯಿ ಪಟೇಲ್ ರವರು 1875 ಅಕ್ಟೋಬರ್ 31 ರಂದು ಗುಜರಾತ್‌ನಲ್ಲಿ ಜನಿಸಿದರು. ತಂದೆ ಜವೇರ ಬಾಯಿ, ತಾಯಿ ಲಾಡ್ಬಾ. ಅಪಾರವಾದ ದೇಶಭಕ್ತಿ,ಬಡವರ, ರೈತರ, ದೀನದಲಿತರ ಪರವಾಗಿ ನಿಂತವರಲ್ಲಿ ಒಬ್ಬರಾಗಿದ್ದವರು. ಇವರ ವ್ಯಕ್ತಿತ್ವದ ಬಗ್ಗೆ ವರ್ಣಿಸಲು ಮಾತುಗಳೇ ಬರುತ್ತಿಲ್ಲ. ಅಂತಹ ಅದ್ಭುತ– ಅತ್ಯದ್ಭುತ ಆಡಳಿತಗಾರರು. ಇವರ ಧೈರ್ಯ, ಸಾಹಸ, ಚಾಣಾಕ್ಷತನದಿಂದ ಭಾರತದ ಒಕ್ಕೂಟ ವ್ಯವಸ್ಥೆಯಲ್ಲಿ ಮುಖ್ಯ ಪಾತ್ರ ಸ್ಮರಣೀಯ. ಕೇಂದ್ರದ ಗೃಹ ಮಂತ್ರಿಯಾಗಿ ಅತ್ಯಂತ ಸಮರ್ಥವಾಗಿ ಹುದ್ದೆಯನ್ನು ನಿರ್ವಹಿಸಿದ ಕೀರ್ತಿ ಅವರಿಗೆ ಸಲ್ಲುತ್ತದೆ. ಕಾರಣಾಂತರದಿಂದ ಭಾರತದ ಪ್ರಧಾನಮಂತ್ರಿ ಹುದ್ದೆ ಕೈತಪ್ಪಿದಾಗ ಮನ ನೊಂದುಕೊಂಡ ಜೀವ. ಸನ್ಮಾನ್ಯರಿಗೆ ಭಾರತದ ಉಕ್ಕಿನ ಮನುಷ್ಯ, ಭಾರತದ ಬಿಸ್ಮಾರ್ಕ್, ಸರ್ದಾರ್, ಹಿಮ ಮುಚ್ಚಿದ ಜ್ವಾಲಾಮುಖಿ ಬಿರುದುಗಳ ಜೊತೆಗೆ ಭಾರತ ದೇಶದ ಅತ್ಯುನ್ನತ ನಾಗರೀಕ ಪ್ರಶಸ್ತಿಯಾದ ಭಾರತರತ್ನ ಪ್ರಶಸ್ತಿಯನ್ನು ನೀಡಿ ಗೌರವಿಸಿತು. ಇಂತಹ ದೇಶಭಕ್ತ ,ರಾಷ್ಟ್ರಪ್ರೇಮಿ, ರಾಷ್ಟ್ರನಾಯಕ,ಸರ್ವ ಸಮರ್ಪಣಾ ಭಾವದಿಂದ ದೇಶ ಸೇವೆ ಸಲ್ಲಿಸಿದ ಸರ್ದಾರ್ ವಲ್ಲಭಾಯ್ ಪಟೇಲ್ ರವರು 1950 ಡಿಸೆಂಬರ್ 15 ರಂದು ತಮ್ಮ ಭೌತಿಕ ಶರೀರವನ್ನು ತನ್ನ 75 ನೇ ವಯಸ್ಸಿನಲ್ಲಿ ತೊರೆದರು.



ಇಂದು ಅವರ 150 ನೇ ವರ್ಷದ ಜನ್ಮ ದಿನ. ಇಂದು ನಾವುಗಳು ಶ್ರದ್ಧಾಭಕ್ತಿಯೊಂದಿಗೆ ಅವರ ಹುಟ್ಟುಹಬ್ಬವನ್ನು ಆಚರಿಸುವುದು ನಮ್ಮೆಲ್ಲರ ಆದ್ಯ ಕರ್ತವ್ಯ, ಹೊಣೆಗಾರಿಕೆ ಮತ್ತು ಜವಾಬ್ದಾರಿ ಹೌದು. ಸರ್ದಾರ್ ಪಟೇಲ್ ರವರ ಆದರ್ಶ, ಮಾರ್ಗದರ್ಶನ,ಆಡಳಿತ, ಪ್ರಮಾಣಿಕತೆ ಮಿಗಿಲಾಗಿ ಮಾನವೀಯತೆಯನ್ನು ಪಾಲಿಸಿದ್ದೇ ಆದರೆ ಅವರ ಆತ್ಮಕ್ಕೆ ಶಾಂತಿ ಮತ್ತು ಸದ್ಗತಿ ದೊರಕುತ್ತದೆ.

## ಭಾರತ ರತ್ನ ಹಾಗೂ ಮಾಜಿ ಪ್ರಧಾನಿ ಶ್ರೀಮತಿ: ಇಂದಿರಾಗಾಂಧಿಯವರ 41ನೇ ವರ್ಷದ ಪುಣ್ಯಸ್ಮರಣೆ




ಶ್ರೀಮತಿ ಇಂದಿರಾಗಾಂಧಿಯವರು 1917 ನವಂಬರ್ 19 ರಂದು ಅಲಹಾಬಾದಿನಲ್ಲಿ ಜನಿಸಿದರು.ತಂದೆ ಜವಾಹರ್ಲಾಲ್ ನೆಹರು ತಾಯಿ ಕಮಲ ನೆಹರು.

ಪಂಡಿತ್ ಜವಾಹರ್ ಲಾಲ್ ನೆಹರು,ಜಿಎಲ್ ನಂದಾ, ಲಾಲ್ ಬಹದ್ದೂರ್ ಶಾಸ್ತ್ರಿಯವರ ನಂತರ ಭಾರತ ದೇಶದ ಪ್ರಧಾನಮಂತ್ರಿ ಹುದ್ದೆಯ ಅಧಿಕಾರ ಚುಕ್ಕಾಣಿಯನ್ನು ಹಿಡಿದು ಸುಮಾರು 14 ವರ್ಷಗಳ ಕಾಲ ಸಮರ್ಥವಾಗಿ ನಿರ್ವಹಿಸಿದ ಒಬ್ಬ ಧೀಮಂತ ಮಹಿಳೆ. ಅವರ ಅವಧಿಯಲ್ಲಿ ಅನೇಕ ಪ್ರಗತಿಪರ ಅಭಿವೃದ್ಧಿಗಳನ್ನು ಮಾಡಿರುವ ದಾಖಲೆಯಿದೆ.

ಶ್ರೀಮತಿಯವರು ದೇಶದ ಸಮಗ್ರತೆಯ ಸರ್ವತೋಮುಖ ಅಭ್ಯುದಯಕ್ಕಾಗಿ, ನಿರಂತರವಾಗಿ ಶ್ರಮಿಸಿದ ರಾಷ್ಟ್ರನಾಯಕಿಯಾಗಿ ವಿಶ್ವದ ಗಮನ ಸೆಳೆದ ದಿಟ್ಟ ಮಹಿಳೆ. ಭಾರತ ಸರ್ಕಾರ ಇವರ ಸೇವೆಯನ್ನು ಪರಿಗಣಿಸಿ ಭಾರತರತ್ನ ಪ್ರಶಸ್ತಿ ನೀಡಿ ಗೌರವಿಸಿತು. ಶ್ರೀಮತಿಯವರು ಅಕ್ಟೋಬರ್ 31,1984 ರಂದು ತಮ್ಮ ಅಂಗರಕ್ಷಕರ ಕಡೆಯಿಂದ ಹುತಾತ್ಮರಾದರು.

ಅಂದು ಇಡೀ ವಿಶ್ವವೇ ಇಂದಿರಾಗಾಂಧಿಯವರ ಮರಣಕ್ಕಾಗಿ ಶೋಕಿಸಿತು. ಅವರ ಸ್ಮರಣಾರ್ಥ ಆ ದಿನವನ್ನು ಏಕತಾ ದಿನವನ್ನಾಗಿ ರಾಷ್ಟ್ರದಲ್ಲಿ ಆಚರಿಸಲಾಗುತ್ತಿದೆ. ಇಲ್ಲಿಗೆ ಅವರ 41 ನೇ ವರ್ಷದ ಪುಣ್ಯಸ್ಮರಣೆಯ ದಿನವಾದ ಇಂದು ಸ್ಮರಿಸಿ ನೆನೆಯುತ್ತಾ ಅವರ ಆತ್ಮಕ್ಕೆ ಶಾಂತಿ ಮತ್ತು ಸದ್ಗತಿ ದೊರಕಲೆಂದು ಆ ಭಗವಂತನಲ್ಲಿ ಪ್ರಾರ್ಥಿಸೋಣ.

## ರಾಮಾಯಣ



ರಾವಣನು ಸೀತಾದೇವಿಯ ಬಳಿಗೆ ಬಂದದ್ದು

• ಹಿಂದಿನ ಸಂಚಿಕೆಯಿಂದ 120 ನೆಯ ಅಧ್ಯಾಯ

ಆನಂತರ ಶ್ರೀರಾಮನ ಆಶ್ರಮಕ್ಕೆ ಹೋಗಿ. ಚಂದ್ರಸೂರ್ಯರಿಲ್ಲದ ಸಂಧ್ಯಾಕಾಲದಲ್ಲಿ ಮಹತ್ತಾದ ಅಂಧಕಾರವು ಕವಿಯುವಂತೆ ರಾಮ ಲಕ್ಷ್ಮಣರಿಲ್ಲದ ಸಮಯದಲ್ಲಿ ಸೀತಾದೇವಿಯ ಸಮೀಪವನ್ನು ಸೇರಿ, ಚಂದ್ರನಿಂದ ವಿರಹಿತಳಾದ ರೋಹಿಣೀ ನಕ್ಷತ್ರದಂತೆ ಒಪ್ಪುತ್ತಿದ್ದ ಸೀತಾದೇವಿಯನ್ನು ಕಂಡನು. ಆ ಸಮಯದಲ್ಲಿ ತಪೋವನದಲ್ಲಿದ್ದ ವೃಕ್ಷಗಳೂ ಕೂಡ ಭಯಪಟ್ಟವೋ ಎಂಬಂತೆ ಅಲ್ಲಾಡದಿದ್ದವು. ವಾಯುವು ಬೀಸದಿತ್ತು. ಶೀಘ್ರವಾದ ಪ್ರವಾಹವುಳ್ಳ ಗೋದಾವರಿ ನದಿಯೂ ಮಂದಪ್ರವಾಹವುಳ್ಳದ್ದಾಗಿತ್ತು.

ದುಷ್ಟಚಾರಿತ್ರವುಳ್ಳ ರಾವಣನು ಹುಲ್ಲುಮುಚ್ಚಿ ಅಳವು ತಿಳಿಯದ ಹಾಗಿರುವ, ಬಾವಿಯಂತೆ ರಾಕ್ಷಸಸ್ವರೂಪವು ಎದ್ದು ಕಾಣದಹಾಗೆ ಸೌಮ್ಯಾಸ್ವರೂಪದ ಯತಿವೇಷವನ್ನು ಧರಿಸಿ ಚಿತ್ತ ನಕ್ಷತ್ರದ ಬಳಿಗೆ ಶನಿಯು ಬಂದಂತೆ ಸೀತಾದೇವಿಯ ಮುಂದೆ ಬಂದು ನಿಂತನು; ಮೋಹನಾಂಗಿಯೂ ಮನೋಹರವಾದ ದಂತಮಕ್ರಿಯುಳ್ಳವಳೂ ಪೂರ್ಣಚಂದ್ರನಂತೆ ಮುಖವುಳ್ಳವಳೂ ಪರ್ಣಶಾಲೆಯಲ್ಲಿ ಕುಳಿತುಕೊಂಡು ಶ್ರೀರಾಮಧ್ಯಾನವನ್ನು ಮಾಡುತ್ತ ಪೀತಾಂಬರವನ್ನುಟ್ಟು ಮೊಳಕಾಲಮೇಲೆ ಅಂಗೈಗಳನ್ನಿಟ್ಟುಕೊಂಡು ತಲೆಯೆತ್ತಿ ನೋಡುತ್ತ ಶೋಕಪರವಶಳೂ ಆಗಿದ್ದ ಆ ದೇವಿಯನ್ನು ಕಂಡು ಮದನಬಾಣಗಳಿಗೆ ಗುರಿಯಾದನು.

ಮಹಾನಿಷ್ಠನಾದ ಯತಿಯಂತೆ ಉಪನಿಷದ್ವಾಕ್ಯಗಳನ್ನು ಪಠಿಸುತ್ತ ಹತ್ತಿರಕ್ಕೆ ಹೋಗಿ ಕೈಯಲ್ಲಿ ಕಮಲವನ್ನು ಧರಿಸಿದ ಸಾಕ್ಷಾತ್ ಮಹಾಲಕ್ಷ್ಮಿಯಂತೆ ಒಪ್ಪುತ್ತಿದ್ದ ಆ ದೇವಿಯನ್ನು ಕುರಿತು ಹೀಗೆ ಮಾತನಾಡಿದನು ಎಲ್ ಸ್ತ್ರೀಯೆ, ಪೀತಾಂಬರವನ್ನುಟ್ಟುಕೊಂಡು ಪುಟವಿಕ್ಕಿದ ಚಿನ್ನದಂತೆ ತನುಕಾಂತಿಯುಳ್ಳ ನೀನಾರು ನಿನ್ನ ಶರೀರವು ಹೊಂದಾವರೆ ಪುಷ್ಪಗಳ ಸಮೂಹಗಳಿಂದ ದೇದೀಪ್ಯಮಾನವಾದ ಎಳೆಯ ತಾವರೆ ಬಳ್ಳಿಯಂತೆ ಒಪ್ಪುತ್ತಿದೆ ನೀನಾರು ಸಾಕ್ಷಾತ್ ಭುವನಾಧಿದೇವತೆಯೋ ಮಹಾಲಕ್ಷ್ಮಿಯೋ ಮೂರು ಲೋಕಗಳನ್ನೂ ಜಯಿಸಿದ ಮನ್ಮಥನ ಕೀರ್ತಿಯೋ ಅಪ್ಸರಃಸ್ತ್ರೀಯೋ ಮನಸ್ಸು ಬಂದಂತೆ ಸಂಚರಿಸುವ ರತೀದೇವಿಯೋ ನಿನ್ನ ದಂತಗಳು ಸಣ್ಣವಾಗಿಯೂ ಸಮವಾಗಿಯೂ ನಯವಾಗಿಯೂ ಬಿಳುಪಾಗಿಯೂ ಮನೋಹರ ವಾಗಿವೆ. ನಿನ್ನ ಕಣ್ಣುಗಳು ಕಮಲದ ಎಸಳಿನಂತೆ ತೆರಪಾಗಿ ಕಡೆಗಣ್ಣು ಕೆಂಪಾಗಿ ನುಣುಪಾಗಿವೆ. ನಿನ್ನ ಜಘನ ಪ್ರದೇಶವು ಅತಿವಿಶಾಲವಾಗಿದೆ. ತೊಡೆಗಳು ಆನೆಯ ಸೊಂಡಿಲಂತೆ ಕ್ರಮವರ್ತುಳವಾಗಿ ಕೋಮಲವಾಗಿವೆ. ಮೋಹನಾಂಗಿ, ನದೀಪ್ರವಾಹವು ತೀರಗಳನ್ನು ಕರಗಿಸುವಂತೆ ನಿನ್ನ ರೂಪವು ನನ್ನ ಮನಸ್ಸನ್ನು ಕರಗಿಸುತ್ತಿದೆ. ನಿನ್ನಂಥ ರೂಪವತಿಯಾದ ಸ್ತ್ರೀಯನ್ನು ಮೂರುಲೋಕದಲ್ಲಿಯೂ ನಾನು ಕಾಣಲಿಲ್ಲ. ಈ ಸ್ಥಳದಲ್ಲಿ ಏಕಾಂತವಾಸವಾಗಿರುವ ನಿನ್ನನ್ನು ಕಂಡು ನನಗೆ ಉನ್ಮಾದ ವಾಗುತ್ತಿದೆ. ಈ ಸ್ಥಳವು ಘೋರಾಕಾರರೂ ಕಾಮರೂಪಿಗಳೂ ಆದ ರಾಕ್ಷಸರ ವಾಸಭೂಮಿ, ಇಲ್ಲಿ ವಾಸವಾಗಿರುವುದು ನಿನಗೆ ಯೋಗ್ಯವಲ್ಲ.

ಮುಂದುವರಿಯುವುದು...

## ಸರ್ದಾರ್ ವಲ್ಲಭಭಾಯ್ ಪಟೇಲರ ಸೇವಾ ಕೈಂಕರ್ಯಗಳು ಅಪಾರ




**ಸಂಗಮೇಶ ಎನ್ ಜವಾದಿ**

ಅಪ್ರತಿಮ ಸ್ವಾತಂತ್ರ್ಯ ಹೋರಾಟಗಾರ, ರಾಜಕೀಯ ಮುತ್ಸದಿ, ಸಂಘಟನಾ ಶಕ್ತಿ, ವಾಕ್ ಚಾತುರ್ಯ, ಯೋಜನೆಗಳ ಪಿತಾಮಹ, ಈ ದೇಶ ಕಂಡ ಅಪ್ರತಿಮ ದೇಶಭಕ್ತ ಸರ್ದಾರ್ ವಲ್ಲಭಭಾಯ್ ಪಟೇಲರ ಸೇವಾ ಕೈಂಕರ್ಯಗಳು ಅಪಾರ. ಶಾಶ್ವತ ನೆನಪಿನಲ್ಲಿ ಉಳಿಯುವ ಹಲವಾರು ದೇಶನಾಯಕರುಗಳಲ್ಲಿ 'ಉಕ್ಕಿನ ಮನುಷ್ಯ' ಎಂದೇ ಪ್ರಖ್ಯಾತಿ ಪಡೆದಿದ್ದ ಸರ್ದಾರ್ ವಲ್ಲಭಭಾಯ್ ಪಟೇಲ್ ರವರು ಪ್ರಮುಖರಾಗಿ ನಮ್ಮೆದುರು ನಿಲ್ಲುತ್ತಾರೆ.

ಗಾಂಧಿಯವರ ನೇತೃತ್ವದಲ್ಲಿ ನಡೆದ ಚಂಪಾರಣ್ಯ ಸತ್ಯಾಗ್ರಹದ ನಂತರ ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಜಯಗಳಿಸಲು ಗಾಂಧಿ ಸಮರ್ಥರು ಎಂಬುದೂ ಸರ್ದಾರರ ಅರಿವಿಗೆ ಬಂತು ಹಿರಿಯ ಚೇತನನಿಗಿದ್ದ ದೇಶಭಕ್ತಿ, ಸರಳತೆ, ಶ್ರದ್ಧೆಯನ್ನು ಸ್ವತಃ ಹತ್ತಿರದಿಂದ ನೋಡಿದ್ದ ಪಟೇಲರು ಬಹುಬೇಗ ಆಕರ್ಷಿತರಾಗಿ ಗಾಂಧಿಗೆ ಬಲು ಆಪ್ತರಾಗಿಬಿಟ್ಟರು.

ಅಂತೆಯೇ ಪಟೇಲರ ಆರಂಭಿಕ ಜೀವನದ ಬಗ್ಗೆ ತಿಳಿದುಕೊಳ್ಳುವುದಾದರೆ ಮತ್ತು ಅಕ್ಟೋಬರ್ 31,1875 ರಂದು ನಾಡಿಯಾದ್ ಗುಜರಾತ್ ಬಾಂಬೆ ಪ್ರೆಸಿಡೆನ್ಸಿಯಲ್ಲಿ ಜನ್ಮತಾಳಿದರು. ಬಾಲ್ಯದಿಂದಲೇ ಅಪ್ಪನ ಶಿಸ್ತು ಎಂಬ ಚೌಕಟ್ಟಿನಲ್ಲಿ ಬೆಳೆದು ವಿನಯಶೀಲರಾಗಿದ್ದರು. ಬಾಲಕನಿರುವಾಗಲೇ ದೇಶದ ಬಗ್ಗೆ ಅತಿ ಆಸಕ್ತಿ ಹೊಂದಿದ್ದ ಪಟೇಲರು 'ಇನ್ಸ್ ಆಫ್ ಕೋರ್ಟ್‌ನಲ್ಲಿ ಐ.ಐ ಪದವಿ ಪಡೆದು ಯಶಸ್ವಿ ವಕೀಲರಾಗಿ ಜನಮನ್ನಣೆಗಳಿಸಿದ್ದರು. ತರುವಾಯ ಗುಜರಾತ್ ನ ಖೇಡಾ, ಬೊರ್ಸಾದ್ ಮತ್ತು ಬರ್ಡೋಲಿಗಳಿಂದ ರೈತರನ್ನು ಬ್ರಿಟಿಷ್ ಆಳ್ವಿಕೆಯ ವಿರುದ್ಧ ಅಹಿಂಸಾತ್ಮಕ, ನಾಗರಿಕ ಅಸಹಕಾರ ಚಳುವಳಿಗಾಗಿ ಸಂಘಟಿಸಿದರು. ಈ ಹೊತ್ತಿಗಾಗಲೇ ಗುಜರಾತ್ ನ ಪ್ರಭಾವಿ ನಾಯಕನಾಗಿ ಹೊರಹೊಮ್ಮಿದ್ದರು. ತರುವಾಯ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ನ 49ನೇ ಅಧ್ಯಕ್ಷರಾಗಿ ನೇಮಕಗೊಂಡು, ಕಾಂಗ್ರೆಸ್ ಪಕ್ಷವನ್ನು 1934 ಮತ್ತು 1937ರ ಚುನಾವಣೆಯಲ್ಲಿ ಮುನ್ನಡೆಸಿ, ತಮ್ಮ ಛಾಪನ್ನು ಯಶಸ್ವಿಯಾಗಿ ಬೀರಿದರು. ಇದರ ಜೊತೆಗೆ ಕ್ವಿಟ್ ಇಂಡಿಯಾ ಚಳುವಳಿಗೂ ಪ್ರೇರೆಪಿಸಿದರು. ಇದೇ ವೇಳೆ 1947ರ ಸ್ವತಂತ್ರ ಭಾರತದ ಪ್ರಥಮ ಪ್ರಧಾನಮಂತ್ರಿಯಾಗಿ ಜವಹರಲಾಲ್ ನೆಹರು ಆಯ್ಕೆಗೊಂಡರೆ. ಈ ಸಮಯದಲ್ಲಿಯೇ ಸರ್ದಾರರು ಪ್ರಥಮ ಉಪಪ್ರಧಾನಮಂತ್ರಿ ಹಾಗೂ ಬಲಿಷ್ಠ ಗೃಹಮಂತ್ರಿ ಹುದ್ದೆಯನ್ನು ಅಲಂಕರಿಸಿದ್ದರು. ಈ ವೇಳೆ ಭಾರತದ ವಿಭಜನೆಯಿಂದ ಉಂಟಾದ ಹಿಂಸಾಚಾರದ ಸಮಯದಲ್ಲಿ ಪಂಜಾಬ್ ಮತ್ತು ದೆಹಲಿಯ ನಿರಾಶ್ರಿತರ ಪರಿಹಾರ ಕಾರ್ಯಗಳಲ್ಲಿ ಪಾಲ್ಗೊಂಡು ಆ ಭಾಗಗಳಲ್ಲಿ ಶಾಂತಿ ಪುನರ್ ಸ್ಥಾಪಿಸಲು ಕರ್ತವ್ಯ ನಿರ್ವಹಿಸಿ, ಎಲ್ಲರಿಂದಲೂ ಸೈ ಎನಿಸಿಕೊಂಡು, ಭಾರತಕ್ಕೆ ಹಂಚಿಕೆಯಾದ ಬ್ರಿಟಿಷ್ ವಸಾಹತುಶಾಹಿ ಪ್ರಾಂತ್ಯಗಳನ್ನು ಹೊಸದಾಗಿ ಸ್ವತಂತ್ರ್ಯ ಹೊಂದಿದ ರಾಷ್ಟ್ರವಾಗಿ ಯಶಸ್ವಿಯಾಗಿ ಏಕೀಕರಿಸಿ ಹೊಸ ಭಾರತವನ್ನು ರೂಪಿಸಿದ ಕೀರ್ತಿ ಇವರಿಗೆ ಸಲ್ಲುತ್ತದೆ. ಈ ಕಾರಣದಿಂದಲೇ ಪಟೇಲರನ್ನು ಏಕೀಕರಣದ ಪಿತಾಮಹ ಎನ್ನಲಾಗುತ್ತದೆ.



**ಗೌರವ ನಮನಗಳು**

**ಆಡಳಿತದಲ್ಲಿ ಅತ್ಯಂತ ನಿಷ್ಪಕ್ಷಪಾತ ಮತ್ತು ಭ್ರಷ್ಟಾಚಾರವನ್ನು ತಡೆಗಟ್ಟಲು ಹಲವು ಕ್ರಮಗಳನ್ನು ಕೈಗೊಂಡು ದೇಶಕ್ಕೆ ಮಾದರಿಯಾದವರು ಸರ್ದಾರ್ ವಲ್ಲಭಭಾಯ್ ಪಟೇಲ್ ರವರು. ಅವರ ಈ ಜನ್ಮದಿನದ ಸಂದರ್ಭದಲ್ಲಿ ಅವರನ್ನು ಸ್ಮರಣೆ ಮಾಡಿ ಕೊಂಡು, ಗೌರವಪೂರ್ವಕ ನಮನಗಳು ಸಲ್ಲಿಸುತ್ತೇವೆ.**

ಹೊಡೆದು ಚೂರುಗಳಾಗಿದ್ದ 565ಕ್ಕೂ ಹೆಚ್ಚು ಪ್ರಾಂತ್ಯಗಳನ್ನು ಒಗ್ಗೂಡಿಸುವುದು ಮತ್ತು ಜನರ ಮನವೊಲಿಸುವುದು ಅಷ್ಟೂ ಸುಲಭದ ಕೆಲಸವಾಗಿರಲಿಲ್ಲ. ಕಾಕತಾಳೀಯವೆಂದರೆ, ಭಾರತದ ಒಕ್ಕೂಟವನ್ನು ಸೇರದೆ ತಟಸ್ಥವಾಗಿ ಉಳಿದಿದ್ದ ಜುನಾಗಡ, ಹೈದರಬಾದ್ ಹಾಗೂ ಕಾಶ್ಮೀರವನ್ನು ಸೇರಿಸಲು ಸಾಕಷ್ಟು ಕಷ್ಟ ಪಡಬೇಕಾಗಿ ಬಂತು.

ಜುನಾಗಢ ಜನರ ಮನವೊಲಿಸಿ ಕೊನೆಗೆ ಭಾರತದ ಒಕ್ಕೂಟವನ್ನು ಸೇರಿಸಲಾಯಿತು ಆದರೆ ನಿಜಾಮನಿಂದ ನಲುಗಿಹೋಗಿದ್ದ ಹೈದರಬಾದ್ ಪ್ರತ್ಯೇಕವಾಗಿ ಉಳಿಯಲು ನಿರ್ಧರಿಸಿತ್ತು ಅಲ್ಲಿನ ಜನರಿಗೆ ಭಾರತವನ್ನು ಸೇರುವ ಮನೋಇಚ್ಛೆ ಇತ್ತು. ಆದರೆ ನಿಜಾಮನ ದುರಾಡಳಿತ ಮತ್ತು ಅರಾಜಕತೆಯಿಂದ ಬೇಸತ್ತು ಹೋಗಿದ್ದರು. ಕೊನೆಗೆ ಆಪರೇಷನ್ ಪೋಲೋ ಎಂಬ ಗುಪ್ತ ಪೊಲೀಸ್ ಕಾರ್ಯಾಚರಣೆಯಿಂದ ನಿಜಾಮನನ್ನು ಬಂಧಿಸಿ ಹೈದರಾಬಾದ್‌ನ್ನೂ ಭಾರತದ ಒಕ್ಕೂಟಕ್ಕೆ ಸೇರ್ಪಡೆ ಮಾಡಿದರು. ಅಧಿಕಾರದ ವಿಕೇಂದ್ರಿಕರಣ, ಧಾರ್ಮಿಕ, ಸಮಾನತೆ ಮತ್ತು ಸ್ವಾತಂತ್ರ್ಯ, ಆಸ್ತಿ ಹಕ್ಕು ಸೇರಿದಂತೆ ಇನ್ನಿತರ ಜನಪರ ಯೋಜನೆಗಳನ್ನು ಜಾರಿಗೆ ತಂದರು. ಇಷ್ಟೇ ಅಲ್ಲದೇ ಆಧುನಿಕ ಅಖಿಲಭಾರತ ಸೇವೆಗಳ ವ್ಯವಸ್ಥೆಯನ್ನು ಸ್ಥಾಪಿಸಿದ್ದಕ್ಕಾಗಿ ಇವರನ್ನು 'ಅಖಿಲಭಾರತ ಸೇವೆಗಳ ಪಿತಾಮಹ' ಎಂದು ಕರೆಯಲಾಗುತ್ತದೆ. ಇವರ ನಿಸ್ವಾರ್ಥ ಸೇವೆಯನ್ನು ಗುರುತಿಸಿ ಸರ್ದಾರ್ ಪಟೇಲರಿಗೆ 1991 ಸರ್ಕಾರ 'ಭಾರತರತ್ನ' ಪ್ರಶಸ್ತಿ ನೀಡಿ ಗೌರವಿಸಲಾಗಿದೆ. ಇದರಂತೆ 31 ಅಕ್ಟೋಬರ್ 2018 ರಂದು ಪಟೇಲರ ಏಕತಾ ಪ್ರತಿಮೆಯನ್ನು ಸ್ಥಾಪಿಸಲಾಗಿದೆ.

### ಪಟ್ಟಣಕ್ಕೆ ವಿದ್ಯಾರ್ಥಿಗಳನ್ನು ಕರೆ ತರುವ ಖಾಸಗಿ ಸ್ಕೂಲ್ ಬಸ್‌ಗಳು ಸಮಯಕ್ಕೆ ಸರಿಯಾಗಿ ಕರೆತರಲು ತೊಂದರೆ

# ಗ್ರಾಮೀಣ ರಸ್ತೆಗಳು ಗುಂಡಿಮಯ: ಸವಾರರು ಹೈರಾಟ


• ಉದಯವಾಹಿನಿ ರಾಣೆಬೆನ್ನೂರು

ತಾಲ್ಲೂಕಿನ ಬಹುತೇಕ ಕಡೆಗಳನ್ನು ಗ್ರಾಮೀಣ ಭಾಗದ ರಸ್ತೆಗಳು ಸತತ ಮಳೆಗೆ ಸಂಪೂರ್ಣ ಹದಗೆಟ್ಟಿವೆ.

ಅಲ್ಲಲ್ಲಿ ಗುಂಡಿಗಳು ಬಿದ್ದಿದ್ದರಿಂದ ವಾಹನ ಸಂಚಾರಕ್ಕೆ ತೊಂದರೆಯಾಗಿದೆ. ಗ್ರಾಮೀಣ ಪ್ರದೇಶದ ರಸ್ತೆಗಳು ಹದಗೆಟ್ಟಿದ್ದರಿಂದ ಪಟ್ಟಣಕ್ಕೆ ವಿದ್ಯಾರ್ಥಿಗಳನ್ನು ಕರೆ ತರುವ ಖಾಸಗಿ ಸ್ಕೂಲ್ ಬಸ್‌ಗಳು ಸಮಯಕ್ಕೆ ಸರಿಯಾಗಿ ಕರೆತರಲು ತೊಂದರೆಯಾಗಿದೆ.

ತಾಲ್ಲೂಕಿನ ಗೋವಿಂದ ಬಡಾವಣೆಯಿಂದ ರಾಹುತನಕಟ್ಟಿ ಕ್ರಾಸ್‌ವರೆಗೆ ರಸ್ತೆ ಹದಗೆಟ್ಟಿದ್ದು, ಶವ ಸಂಸ್ಕಾರಕ್ಕೆ ಹೋಗಲು ತೊಂದರೆಯಾಗಿದೆ. ಕೃಷ್ಣಮೃಗ ಅಭಯಾರಣ್ಯ ವೀಕ್ಷಣೆಗೆ ದೇಶ ವಿದೇಶ ಹಾಗೂ ಹೊರ ರಾಜ್ಯಗಳಿಂದ ಪ್ರವಾಸಿಗರು ಆಗಮಿಸುತ್ತಾರೆ. ದಿನಾಲು ಬೆಳಗಿನ ಜಾವ ಮತ್ತು ಸಂಜೆ ಪ್ರವಾಸಿಗರನ್ನು ಕೃಷ್ಣಮೃಗಗಳ ವೀಕ್ಷಣೆಗೆ ಕರೆದುಕೊಂಡು ಹೋಗುವ ವೀಕ್ಷಣೆ ಬಸ್ ರಸ್ತೆಯ ತೆಗ್ಗಿನಲ್ಲಿ ಬಿದ್ದು ಏಳುವದರಿಂದ ತಲೆ, ಮೈ, ಕೈ ಗಾಯ ಮಾಡಿಕೊಂಡಿದ್ದಾರೆ. ಸಂಬಂಧಿಸಿದ ಅಧಿಕಾರಿಗಳಿಗೆ ಮತ್ತು ಶಾಸಕರಿಗೆ ಹಿಡಿ ಶಾಪ ಹಾಕುತ್ತಿದ್ದಾರೆ.

ಈಚೆಗೆ ರಾಹುತನಕಟ್ಟಿ ವೃತ್ತದ ಬಳಿ ಕೆಂಬ್ರಿಡ್ಜ್ ಸ್ಕೂಲ್ ಬಸ್ಸೊಂದು ಪಲ್ಟಿಯಾಗಿ ತೆಗ್ಗಿನಲ್ಲಿ ಬಿದ್ದು ಅನೇಕ ವಿದ್ಯಾರ್ಥಿಗಳು ಗಾಯಗೊಂಡ ಘಟನೆ ನಡೆದಿದೆ. ಇನ್ನು ಕೆಎಸ್‌ಆರ್‌ಟಿಸಿ ಬಸ್ ಮೊದಲೇ ಹಳೇ ಬಸ್


ಉದಯವಾಹಿನಿ ಚಿತ್ರ

ಮಳೆಗೆ ಸಂಪೂರ್ಣ ಹದಗೆಟ್ಟಿವೆ

ಗಳು, ಇಂತಹ ರಸ್ತೆಯಲ್ಲಿ ದಿನಾಲು ಹತ್ತಾರು ಟ್ರಿಪ್ ಮಾಡುವ ಬಸ್ ಒಳಗಡೆ ಗಡಗಡ ಶಬ್ದ ಬರುತ್ತದೆ. ಸೀಟು ಕಿತ್ತು ತೆಗ್ಗಿಗೆ ಬಿದ್ದರೆ ಸೀಟಿನಲ್ಲಿ ಕುಳಿತ ಪ್ರಯಾಣಿಕರು, ವಯೋವೃದ್ಧರು, ಶಾಲಾ ಕಾಲೇಜು ವಿದ್ಯಾರ್ಥಿಗಳು ಮುಗುಚಿ ಗದ್ದ ಒಡೆದುಕೊಂಡು ನೋವು ಮಾಡಿಕೊಂಡ ಘಟನೆಗಳು ದಿನಾಲು ನಡೆಯುತ್ತವೆ' ಎನ್ನುತ್ತಾರೆ ಕೆಎಸ್‌ಆರ್‌ಟಿಸಿ ಬಸ್ ಚಾಲಕರು.

'ಇದೇ ರಸ್ತೆಯಲ್ಲಿ ತುಂಗಭದ್ರಾ ನದಿ ತೀರದಿಂದ ಕಲ್ಲು, ಮಣ್ಣು, ಗೊರ್ಚು, ಮರಳನ್ನು ಸಾಗಿಸುವ ಓವರ್ ಲೋಡ್ ತುಂಬಿದ ಬೃಹತ್ ಪ್ರಮಾಣದ ಲಾರಿ ಮತ್ತು ಟಿಪ್ಪರ್‌ಗಳು ಹಗಲು ರಾತ್ರಿ ಎನ್ನದೇ ಅಡ್ಡಾಡುತ್ತವೆ.

ಬೃಹತ್ ಪ್ರಮಾಣದ ಲಾರಿಗಳು ಅಡ್ಡಾಡುವದರಿಂದ ಮತ್ತು ಕಳಪೆ ಕಾಮಗಾರಿಯಿಂದ ರಸ್ತೆ ಕುಸಿತಗೊಂಡು ಗುಂಡಿಗಳು ಬಿದ್ದು, ರಸ್ತೆ ಹದಗೆಡುತ್ತದೆ' ಎನ್ನುತಾರೆ ಸಾರ್ವಜನಿಕರು. 'ಮೇಡೇರಿ ಮುಖ್ಯ ರಸ್ತೆಯ ರಾಹುತನಕಟ್ಟಿ ಕ್ರಾಸ್‌ನಿಂದ ಮೇಡೇರಿ, ಬೇಲೂರ, ಅಂಕಸಾಪುರ, ಅರೇಮಲ್ಲಾಪುರ, ಯಕ್ಲಾಸಪುರ ವರೆಗೆ ಹೊಸದಾರಿ ರಸ್ತೆ ನಿರ್ಮಿಸಿ ಡಾಂಬರೀಕರಣ ಮಾಡಿದ್ದಾರೆ. ಆದರೆ, ಗೋವಿಂದ ಬಡಾವಣೆಯಿಂದ ರಾಹುತನಕಟ್ಟಿ ಕ್ರಾಸ್‌ವರೆಗೆ 2 ಕಿಮೀ ರಸ್ತೆ ದುರಸ್ಥಿ ಮಾಡಿಸಿಲ್ಲ. ಇದರಿಂದ ವಾಹನಗಳು ಪದೇ ಪದೇ ದುರಸ್ಥಿಗೆ ಬರುತ್ತವೆ ಈ ಬಗ್ಗೆ ಸಂಬಂಧಿಸಿದ ಅಧಿಕಾರಿಗಳಿಗೆ ಮತ್ತು ಚುನಾಯಿತ ಪ್ರತಿನಿಧಿಗಳಿಗೆ ತಿಳಿಸಿದ್ದೇವೆ ಆದರೂ ಇದುವರೆಗೂ ರಸ್ತೆ ದುರಸ್ಥಿ ಪಡಿಸಿಲ್ಲ. ಹಾಟ್ ಮಿಕ್ಸ್ ಹಾಕುತ್ತಾರೆ ವಾಹನ ಭರಾಟೆಗೆ ಮತ್ತೆ ಕಿತ್ತು ಹೋಗುತ್ತದೆ' ಎನ್ನುತ್ತಾರೆ ಹಿರೇಬಿದರಿಯ ಮಂಜುನಾಥ.

**ಓವರ್ ಲೋಡ್**

**ತುಂಗಭದ್ರಾ ನದಿ ತೀರದಿಂದ ಮರಳು, ಮಣ್ಣು, ಇಟ್ಟಿಗೆ ಸಾಗಿಸುವ ಮಜಡಾ ಮಿನಿ ಲಾರಿ, 10 ರಿಂದ 12 ವೀಲ್ ಲಾರಿಗಳು ಮತ್ತು ಟಿಪ್ಪರ್‌ಗಳು ನಿರಂತರ ಅಡ್ಡಾಡುವವರಿಂದ ರಸ್ತೆಗಳು ಅನೇಕ ಕಡೆ ಕುಸಿದು ಬಿದ್ದಿವೆ. ಮೆಕ್ಕೆಜೋಳ, ಭತ್ತದ ಬೆಳೆಯನ್ನು ಮಾರುಕಟ್ಟೆಗೆ ತರಲು ರೈತರು ಹರಸಾಹಸ ಪಡುವಂತಾಗಿದೆ. ಕೆಲ ಲಾರಿಗಳು ಗುಂಡಿಯಲ್ಲಿ ಬಿದ್ದು ಬಾರಿ ಅನಾಹುತ ತಪ್ಪಿವೆ. ಅಲ್ಲದೇ ಓವರ್ ಲೋಡ್ ಹೇರಿಕೊಂಡು ಬರುವುದರಿಂದ ರಸ್ತೆಗಳು ಹಗಲೆಲ್ಲ ದುರಸ್ಥಿಗೆ ಬರುತ್ತವೆ ಎನ್ನುತ್ತಾರೆ ಟಿಪ್ಪರ್ ಚಾಲಕರು.**

ನಿರಂತರ ನೀರು ಹರಿಯುವುದರಿಂದ ರಸ್ತೆ ಕಲ್ಲುಗಳು ಕಿತ್ತು ಗುಂಡಿಗಳು ಹೊಂಡಗಳಾಗಿ ಮಾರ್ಪಟ್ಟಿವೆ. ಈ ರಸ್ತೆಯ ಗುಂಡಿಗಳಲ್ಲಿ ಆರಾಮಾಗಿ ಒಬ್ಬರ ಶವ ಸಂಸ್ಕಾರ ಮಾಡಬಹುದು. ಅಂತಹ ಗುಂಡಿಗಳು ಬಿದ್ದಿವೆ. ಟಂಟಂ ಗಾಡಿ ತರಕಾರಿಯನ್ನು ಸಮಯಕ್ಕೆ ಸರಿಯಾಗಿ ಎಪಿಎಂಸಿ ಹರಾಜಿಗೆ ಸಾಗಿಸಲು ಹರಸಾಹಪ ಪಡುವಂತಾಗಿದೆ. ಇದೇ ರಸ್ತೆಯ ಸಮೀಪದಲ್ಲಿ ಅರಣ್ಯ ಪ್ರದೇಶ ಇರುವುದರಿಂದ ರೈತರು ಜಮೀನಿನಿಂದ ಸಂಜೆ ಮನೆಗೆ ಬರುವಾಗ ಪದೆ ಪದೆ ಚಿರತೆ ಪ್ರತ್ಯಕ್ಷವಾಗಿ ಕಾಣುತ್ತಿದೆ. ಭಯಗೊಂಡು ಅನೇಕರು ಗಾಡಿ ಸಮೇತ ಗುಂಡಿಯಲ್ಲಿ ಬಿದ್ದಿದ್ದಾರೆ.

**ಫಾರೆಸ್ಟ್ ಐಬಿಯಿಂದ ರಾಹುತನಕಟ್ಟಿ ಕ್ರಾಸ್‌ವರೆಗೆ 2 ಕಿಮೀ ರಸ್ತೆ ಡಾಂಬರೀಕರಣ ಮಾಡಲು ಟೆಂಡರ್ ಕರೆಯಲಾಗಿದೆ. ಸದ್ಯಕ್ಕೆ ಗುಂಡಿ ಮುಚ್ಚಿ ಸಾಲಗುವುದು. -ಜಗದೀಶ ಕೋಳಿವಾಡ, ಎಇಇ, ಲೋಕೋಪಯೋಗಿ ಇಲಾಖೆ**

'ಗಂಗಾಜಲ ತಾಂಡೆ, ಗೋವಿಂದ ಬಡಾವಣೆ, ಬಸಲೀಕಟ್ಟಿ ತಾಂಡಾ ರೈತರು ಜಮೀನುಗಳಿಂದ ಬೆಳೆದ ಮೆಕ್ಕೆಜೋಳ ಮತ್ತು ಇತರೆ ಬೆಳೆಗಳನ್ನು ಮನೆಗೆ ಸಾಗಿಸಲು ಅನನುಕೂಲವಾಗಿದೆ' ಎನ್ನುತ್ತಾರೆ ತಾಲ್ಲೂಕು ಪಂಚಾಯಿತಿ ಮಾಜಿ ಸದಸ್ಯ ಸೋಮಪ್ಪ ಲಮಾಣಿ.

# ನಿಲ್ಲದ ಮಳೆ: ಅಡಿಕೆ ಬೆಳೆಗಾರರು ಕಂಗಾಲು

• ಉದಯವಾಹಿನಿ ಕಳಸ

ಅಡಿಕೆ ಮರದ ಬುಡದಲ್ಲಿ ಉದುರಿ ಬಿದ್ದಿರುವ ಹಣ್ಣಡಿಕೆಯ ರಾಶಿ. ತೋಟದ ಚರಂಡಿಯಲ್ಲಿ ಈಗಲೂ ಹರಿಯುತ್ತಿರುವ ನೀರಿನ ಒರತೆ. ಮಳೆ ನಿಂತರೆ ಕೊನೆ ತೆಗೆಯುವುದೋ ಅಥವಾ ಔಷಧಿ ಸಿಂಪಡಿಸುವುದೋ ಎಂಬ ಗೊಂದಲ. ಇದು ತಾಲ್ಲೂಕಿನ ಅಡಿಕೆ ಬೆಳೆಗಾರರು ಎದುರಿಸುತ್ತಿರುವ ಸದ್ಯದ ಸಮಸ್ಯೆಯ ಚಿತ್ರಣ. ಸಾಮಾನ್ಯವಾಗಿ ಅಕ್ಟೋಬರ್ ಮೊದಲ ವಾರ ಮಳೆ ನಿಂತು ಅಡಿಕೆ ಕೊಯ್ಲಿನ ಸಡಗರ ಆರಂಭ ಆಗುತ್ತಿತ್ತು. ವಿಜಯದಶಮಿಗೆ ಕೊನೆ ಮುಹೂರ್ತ ನಡೆಯುವುದು ವಾಡಿಕೆ. ಆದರೆ, ಈಗ ದೀಪಾವಳಿ ಕಳೆದರೂ ಮರ ಹತ್ತಿ ಕೊನೆ ತೆಗೆಯುವ ಸ್ಥಿತಿ ಇಲ್ಲದಿರುವುದು ಬೆಳೆಗಾರರನ್ನು ಕಂಗಾಲು ಮಾಡಿದೆ.

ಕಳಸದಲ್ಲಿ ಅಕ್ಟೋಬರ್ ತಿಂಗಳಲ್ಲಿ ಈಗಾಗಲೇ 35 ಸೆಂ.ಮೀ ಮಳೆ ಆಗಿದೆ. ಇದರಿಂದ ಮಣ್ಣಿನಲ್ಲಿ ತೇವಾಂಶ ಹೆಚ್ಚುತ್ತಿದೆ. ಆಗಾಗ ಏರುವ ತಾಪಮಾನ ಮತ್ತು ಹೆಚ್ಚಿದ ಆದ್ರತೆ ಅಡಿಕೆಗೆ ಕೊಳೆ ರೋಗವನ್ನು ಬಾಧಿಸಬಹುದೇ ಎಂಬ ಭೀತಿ ಮೂಡಿಸುತ್ತಿದೆ. 'ಈಗಾಗಲೇ ಅಡಿಕೆಗೆ 4 ಸುತ್ತು ಔಷಧಿ ಸಿಂಪಡಣೆ ಮಾಡಿದ್ದೇವೆ. ಮಳೆ ಮುಂದುವರಿದರೆ


ಉದಯವಾಹಿನಿ ಚಿತ್ರ

ಇನ್ನೊಂದು ಸುತ್ತಿನ ಔಷಧಿ ಸಿಂಪಡಣೆ ಮಾಡಬೇಕೇ ಎಂಬ ಗೊಂದಲ ಇದೆ' ಎಂದು ನೆಲ್ಲಿಬೀಡಿನ ಕೃಷಿಕ ಜಗದೀಶ್ ಬೇಸರದಿಂದ ಹೇಳುತ್ತಾರೆ. ಹಸಿ ಅಡಿಕೆಗೆ ಕೆ.ಜಿ.ಗೆ ರೂ. 75 ಗರಿಷ್ಠ ಧಾರಣೆ ಸಿಗುತ್ತಿದೆ. ಆದರೆ, ಮರ ಏರಿ ಅಡಕೆ ಗೊನೆ ತೆಗೆಯಲು ಅವಕಾಶ ನೀಡುತ್ತಿಲ್ಲ ಎಂಬ ನೋವು ಬೆಳೆಗಾರರದ್ದಾಗಿದೆ. 'ಈ ವರ್ಷ ಏಪ್ರಿಲ್‌ನಿಂದ ಇದುವರೆಗೆ 160 ದಿನ ಮಳೆ ಸುರಿದಿದೆ. ಹವಾಮಾನ ಇದೇ ರೀತಿ ಬದಲಾಗುತ್ತಾ ಹೋದರೆ ತೋಟಕ್ಕೆ ಭವಿಷ್ಯ ಇಲ್ಲ' ಎಂದು ಸಂಸ್ಥೆ ಗ್ರಾಮದ ಉಪ್ಪಿನಗದ್ದೆಯ ಸಣ್ಣ ಕೃಷಿಕ ಶ್ರೇಯಾಂಶ ಕುಮಾರ್ ನೋವಿನಿಂದ ಹೇಳುತ್ತಾರೆ.

# ತಗ್ಗು ಪ್ರದೇಶ ಮುಚ್ಚಲು ಗ್ರಾಮಸ್ಥರ ಆಗ್ರಹ

• ಉದಯವಾಹಿನಿ ಕುಕನೂರು

ತಾಲ್ಲೂಕಿನ ತಳಕಲ್ಲ ಗ್ರಾಮದಲ್ಲಿ ಮೂರು ಕಡೆ 50 ಅಡಿಗೂ ಹೆಚ್ಚು ಆಳವಿರುವ ತಗ್ಗುಗಳಿದ್ದು, ಅಪಾಯಕ್ಕೆ ಆಹ್ವಾನ ನೀಡುತ್ತಿವೆ. ಗ್ರಾಮದ ವೀರಭದ್ರೇಶ್ವರ ದೇವಸ್ಥಾನ ಮುಂಭಾಗದಲ್ಲಿರುವ ಅರ್ಧ ಎಕರೆಗೂ ಹೆಚ್ಚಿರುವ ತಗ್ಗು ಪ್ರದೇಶದಲ್ಲಿ ನೀರು ಸಂಗ್ರಹವಾಗಿ ಸಾಂಕ್ರಾಮಿಕ ರೋಗಗಳ ಹರಡುವ ಭೀತಿ ಎದುರಾಗಿದೆ.

ತಗ್ಗು ಪ್ರದೇಶದಲ್ಲಿ ನಿಂತಿರುವ ನೀರು ಹಸಿರು ಬಣ್ಣಕ್ಕೆ ತಿರುಗಿದ್ದು, ಸೊಳ್ಳೆಗಳ ಉತ್ಪಾದನೆಯ ಕೇಂದ್ರವಾಗಿದ್ದು, ಉಪಟಳ ಹೆಚ್ಚಾಗಿದೆ. ಜನರು, ಇದೇ ತಗ್ಗು ಪ್ರದೇಶದಲ್ಲಿ ಕಸ ಸುರಿಯುತ್ತಿದ್ದು, ದುರ್ನಾತ ಬೀರುತ್ತಿದೆ. ಗ್ರಾಮದ ಬೆಣ್ಣೆ ಕೆರೆಯ ಕಾಮಗಾರಿಯ ಮಣ್ಣನ್ನು ತಂದು ಅರ್ಧ ಭಾಗವನ್ನು ಮುಚ್ಚಲಾಗಿದೆ. ಇನ್ನೂ ಅರ್ಧ ತಗ್ಗನ್ನು ಮುಚ್ಚಬೇಕು. ತಗ್ಗು ಪ್ರದೇಶವನ್ನು ಮುಚ್ಚದಿದ್ದರೆ ಅಪಾಯಗಳು ಸಂಭವಿಸುವ ಸಾಧ್ಯತೆಯಿದೆ ಎಂದು ಗ್ರಾಮಸ್ಥರಾದ ಚೆನ್ನಮ್ಮ ಮರಗಿ, ಅಣ್ಣಮ್ಮ ಚಿಲವಾಡಗಿ, ಈರಮ್ಮ ಚಿಲವಾಡಗಿ, ನೀಲಮ್ಮ ಬಂಗೇರಿ ಎಚ್ಚರಿಸಿದ್ದಾರೆ.


ಉದಯವಾಹಿನಿ ಚಿತ್ರ

ಸಾಂಕ್ರಾಮಿಕ ರೋಗಗಳ ಹರಡುವ ಭೀತಿ

ಅಂಗನವಾಡಿ ಹಿಂದೆ ಬಾವಿ: ತಳಕಲ್ಲ ಗ್ರಾಮದ ಅಂಗನವಾಡಿ ಕೇಂದ್ರ ಕಟ್ಟಡದ ಹಿಂದೆ ಬಾವಿಯಿದ್ದು, ಸುತ್ತಲೂ ಜಾಲಿ, ಮುಳ್ಳಿನ ಗಿಡಗಳು ಬೆಳೆದಿವೆ. ನಿರ್ಜನ ಪ್ರದೇಶವಾಗಿದ್ದು, ಅಂಗನವಾಡಿ ಕೇಂದ್ರ ಇರುವುದರಿಂದ ಮಕ್ಕಳಿಗೆ ವಿಷ ಜಂತುಗಳ ಕಾಟ ಹೆಚ್ಚಿದೆ. ಈ ಸ್ಥಳವನ್ನು ಸ್ವಚ್ಚಗೊಳಿಸಿ. ಪಾಳು ಬಿದ್ದಿರುವ ಬಾವಿಗೆ ಭಾವಿಗೆ ಗರಸು ತುಂಬಿದರೆ ಮಕ್ಕಳಿಗೆ ಅನುಕೂಲವಾಗುತ್ತದೆ. ಬೆಣಿಕೆರೆಯಲ್ಲಿರುವ ಹೂಳನ್ನು ತಗ್ಗು ಪ್ರದೇಶಗಳಿಗೆ ಹಾಕಬೇಕು ಎಂದು ಗ್ರಾಮಸ್ಥರು ಒತ್ತಾಯಿಸಿದರು.

**ಪದವಿ ಕಾಲೇಜಿನ ಆವರಣದಲ್ಲಿ ಭಾವಿ:** ಗ್ರಾಮದ ಸಮೀಪದ ಸರ್ಕಾರಿ ಪದವಿ ಕಾಲೇಜಿನ ಆವರಣದಲ್ಲಿ ಬಾವಿಯಿದ್ದು, ನಿತ್ಯ ನೂರಾರು ವಿದ್ಯಾರ್ಥಿಗಳು ಕಾಲೇಜಿಗೆ ಬರುತ್ತಾರೆ. ಆದರೆ ಬಾವಿಯನ್ನು ಮುಚ್ಚಿಲ್ಲ. ಅಲ್ಲದೆ ರಕ್ಷಣಾ ವ್ಯವಸ್ಥೆಯನ್ನೂ ಮಾಡಿಲ್ಲ. ಸ್ಥಳೀಯ ಆಡಳಿತ ಅನಾಹುತವಾಗುವ ಮೊದಲು ಎಚ್ಚೆತ್ತುಕೊಂಡು ಕಾಳಜಿ ವಹಿಸಿ, ಭಾವಿ ಮುಚ್ಚಿದರೆ ತೊಂದರೆ ತಪ್ಪುತ್ತದೆ ಎಂದು ಪಾಲಕ ಮೈನುಸ್ಸಾಬ ತಂಬುಲಿ ಹೇಳಿದರು.

# ಬೀದಿ ವ್ಯಾಪಾರಿಗಳ ತೆರವಿಗೆ ಆಕ್ರೋಶ

• ಉದಯವಾಹಿನಿ ಕುಂದಾಪುರ

ತಳ್ಳುವ ಗಾಡಿ, ಬುಟ್ಟಿ, ಟೇಬಲ್, ಸಣ್ಣ ಗೂಡ್ಸ್ ಗಾಡಿಗಳನ್ನು ಮುಂದಿಟ್ಟುಕೊಂಡು ಒಂದಷ್ಟು ವ್ಯಾಪಾರ ಮಾಡಿ ಹೊಟ್ಟೆ ತುಂಬಿಸಿಕೊಳ್ಳುತ್ತಿದ್ದ ಬಡ ಬೀದಿ ವ್ಯಾಪಾರಿಗಳನ್ನು ತೆರವುಗೊಳಿಸುವ ಪ್ರಯತ್ನ ಕಳೆದ ಕೆಲವು ದಿನಗಳಿಂದ ನಗರದಲ್ಲಿ ನಡೆಯುತ್ತಿದೆ. ನಗರದ ಹಲವಾರು ಸಮಸ್ಯೆಗಳಿಗೆ ಪರಿಹಾರ ಕಾಣದಿದ್ದರೂ ಇದೀಗ ಸುವ್ಯವಸ್ಥಿತ ಪಾರ್ಕಿಂಗ್ ಹೆಸರಿನಲ್ಲಿ ಬೀದಿ ಬದಿಯ ವ್ಯಾಪಾರಿಗಳನ್ನು ತೆರವುಗೊಳಿಸುತ್ತಿರುವುದು ಎಷ್ಟು ಸರಿ ಎಂದು ಸಾರ್ವಜನಿಕರು ಪ್ರಶ್ನಿಸಿದ್ದಾರೆ.

ನಗರದ ಪಾರ್ಕಿಂಗ್ ಸಮಸ್ಯೆಗೆ ಶಾಶ್ವತ ಪರಿಹಾರ ಬೇಕು. ಆದರೆ ಬೀದಿ ಬದಿ ವ್ಯಾಪಾರಿಗಳ ವ್ಯಾಪಾರಕ್ಕೆ ಧಕ್ಕೆಯಾಗದಂತೆ ಪುರಸಭೆ ಪರ್ಯಾಯ ವ್ಯವಸ್ಥೆ ಕಲ್ಪಿಸಿ ಮುಂದುವರಿಯಲಿ ಎನ್ನುವುದು ಸಾರ್ವಜನಿಕರ ಆಗ್ರಹವಾಗಿದೆ. ಕಳೆದ ಕೆಲ ದಿನಗಳಿಂದ ಸಾಮಾಜಿಕ ಜಾಲತಾಣಗಳಲ್ಲಿ ಈ ಕುರಿತು ಚರ್ಚೆ ಆರಂಭವಾಗಿದೆ.

ವಿದೇಶಗಳಲ್ಲಿ, ಮುಂಬೈ, ಬೆಂಗಳೂರಿನಂತಹ ಮಹಾನಗರಗಳಲ್ಲಿ ಉತ್ತಮ ಸ್ಥಿತಿಯಲ್ಲಿದ್ದ ಹಲವರ ಬದುಕನ್ನು ಕೋವಿಡ್ ಬೀದಿಗೆ ತಳ್ಳಿತ್ತು. ಈ ವೇಳೆ


ಉದಯವಾಹಿನಿ ಚಿತ್ರ

ಅನೇಕರು ಕುಟುಂಬ ನಿರ್ವಹಣೆಗಾಗಿ ಬೀದಿ ಬದಿಯ ವ್ಯಾಪಾರವನ್ನು ನೆಚ್ಚಿಕೊಂಡಿದ್ದರು.

ಆಮ್ಲೆಟ್ ಅಂಗಡಿ, ತರಕಾರಿ-ಸೊಪ್ಪು-ಹಣ್ಣುಗಳ ಗಾಡಿ, ಗೃಹ ಬಳಕೆಯ ಸಣ್ಣ ಸಣ್ಣ ವಸ್ತುಗಳ ಮಾರಾಟ, ಕಬ್ಬಿನ ಹಾಲು, ಚಪ್ಪಲಿ ರಿಪೇರಿ, ಅತ್ತರ್, ಫಾಸ್ಟ್ ಫುಡ್, ಸಿದ್ದ ಉಡುಪು, ಮೊಬೈಲ್ ಕವರ್‌ಗಳನ್ನು ವ್ಯಾಪಾರ ಮಾಡುವ ಈ ಬೀದಿ ಬದಿಯ ವ್ಯಾಪಾರಿಗಳ ಆದಾಯ ದಿನಕ್ಕೆ ಸಾವಿರದ ಗಡಿಯನ್ನು

**ಶುಚಿತ್ವ ಹಾಗೂ ಪಾರ್ಕಿಂಗ್ ಬಗ್ಗೆ ಪುರಸಭೆ ಕ್ರಮ ವಹಿಸುವುದು ಸ್ವಾಗತಾರ್ಹ. ಆದರೆ ಬೀದಿ ಬದಿ ವ್ಯಾಪಾರವನ್ನೆ ಬದುಕಿನ ಆಸರೆಯನ್ನಾಗಿ ಸಿಕೊಂಡಿರುವ ವ್ಯಾಪಾರಿಗಳಿಗೆ ತೊಂದರೆ ಕೊಡಬೇಡಿ. -ದಿನೇಶ್ ಹೆಗ್ಡೆ ಮೊಳಹಳ್ಳಿ, ಕಾಂಗ್ರೆಸ್ ಮುಖಂಡ**

ದಾಟುವುದಿಲ್ಲ. ಶೇ 60 ಕ್ಕಿಂತ ಜಾಸ್ತಿ ಮಂದಿಯ ವ್ಯಾಪಾರ ನಡೆಯುವುದೇ ಸಂಜೆ ಬಳಿಕ ಎನ್ನುತ್ತಾರೆ ವ್ಯಾಪಾರಿಗಳು. ಸಕುಂದಾಪುರ ನಗರಕ್ಕೆ ಇರುವುದೇ ಎರಡು ಪ್ರಮುಖ ರಸ್ತೆಗಳು, ಈ ರಸ್ತೆಯ ಅಂಚಿನಲ್ಲಿ ಇರುವ ಬಹುತೇಕ ವಾಣಿಜ್ಯ ಕಟ್ಟಡಗಳು ತಮ್ಮ ಅಂಗಡಿಗಳ ಮುಂಭಾಗದ ಸಾರ್ವಜನಿಕ ಜಾಗವನ್ನು ಪಾರ್ಕಿಂಗ್, ಜಾಹೀರಾತು ಫಲಕ ಹಾಗೂ ಇನ್ನಿತರ ಉದ್ದೇಶಗಳಿಗೆ ಬಳಸಿಕೊಂಡಿದ್ದರೂ ಯಾವುದೇ ಕ್ರಮ ಜರುಗಿಸದೆ, ಬೀದಿ ಬದಿ ವ್ಯಾಪಾರಿಗಳನ್ನು ಪರ್ಯಾಯ ವ್ಯವಸ್ಥೆ ಕಲ್ಪಿಸದೆ ತೆರವುಗೊಳಿಸುವುದು ಸರಿಯಲ್ಲ ಎಂದು ಜನರು ಹೇಳಿದ್ದಾರೆ.

# ಹಿಂದೂ ಸಂಘಟಿತರಾದರೆ ಮಾತ್ರ ದೇಶ ಉಳಿಯಲಿದೆ


ಉದಯವಾಹಿನಿ ಚಿತ್ರ

• ಉದಯವಾಹಿನಿ ಮುಧೋಳ

ಚನ್ನಮ್ಮ ಕೇವಲ ಒಂದು ಜಾತಿಗೆ ಸಿಮೀತವಾಗಿಲ್ಲ. ಹಿಂದುಗಳು ಸಂಘಟಿತರಾಗಬೇಕು. ಶೇ 13 ರಿಂದ 18 ಇರುವ ಮುಸ್ಲಿಮರು ಈಗಾಗಲೇ ಇಷ್ಟು ಹಾರಾಡುತ್ತಿದ್ದಾರೆ. ಅವರೇನಾದರೂ ಶೇ 40ಕ್ಕೆ ಬಂದರೆ ಹಿಂದು ಗ್ರಾಮ ಪಂಚಾಯ್ತಿ ಸದಸ್ಯ, ಎಂಎಲ್‌ಎ ಆಗಲು ಸಾಧ್ಯವಿಲ್ಲ ಎಂದು ವಿಜಯಪುರದ ಶಾಸಕ ಬಸನಗೌಡ ಪಾಟೀಲ (ಯತ್ನಾಳ) ಹೇಳಿದರು.

ಅವರು ತಾಲ್ಲೂಕಿನ ಮರಿಕಟ್ಟಿ ಗ್ರಾಮದಲ್ಲಿ ವೀರ ರಾಣಿ ಕಿತ್ತೂರ ಚನ್ನಮ್ಮ 247ನೇ ಜಯಂತ್ಯುತ್ಸವ ಹಾಗೂ ಕಿತ್ತೂರು ಚನ್ನಮ್ಮನ ಮೂರ್ತಿ ಅನಾವರಣ ಕಾರ್ಯಕ್ರಮದಲ್ಲಿ ಮಾತನಾಡಿ, ಬಾಬಾ ಸಾಹೇಬ ಅಂಬೇಡ್ಕರ್ ಅವರು ಇಲ್ಲಿರುವ ಮುಸ್ಲಿಂಮರು ಪಾಕಿಸ್ತಾನಕ್ಕೆ ಹೋಗಬೇಕು. ಅಲ್ಲಿನ ಹಿಂದೂಗಳು ಭಾರತಕ್ಕೆ ಬರಬೇಕು ಎಂದು ಪ್ರತಿಪಾದಿಸಿದ್ದರು. ಆದರೆ ಗಾಂಧಿಯವರು ರಾಷ್ಟ್ರಪಿತ ಆಗಲು ನೆಹರು ಪ್ರಧಾನಿಮಂತ್ರಿ ಆಗಲು ಬಡಿದಾಡಿ ಈ ದೇಶ ಹಾಳು ಮಾಡಿದರು' ಎಂದು ವಿಷಾದಿಸಿದರು. ಲಿಂಗಾಯತ ವೀರಶೈವ ಬೇರೆ, ಬೇರೆ ಅಲ್ಲ. ಎರಡೂ ಒಂದೇ ಇಬ್ಬರೂ ಈಶ್ವರ ಲಿಂಗವನ್ನೇ ಪೂಜೆ ಮಾಡುತ್ತಾರೆ. ಕಲ್ಲು ದೇವರು ದೇವರಲ್ಲ ಎಂದು ಹೇಳುವ ಸ್ವಾಮಿ ನಿಮ್ಮ ಮನೆಯಲ್ಲಿ ದೇವರಕೋಣೆ ಮ್ಯೂಸಿಯಂ ಮಾಡಿದ್ದೀರಿ ಅದನ್ನು ತೆಗೆಯಿರಿ ಹೊಳೆಗೆ ಎಸೆಯರಿ ಅಂತಾನು ಮತ್ತು ಖಾವಿ ಹಾಕುವುದೇಕೆ? ಖಾವಿ ಧರಿಸುವುದನ್ನು ಬಿಟ್ಟು ಬೇರೆ ಬಣ್ಣದ ಹಸಿರು ಬಣ್ಣದ ಬಟ್ಟೆ ಹಾಕಲಿ ಆವಾಗ ಇವರಿಗೆ ಯಾರೂ ನಮಸ್ಕರಿಸುವುದಿಲ್ಲ' ಎಂದು ಟೀಕಿಸಿದರು. 'ಹನಮಂತ ದೇವರು ಇರದ ಹಳ್ಳಿ ಭಾರತದಲ್ಲಿ ಇಲ್ಲ. ದಲಿತರು ಇರದ ಹಳ್ಳಿ ಇಲ್ಲ. ಅದಕ್ಕೆ ಎಲ್ಲಾ ಗ್ರಾಮಗಳಲ್ಲಿ ದಲಿತರು, ಹಾಲಮತ ಸಮಾಜ, ವಾಲ್ಮೀಕಿ ಸಮಾಜದವರು ಮೂಲತಃ ಸನಾತನ ಧರ್ಮದವರು ಇದನ್ನು ನಾವು ಅರ್ಥೈಸಿಕೊಳ್ಳಬೇಕು' ಎಂದು ಹೇಳಿದರು.

# ಸ್ವಚ್ಛತೆ, ನೀರು ಪೂರೈಕೆ ನಿರಂತರವಾಗಿರಲಿ: ಚಂದ್ರಶೇಖರ

• ಉದಯವಾಹಿನಿ ಗಜೇಂದ್ರಗಡ

ತಾಲ್ಲೂಕಿನ ತಾಂಡಾ ನಿವಾಸಿಗಳಿಗೆ ಮೂಲಸೌಲಭ್ಯಗಳ ಪೂರೈಕೆಯಲ್ಲಿ ಯಾವುದೇ ಲೋಪದೋಷಗಳಾಗದಂತೆ ನೋಡಿಕೊಳ್ಳಬೇಕು ಎಂದು ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿ ಚಂದ್ರಶೇಖರ ಬಿ. ಕಂದಕೂರ ಗ್ರಾಮ ಪಂಚಾಯಿತಿ ಸಿಬ್ಬಂದಿಗೆ ಸೂಚಿಸಿದರು. ತಾಂಡಾ ನಿವಾಸಿಗಳು ದೂರವಾಣಿ ಕರೆ ಮಾಡಿ ಮನವಿ ಮಾಡಿಕೊಂಡ ಹಿನ್ನೆಲೆಯಲ್ಲಿ, ಗಜೇಂದ್ರಗಡ ತಾಲ್ಲೂಕು ಪಂಚಾಯಿತಿ ಇಒ ಲಕ್ಕಲಕಟ್ಟಿ ತಾಂಡಾಕ್ಕೆ ಭೇಟಿ ನೀಡಿ ಜನರ ಸಮಸ್ಯೆ ಆಲಿಸಿದರು. ಭೇಟಿ ವೇಳೆ ಲಕ್ಕಲಕಟ್ಟಿ ತಾಂಡಾದಲ್ಲಿ 50ಕ್ಕೂ ಅಧಿಕ ಕುಟುಂಬಗಳಿದ್ದು, ತಾಂಡಾದಲ್ಲಿ ನಿರಂತರ ವಿದ್ಯುತ್ ಸಂಪರ್ಕಕ್ಕೆ ಗ್ರಾಮಸ್ಥರು ಮನವಿ ಮಾಡಿದರು. ಮನವಿಗೆ ಸ್ಪಂದಿಸಿದ ಇಒ, ಸಂಬಂಧಿಸಿದ ಅಧಿಕಾರಿಗಳಿಗೆ ದೂರವಾಣಿ ಕರೆ ಮಾಡಿ ನಿರಂತರ ವಿದ್ಯುತ್ ಸಂಪರ್ಕ ಇಲ್ಲದೇ ತಾಂಡಾ ನಿವಾಸಿಗಳು ಸಂಕಷ್ಟ ಎದುರಿಸುತ್ತಿದ್ದು, ಸಮಸ್ಯೆ ಬಗೆಹರಿಸುವಂತೆ ಸೂಚಿಸಿದರು. ತಾಂಡಾಕ್ಕೆ ಸಮರ್ಪಕ ಕುಡಿಯುವ ನೀರು ಹಾಗೂ ತಾಂಡಾದಲ್ಲಿ ಸ್ವಚ್ಛತೆ ಕಾರ್ಯ ನಿರಂತರವಾಗಿ ಕೈಗೊಂಡು ತಾಂಡಾದ ವಾತಾವರಣ ಸ್ವಚ್ಛವಾಗಿಟ್ಟುಕೊಳ್ಳುವಂತೆ ಸಿಬ್ಬಂದಿಗೆ ತಾಕೀತು ಮಾಡಿದರು. ಲಕ್ಕಲಕಟ್ಟಿ ಗ್ರಾಮ ಪಂಚಾಯಿತಿ ಪಿಡಿಒ ಶಿವಯೋಗಿ ರಿತ್ತಿ,


ಉದಯವಾಹಿನಿ ಚಿತ್ರ

**ನರೇಗಾ ಕಾಮಗಾರಿಗಳಲ್ಲಿ ಕೆಲಸ ಮಾಡಲು ಕೂಲಿಕಾರರಿಗೆ ಕೇಂದ್ರ ಸರ್ಕಾರ ಇ-ಕೆವೈಸಿ ಮಾಡಿಸುವುದು ಕಡ್ಡಾಯಗೊಳಿಸಿದೆ. ಅ.31ರೊಳಗಾಗಿ ತಾಂಡಾದ ನರೇಗಾ ಕೂಲಿಕಾರರೆಲ್ಲರೂ ಇ-ಕೆವೈಸಿ ಮಾಡಿಸಿಕೊಳ್ಳಬೇಕು. ಇಲ್ಲವೇ ನರೇಗಾ ಉದ್ಯೋಗ ಚೀಟಿ ರದ್ದಾಗುವುದು. -ಚಂದ್ರಶೇಖರ ಬಿ. ಕಂದಕೂರ ಇಒ**

ಕಾರ್ಯದರ್ಶಿ ಶರಣಪ್ಪ ಮೇಟಿ, ತಾಂಡಾ ರೋಜಗಾರ ಮಿತ್ರ ಸಕ್ಕುಬಾಯಿ ರಾಥೋಡ, ಸುಜಾತ ಮ್ಯಾಗೇರಿ ಇದ್ದರು.

# ಶಿಕ್ಷಣಕ್ಕೆ ಹಣವಿಲ್ಲ; 2 ಲಕ್ಷ ಮಂದಿಗೆ ಸೀಟಿಲ್ಲ: ಸಾಜಿ ಆಕ್ರೋಶ

### ರಾಜ್ಯಮಟ್ಟದ ಹಾಸ್ಟೆಲ್ ವಿದ್ಯಾರ್ಥಿಗಳ ಸಮಾವೇಶ | ಎಸ್‌ಎಫ್‌ಐ ರಾಷ್ಟ್ರೀಯ ಅಧ್ಯಕ್ಷ ಸಾಜಿ ಭಾಗಿ

• ಉದಯವಾಹಿನಿ ಹಾವೇರಿ

ಸಮಾಜ ಹಾಗೂ ಜಗತ್ತು ಬದಲಿಸುವ ಅಸ್ತ್ರ ಶಿಕ್ಷಣ. ಆದರೆ, ಶಿಕ್ಷಣ ಕ್ಷೇತ್ರಕ್ಕೆ ಇಂದಿನ ಸರ್ಕಾರಗಳು ಹೆಚ್ಚಿನ ಅನುದಾನ ಮೀಸಲಿಡುತ್ತಿಲ್ಲ. ಹಿಂದುಳಿದ ವರ್ಗದ ಹಾಗೂ ಬಡವರಾದ 2 ಲಕ್ಷ ವಿದ್ಯಾರ್ಥಿಗಳಿಗೆ ಹಾಸ್ಟೆಲ್‌ಗಳಲ್ಲಿ ಸೀಟು ಸಿಗುತ್ತಿಲ್ಲ' ಎಂದು ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್‌ಎಫ್‌ಐ) ರಾಷ್ಟ್ರೀಯ ಅಧ್ಯಕ್ಷ ಆದರ್ಶ ಸಾಜಿ ಆಕ್ರೋಶ ವ್ಯಕ್ತಪಡಿಸಿದರು.

ಜಿಲ್ಲಾ ಗುರುಭವನದಲ್ಲಿ ನಡೆದ ಹಾಸ್ಟೆಲ್ ವಿದ್ಯಾರ್ಥಿಗಳ ರಾಜ್ಯ ಮಟ್ಟದ ಸಮಾವೇಶದ ಉದ್ಘಾಟನಾ ಸಮಾರಂಭದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

'ಗ್ರಾಮೀಣ ಪ್ರದೇಶದ ಹಲವು ವಿದ್ಯಾರ್ಥಿಗಳು, ಹಾಸ್ಟೆಲ್ ಇಲ್ಲವೆಂಬ ಕಾರಣಕ್ಕೆ ಶಿಕ್ಷಣದಿಂದ ವಂಚಿತವಾಗುತ್ತಿದ್ದಾರೆ. ರಾಜ್ಯದಲ್ಲಿ ಇದೇ ವರ್ಷ 3 ಲಕ್ಷ ವಿದ್ಯಾರ್ಥಿಗಳು ಹಾಸ್ಟೆಲ್ ಪ್ರವೇಶಕ್ಕೆ ಅರ್ಜಿ ಸಲ್ಲಿಸಿದ್ದರು. ಅವರಲ್ಲಿ ಕೇವಲ 1 ಲಕ್ಷ ವಿದ್ಯಾರ್ಥಿಗಳಿಗೆ ಮಾತ್ರ ಸೀಟು ಸಿಕ್ಕಿದೆ. ಉಳಿದ 2 ಲಕ್ಷ ವಿದ್ಯಾರ್ಥಿಗಳಿಗೆ ಸೀಟು ಸಿಕ್ಕಿಲ್ಲ. ಎಲ್ಲಾ ವಿದ್ಯಾರ್ಥಿಗಳಿಗೆ ಸೀಟು ನೀಡುವಲ್ಲಿ ಸರ್ಕಾರ ವಿಫಲವಾಗಿದೆ' ಎಂದು ಕಿಡಿಕಾರಿದರು. ಸರ್ಕಾರಗಳು ಶಿಕ್ಷಣ ಕ್ಷೇತ್ರಕ್ಕೆ ಬಜೆಟ್‌ಗಳಲ್ಲಿ ಹೆಚ್ಚಿನ ಅನುದಾನ ಮೀಸಲಿಡಬೇಕು. ಅರ್ಜಿ ಸಲ್ಲಿಸಿದ ಎಲ್ಲಾ ವಿದ್ಯಾರ್ಥಿಗಳಿಗೂ ಹಾಸ್ಟೆಲ್‌ಗಳಲ್ಲಿ ಸೀಟು ನೀಡಬೇಕು. ಅಗತ್ಯವಿರುವ ಕಡೆಗಳಲ್ಲಿ ಹೊಸ ಹಾಸ್ಟೆಲ್‌ಗಳನ್ನು ಆರಂಭಿಸಬೇಕು. ಒಬ್ಬ ವಿದ್ಯಾರ್ಥಿಯೂ ಹಾಸ್ಟೆಲ್ ಇಲ್ಲವೆಂಬ ಕಾರಣಕ್ಕೆ ಶಿಕ್ಷಣದಿಂದ ವಂಚಿತವಾಗಬಾರದು' ಎಂದು ಆಗ್ರಹಿಸಿದರು. ಕರ್ನಾಟಕ


ಉದಯವಾಹಿನಿ ಚಿತ್ರ

ಹಾಸ್ಟೆಲ್‌ಗಳಲ್ಲಿ ಮೂಲ ಸೌಕರ್ಯಗಳ ಕೊರತೆ ಹೆಚ್ಚಿದೆ.

ಗ್ರಂಥಾಲಯ, ಓದುವ ಕೊಠಡಿಗಳಿಲ್ಲ. ಗುಣಮಟ್ಟದ ಆಹಾರ ನೀಡುತ್ತಿಲ್ಲ. ಹಿಂದುಳಿದ ಹಾಗೂ ಬಡವರ ಮಕ್ಕಳು ಇರುವ ಹಾಸ್ಟೆಲ್‌ಗಳಲ್ಲಿ ಮೂಲ ಸೌಕರ್ಯ ಕಲ್ಪಿಸುವುದು ಸರ್ಕಾರದ ಕರ್ತವ್ಯ ಎಂದರು.

**4,000 ಸರ್ಕಾರಿ ಶಾಲೆಗಳು ಬಂದ್:** 'ಕರ್ನಾಟಕದಲ್ಲಿ 4,000 ಸರ್ಕಾರಿ ಶಾಲೆಗಳು ಈಗಾಗಲೇ ಬಂದ್ ಆಗಿದೆ' ಎಂದು ಸಾಜಿ ಹೇಳಿದರು. 'ದೇಶದಲ್ಲಿ 80,000 ಸರ್ಕಾರಿ ಶಾಲೆಗಳು ಹಂತ ಹಂತವಾಗಿ ಬಂದ್ ಆಗಿವೆ.

**ಹಾಸ್ಟೆಲ್ ವಿದ್ಯಾರ್ಥಿಗಳಿಗೆ ಬೆದರಿಕೆ ಆರೋಪ'**

**ಹಾವೇರಿಯಲ್ಲಿ ಸರ್ಕಾರದ 14 ಹಾಸ್ಟೆಲ್‌ಗಳಿವೆ. ಸುಮಾರು 700 ವಿದ್ಯಾರ್ಥಿಗಳು ಹಾಸ್ಟೆಲ್‌ನಲ್ಲಿ ಉಳಿದುಕೊಂಡಿದ್ದಾರೆ. ಈ ಪೈಕಿ ಕೇವಲ 50 ವಿದ್ಯಾರ್ಥಿಗಳು ಮಾತ್ರ ಸಮಾವೇಶದಲ್ಲಿ ಪಾಲ್ಗೊಂಡಿದ್ದರು. ಉಳಿದ ವಿದ್ಯಾರ್ಥಿಗಳಿಗೆ ಬೆದರಿಕೆಯೊಡ್ಡಿರುವ ಅಧಿಕಾರಿಗಳು ಸಮಾವೇಶದಲ್ಲಿ ಪಾಲ್ಗೊಳ್ಳದಂತೆ ತಡೆದಿದ್ದಾರೆ' ಎಂದು ಆಯೋಜಕರು ದೂರಿದರು. 'ಹಾಸ್ಟೆಲ್ ಸಮಸ್ಯೆ ಬಿಚ್ಚಿಡಲು ಸಮಾವೇಶ ಮಾಡಲಾಗಿದೆ. ಆದರೆ ವಿದ್ಯಾರ್ಥಿಗಳು ಭಾಗಿಯಾಗದಂತೆ ಅಡ್ಡಿಪಡಿಸಲಾಗಿದೆ. ಇದು ಅಧಿಕಾರಿಗಳ ದರ್ಪದ ವರ್ತನೆ. ಇದರ ವಿರುದ್ಧ ನಮ್ಮ ಹೋರಾಟ ನಡೆಯಲಿದೆ' ಎಂದು ಎಚ್ಚರಿಕೆ ನೀಡಿದರು.**

ಸೀಟು ನೀಡುವಲ್ಲಿ ಸರ್ಕಾರ ವಿಫಲ

ಹಿಂದುಳಿದ ವರ್ಗ ಹಾಗೂ ಬಡವರು ಓದುವ 6 ಲಕ್ಷ ಶಾಲೆಗಳಿಗೆ ಇಂದಿಗೂ ಅಂತರ್ಜಾಲ ಸಂಪರ್ಕವಿಲ್ಲ. 4 ಲಕ್ಷ ಶಾಲೆಗಳಿಗೆ ಒಂದೂ ಕಂಪ್ಯೂಟರ್ ಇಲ್ಲ. ಇಷ್ಟೆಲ್ಲ ಸಮಸ್ಯೆಗಳಿದ್ದರೂ ಕೇಂದ್ರ ಸರ್ಕಾರ ಮಾತ್ರ. ಕೋಮುವಾದಿ ಧೋರಣೆ ಮೂಲಕ ಜನರನ್ನು ಇಬ್ಭಾಗಿಸಿ ತನ್ನ ಬೇಳೆ ಬೇಯಿಸಿಕೊಳ್ಳುತ್ತಿದೆ' ಎಂದು ಅವರು ಆಕ್ರೋಶ ಹೊರಹಾಕಿದರು. ಸಮಾವೇಶ ಉದ್ಘಾಟಿಸಿದ ಕಲಬುರಗಿ ಕೇಂದ್ರೀಯ ವಿಶ್ವವಿದ್ಯಾಲಯದ ಸಹಾಯಕ ಪ್ರಾಧ್ಯಾಪಕ ಕಿರಣ ಗಾಜನೂರು ಮಾತನಾಡಿ, 'ದೇಶಕ್ಕೆ ಸ್ವಾತಂತ್ರ್ಯ ಬಂದರೂ ಪ್ರಜಾಪ್ರಭುತ್ವ ಇನ್ನೂ ಸಮರ್ಪಕವಾಗಿ ಜಾರಿಯಾಗದಿರುವುದು ಆತಂಕದ ಸಂಗತಿ. ಶಿಕ್ಷಣ ಇಲ್ಲದ ಪ್ರಜಾಪ್ರಭುತ್ವದಿಂದ ಸಮಾನತೆ ಸಾಧ್ಯವಿಲ್ಲ. ಶೇ 63ರಷ್ಟು ವಿದ್ಯಾರ್ಥಿಗಳು ಉನ್ನತ ಶಿಕ್ಷಣದಿಂದ ವಂಚಿತರಾಗುತ್ತಿದ್ದಾರೆ' ಎಂದರು.

ಎಸ್‌ಎಫ್‌ಐ ರಾಜ್ಯ ಘಟಕದ ಅಧ್ಯಕ್ಷ ಶಿವಪ್ಪ ಅಂಬ್ಲಿಕಲ್ ಅಧ್ಯಕ್ಷತೆ ವಹಿಸಿದ್ದರು. ಎಸ್‌ಎಫ್‌ಐ ಕೇಂದ್ರ ಸಮಿತಿ ಸದಸ್ಯರಾದ ಸುಜಾತ ವೈ, ದೊಡ್ಡ ಬಸವರಾಜ, ಡಿವೈಎಫ್‌ಐ ರಾಜ್ಯ ಕಾರ್ಯದರ್ಶಿ ಬಸವರಾಜ ಪೂಜಾರ, ಸಾಹಿತಿ ಸತೀಶ ಕುಲಕರ್ಣಿ, ಎಸ್‌ಎಫ್‌ಐ ರಾಜ್ಯ ಕಾರ್ಯದರ್ಶಿ ವಿಜಯಕುಮಾರ್ ಟಿ.ಎಸ್, ರಾಜ್ಯ ಉಪಾಧ್ಯಕ್ಷ ಬಸವರಾಜ ಎಸ್., ಸಮಾವೇಶದ ಸ್ವಾಗತ ಸಮಿತಿ ಅಧ್ಯಕ್ಷರಾದ ವಿಜಯಕುಮಾರ ಮುದುಕಣ್ಣವರ ಇದ್ದರು.

## ಮಿನಿ ನ್ಯೂಸ್

### ಉಡುಪಿ: ನ 28 ರಂದು ಶ್ರೀ ಕೃಷ್ಣ ಮಠಕ್ಕೆ ಭೇಟಿ ನೀಡಲಿರುವ ಪ್ರಧಾನಿ ಮೋದಿ

• ಉದಯವಾಹಿನಿ ಉಡುಪಿ

ನವೆಂಬರ್ 28 ರಂದು ಪ್ರಧಾನಿ ನರೇಂದ್ರ ಮೋದಿ ಅವರು ಗೀತಾ ಜಯಂತಿಯಂದು ಉಡುಪಿಯ ಪ್ರಸಿದ್ಧ ಶ್ರೀ ಕೃಷ್ಣ ಮಠಕ್ಕೆ ಭೇಟಿ ನೀಡಲಿದ್ದಾರೆ ಎಂದು ದೇವಾಲಯದ ಮೂಲಗಳು ದೃಢಪಡಿಸಿವೆ.

ವರದಿಗಳ ಪ್ರಕಾರ, ಪ್ರಧಾನಿಯವರು ಮಧ್ಯಾಹ್ನ 12 ಗಂಟೆ ಸುಮಾರಿಗೆ ದೇವಾಲಯದ ಆವರಣಕ್ಕೆ ಆಗಮಿಸುವ ನಿರೀಕ್ಷೆಯಿದೆ. ಅವರು ಶ್ರೀ ಕೃಷ್ಣನ ದರ್ಶನ ಪಡೆದು ಪ್ರಸಾದ ಸ್ವೀಕರಿಸಲಿದ್ದಾರೆ, ನಂತರ ಅವರು ಪರ್ಯಾಯ ಪುತ್ತಿಗೆ ಶ್ರೀ ಸುಗುಣೇಂದ್ರ ತೀರ್ಥ ಸ್ವಾಮೀಜಿ ಅವರೊಂದಿಗೆ ಖಾಸಗಿ ಸಂವಾದ ನಡೆಸಲಿದ್ದಾರೆ.

ಗೀತಾ ಜಯಂತಿ ಆಚರಣೆಗೆ ಸಂಬಂಧಿಸಿದಂತೆ, ಶ್ರೀ ಕೃಷ್ಣ ಮಠದ ಪಾರ್ಕಿಂಗ್ ಪ್ರದೇಶದಲ್ಲಿ ಲಕ್ಷ ಕಂಠ ಗೀತಾ ಪಾರಾಯಣ ಬೃಹತ್ ಗೀತೋತ್ಸವ' ಎಂಬ ದೊಡ್ಡ ಪ್ರಮಾಣದ ಕಾರ್ಯಕ್ರಮ ನಡೆಯಲಿದೆ. ಪ್ರಧಾನಿ ಮೋದಿ ಈ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದು, ಭಕ್ತರು ಮತ್ತು ಗಣ್ಯರು ಬೃಹತ್ ಪ್ರಮಾಣದಲ್ಲಿ ಸೇರುವ ನಿರೀಕ್ಷೆಯಿದೆ.

ಪ್ರಧಾನಿಯವರ ಕಚೇರಿಯು ಭೇಟಿಯನ್ನು ದೃಢಪಡಿಸಿದೆ ಮತ್ತು ಈ ಸಂದರ್ಭಕ್ಕೆ ಅಗತ್ಯವಿರುವ ಎಲ್ಲಾ ವ್ಯವಸ್ಥೆಗಳನ್ನು ಈಗಾಗಲೇ ಮಾಡಲಾಗುತ್ತಿದೆ ಎಂದು ಮಠದ ಮೂಲಗಳು ತಿಳಿಸಿವೆ. ಪ್ರಧಾನ ಮಂತ್ರಿಯವರ ಪ್ರಯಾಣದ ವಿವರಗಳು ಮತ್ತು ಭದ್ರತಾ ಕ್ರಮಗಳ ಕುರಿತು ಹೆಚ್ಚಿನ ವಿವರಗಳನ್ನು ನಿರೀಕ್ಷಿಸಲಾಗಿದೆ.

### ಆರೋಗ್ಯ ಸೇವಾ ಸೌಲಭ್ಯಗಳ ಕುರಿತು ಆಟೋ ಬ್ರ್ಯಾಂಡಿಂಗ್

• ಉದಯವಾಹಿನಿ ಚಿತ್ರದುರ್ಗ

ನಗರ ವಾಸಿಗಳಿಗೆ ಹಾಗೂ ಮಹಿಳೆಯರಿಗೆ ವಿಶೇಷವಾಗಿ ಆಯುಷ್ಮತಿ ಕಾರ್ನರ್ ಮುಖಾಂತರ ಆಯ್ದ ನಗರ ಆರೋಗ್ಯ ಕೇಂದ್ರಗಳಲ್ಲಿ ವಿವಿಧ ತಜ್ಞ ವೈದ್ಯರಿಂದ ನೀಡುವ ಸೇವಾ ಸೌಲಭ್ಯಗಳ ಕುರಿತು ಆಟೋ ಬ್ರ್ಯಾಂಡಿಂಗ್ ಪ್ರಚಾರಕ್ಕೆ ಗುರುವಾರ ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಟಿ.ಕೃಷ್ಣನಾಯಕ್ ಚಾಲನೆ ನೀಡಿದರು.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ರಾಷ್ಟ್ರೀಯ ನಗರ ಅಭಿಯಾನ ವತಿಯಿಂದ ನಗರ ವಾಸಿಗಳಿಗೆ ಗುಣಮಟ್ಟದ ಸಮಗ್ರ ಪ್ರಾಥಮಿಕ ಆರೋಗ್ಯ ಸೇವಾ ಸೌಲಭ್ಯಗಳು ಕುರಿತು ಆಟೋ ಬ್ರಾಂಡಿಂಗ್ ಮೂಲಕ ಚಿತ್ರದುರ್ಗ ನಗರದ 150 ಆಟೋಗಳಿಗೆ ಆಟೋ ಬ್ರಾಂಡಿಂಗ್ ಮಾಡಲಾಯಿತು. ಈ ಸಂದರ್ಭದಲ್ಲಿ ಆರೋಗ್ಯ ಇಲಾಖೆ ಸಿಬ್ಬಂದಿ ಹಾಗೂ ಆಟೋ ಚಾಲಕರು ಇದ್ದರು.


ಉದಯವಾಹಿನಿ ಚಿತ್ರ

### ಶ್ವಾನ ಆರೈಕೆ ಕೇಂದ್ರ ಕಟ್ಟಡಕ್ಕೆ ರಾಜ್ಯಸಭಾ ಸದಸ್ಯೆ ಡಾ.ಸುಧಾಮೂರ್ತಿ ಭೂಮಿಪೂಜೆ

• ಉದಯವಾಹಿನಿ ವಿಜಯಪುರ

ಜಿಲ್ಲಾಡಳಿತ, ಜಿಲ್ಲಾ ಪಂಚಾಯತಿ ಹಾಗೂ ಪಶುಪಾಲನಾ ಮತ್ತು ವೈದ್ಯಕೀಯ ಸೇವಾ ಇಲಾಖೆ, ಮಹಾನಗರ ಪಾಲಿಕೆ ಇವರ ಸಹಯೋಗದಲ್ಲಿ 2025-26ನೇ ಸಾಲಿನ ರಾಜ್ಯಸಭಾ ಸಂಸದೆ ಸುಧಾಮೂರ್ತಿ ಇವರ ಸಂಸದರ ಪ್ರದೇಶಾಭಿವೃದ್ಧಿ ಯೋಜನೆಯಡಿಯಲ್ಲಿ ಜಿಲ್ಲೆಯ ವಿಜಯಪುರ ತಾಲ್ಲೂಕಿನ ಬುರಣಾಪೂರ ಗ್ರಾಮದಲ್ಲಿ ಸಮಗ್ರ ಶ್ವಾನ ಆರೈಕೆ ಕೇಂದ್ರ ನಿರ್ಮಾಣ ಕಟ್ಟಡಕ್ಕೆ ಭೂಮಿ ಪೂಜೆಯನ್ನು ನೆರವೇರಿಸಿದರು. ಭೂಮಿ ಪೂಜೆ ನೆರವೇರಿಸಿದ ನಂತರ ಮಾತನಾಡಿದ ಅವರು, ಸುಪ್ರಿಂಕೋರ್ಟ್ ನಿರ್ದೇಶಾನುಸಾರ ಸುಸಜ್ಜಿತ ಕೇಂದ್ರ ನಿರ್ಮಾಣ ಮಾಡಲಾಗುತ್ತಿದ್ದು, ಈ ಕೇಂದ್ರಕ್ಕೆ ನೀರಿನ ವ್ಯವಸ್ಥೆ, ಎಬಿಸಿ ಸೆಂಟರ್ ನಿರ್ಮಾಣ ಮಾಡಲಾಗಿದ್ದು, ಈ ಕೇಂದ್ರದಲ್ಲಿ ಅನಾರೋಗ್ಯಕ್ಕೊಳಗಾದ, ಗಾಯಗೊಂಡ ಒಟ್ಟು 500 ನಾಯಿಗಳಿಗೆ ಆಶ್ರಯ ಒದಗಿಸಲಾಗುವುದು. ಸಂಸದರ ಪ್ರದೇಶಾಭಿವೃದ್ಧಿ ನಿಧಿಯಿಂದ ಎರಡು ಕೋಟಿ ವೆಚ್ಚದಲ್ಲಿ ಈ ಕೇಂದ್ರ ನಿರ್ಮಾಣ ಮಾಡಲಾಗುತ್ತಿದ್ದು, ಶ್ವಾನಗಳಿಗೆ ಈ ಕೇಂದ್ರ ಅನುಕೂಲ ಕಲ್ಪಿಸಲಿದೆ ಎಂದು ಅವರು ಹೇಳಿದರು.

### ನೀರಾವರಿ ಯೋಜನೆ ಸಮರ್ಪಕ ಅನುಷ್ಠಾನದಿಂದ ರೈತ ಉಳಿವು: ನಿರ್ಮಲಾನಂದ ಶ್ರೀ

• ಉದಯವಾಹಿನಿ ಬಾಗೂರು

ನೀರಾವರಿ ಯೋಜನೆಗಳನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸಿ ಕೆರೆ-ಕಟ್ಟೆಗಳನ್ನು ತುಂಬುವುದರಿಂದ ರೈತರನ್ನು ಉಳಿಸಲು ಸಾಧ್ಯವಾಗುತ್ತದೆ. ಈ ಬಗ್ಗೆ ಎಲ್ಲಾ ಜನಪ್ರತಿನಿಧಿಗಳು ಹೆಚ್ಚು ಗಮನ ಹರಿಸಬೇಕಿದೆ' ಎಂದು ಆದಿಚುಂಚನಗಿರಿ ಮಹಾಮಠದ ನಿರ್ಮಲಾನಂದ ನಾಥ ಸ್ವಾಮೀಜಿ ಅಭಿಪ್ರಾಯಪಟ್ಟರು. ಹೋಬಳಿಯ ವಳಗೇರಹಳ್ಳಿ-ಅಣತಿ ಗ್ರಾಮದ ಕೆರೆಗೆ ಬಾಗಿನ ಅರ್ಪಣೆ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಅವರು ಮಾತನಾಡಿದರು.

ಕ್ಷೇತ್ರದ ಶಾಸಕ ಸಿಎನ್ ಬಾಲಕೃಷ್ಣ ಅವರು ಸರ್ಕಾರದ ನೆರವಿನೊಂದಿಗೆ ತಾಲ್ಲೂಕಿನಲ್ಲಿ ಅನೇಕ ನೀರಾವರಿ ಯೋಜನೆಗಳನ್ನು ಅನುಷ್ಠಾನಗೊಳಿಸಿರುವುದರಿಂದ ತಾಲ್ಲೂಕಿನ ರೈತರಿಗೆ ಹೆಚ್ಚು ಅನುಕೂಲವಾಗಿದೆ ಎಂದರು. ಶಾಸಕ ಸಿ.ಎನ್. ಬಾಲಕೃಷ್ಣ ಮಾತನಾಡಿ, ವಳಗೇನಹಳ್ಳಿ ಅಣತಿ ಗ್ರಾಮದ ದೊಡ್ಡಕೆರೆ ಸುಮಾರು 1,000 ಎಕರೆ ಪ್ರದೇಶದಲ್ಲಿದ್ದು ಜಿಲ್ಲೆಯಲೇ ಅತಿ ದೊಡ್ಡ ಎರಡನೇ ಕೆರೆಯಾಗಿದೆ. ಕಳೆದ ಹಲವಾರು ವರ್ಷಗಳಿಂದ ನವಿಲೆ ಏತ ನೀರಾವರಿ ಯೋಜನೆಯಿಂದ ಪೈಪ್ ಲೈನ್ ಮೂಲಕ ಕೆರೆಗೆ ನೀರು ಹರಿಸಲಾಗುತ್ತಿದೆ. ಈ ತಿಂಗಳ ಕಳೆದ ವಾರ ಹೆಚ್ಚು ಮಳೆ ಆಗಿದ್ದರಿಂದ ನಿರೀಕ್ಷೆಗಿಂತ ಮುಂಚೆಯೇ ಕೆರೆ ತುಂಬಿದೆ. ತಾಲೂಕಿನಲ್ಲಿ ಪ್ರಥಮ ಆದ್ಯತೆಯಾಗಿ ಕಳೆದ ಮೂರು ಅವಧಿಗಳಿಂದ ನೀರಾವರಿ ಯೋಜನೆಗಳಿಗೆ ಹೆಚ್ಚಿನ ಒತ್ತು ನೀಡಲಾಗುತ್ತಿದೆ' ಎಂದರು. ಪೂಜಾ ಕಾರ್ಯಕ್ರಮದಲ್ಲಿ ಆದಿಚುಂಚನಗಿರಿ ಹಾಸನ ಶಾಖಾಮಠದ ಶಂಭುನಾಥ ಸ್ವಾಮೀಜಿ, ತಾಲ್ಲೂಕು ಅರ್ಚಕರ ಸಂಘದ ಅಧ್ಯಕ್ಷ ಶ್ರೀಧರಮೂರ್ತಿ, ಶ್ರೀ ಕಾಲಭೈರವೇಶ್ವರ ಸೇವಾ ಸಮಿತಿ ಅಧ್ಯಕ್ಷ ಬೋರ್ವೆಲ್ ರಾಮಚಂದ್ರು, ಕೃಷಿ ಪತ್ತಿನ ನಿರ್ದೇಶಕ ವಿಸಿ ಗಿರೀಶ್, ಮುಖಂಡರಾದ ಜಯರಾಮಣ್ಣ, ಪಾಲ್ಗೊಂಡಿದ್ದರು.


ಉದಯವಾಹಿನಿ ಚಿತ್ರ

## ದಿನ ಭವಿಷ್ಯ

| | | |
|---|---|---|
| ರಾಹುಕಾಲ | ಬೆಳಿಗ್ಗೆ | 10:30 ರಿಂದ 12:00 |
| ಗುಳಿಕಕಾಲ | ಬೆಳಿಗ್ಗೆ | 07:30 ರಿಂದ 09:00 |
| ಯಮಗಂಡಕಾಲ | ಮಧ್ಯಾಹ್ನ | 03:00 ರಿಂದ 04:30 |

**ಮೇಷ** ಅತಿಯಾಗಿ ತಿನ್ನುವುದನ್ನು ತಪ್ಪಿಸಿ ಮತ್ತು ಫಿಟ್ ಆಗಿ ಉಳಿಯಲು ನಿಯಮಿತವಾಗಿ ಹೆಲ್ತ್ ಕ್ಲಬ್‌ಗೆ ಭೇಟಿ ನೀಡಿ. ವಿಳಂಬಿತ ಪಾವತಿಗಳನ್ನು ಮಾಡುತ್ತಿದ್ದ ಹಾಗೆ ಹಣದ ಪರಿಸ್ಥಿತಿ ಸುಧಾರಿಸುತ್ತದೆ.

**ವೃಷಭ** ನೀವು ಮಕ್ಕಳು, ನಿಮಗಿಂತ ಕಡಿಮೆ ಅನುಭವಿಯಾಗಿರುವವರ ಜೊತೆ ತಾಳ್ಮೆಯಿಂದಿರಬೇಕು. ಡೇಟ್ ಕಾರ್ಯಕ್ರಮ ವಿಫಲವಾಗುವುದಾದ್ದರಿಂದ ನಿರಾಶೆಯಾಗಬಹುದು.

**ಮಿಥುನ** ನಿಮ್ಮ ದೈಹಿಕ ಆರೋಗ್ಯವನ್ನು ಸುಧಾರಿಸಲು ಸಮತೋಲಿತ ಆಹಾರ ತೆಗೆದುಕೊಳ್ಳಿ ಸಾಲ ತೆಗೆದುಕೊಳ್ಳಲು ಹೊರಟಿದ್ದರೆ ಮತ್ತು ಈ ಕೆಲಸದಲ್ಲಿ ದೀರ್ಘಕಾಲ ತೊಡಗಿಸಿಕೊಂಡಿದ್ದರೆ, ನೀವು ಸಾಲ ಪಡೆಯಬಹುದು.

**ಕರ್ಕಾಟಕ** ಕೆಲಸದ ಒತ್ತಡ ಮತ್ತು ಮನೆಯಲ್ಲಿ ಅಪಶ್ರುತಿ ಸ್ವಲ್ಪ ಉದ್ವೇಗ ತರಬಹುದು. ದೀರ್ಘಕಾಲದ ಲಾಭಗಳಿಗೆ ಸ್ಟಾಕ್‌ಗಳು, ಮ್ಯೂಚುವಲ್ ಫಂಡ್‌ಗಳಲ್ಲಿ ಹೂಡಿಕೆ ಮಾಡುವುದನ್ನು ಶಿಫಾರಸು ಮಾಡಲಾಗಿದೆ.

**ಸಿಂಹ** ಯಾವುದಾದರೂ ಐತಿಹಾಸಿಕ ಸ್ಮಾರಕಕ್ಕೆ ಒಂದು ಸಣ್ಣ ಪ್ರಯಾಣವನ್ನು ಯೋಜಿಸಿ. ಇದು ಮಕ್ಕಳು ಮತ್ತು ಕುಟುಂಬದವರಿಗೆ ಜೀವನದ ಸಾಮಾನ್ಯ ಸಮಸ್ಯೆಗಳಿಂದ ಒಂದು ಅಗತ್ಯವಾಗಿದ ಶಮನವನ್ನು ಒದಗಿಸುತ್ತದೆ.

**ಕನ್ಯಾ** ಇಂದು ನಿಮ್ಮ ಪ್ರೇಮಿಯನ್ನು ನಿರಾಸೆಗೊಳಿಸಬೇಡಿ ಇದು ನಂತರ ನಿಮ್ಮನ್ನು ಪಶ್ಚಾತ್ತಾಪಗೊಳ್ಳುವಂತೆ ಮಾಡುತ್ತದೆ. ಇಂದು ಕೆಲಸದಲ್ಲಿ ಎಲ್ಲರೂ ನಿಮಗೆ ಪ್ರೀತಿ ಮತ್ತು ಬೆಂಬಲ ನೀಡುತ್ತಾರೆ.

**ತುಲಾ** ನೀವು ಅತೀ ಉದಾರಿಯಾಗಿದ್ದಲ್ಲಿ - ನಿಮ್ಮ ನಿಕಟ ಜನರು ನಿಮ್ಮ ಅನುಚಿತ ಲಾಭ ತೆಗೆದುಕೊಳ್ಳಬಹುದು. ಪ್ರಣಯದ ಸಂಬಂಧ ಆತ್ಯಾಕರ್ಷಕವಾಗಿದ್ದರೂ ಅದು ಬಹು ಕಾಲ ಬಾಳುವುದಿಲ್ಲ.

**ವೃಶ್ಚಿಕ** ಅಭಿಪ್ರಾಯ ನೀಡುವಾಗ ಇತರರ ಭಾವನೆಗಳನ್ನು ವಿಶೇಷವಾಗಿ ಪರಿಗಣಿಸಿ. ನೀವು ಮಾಡಿದ ಯಾವುದೇ ತಪ್ಪು ನಿರ್ಧಾರ ಅವರಿಗೆ ಮಾತ್ರ ವೃತಿರಿಕ್ತ ಪರಿಣಾಮ ಉಂಟುಮಾಡದೇ ನಿಮಗೂ ಮಾನಸಿಕ ಒತ್ತಡ ನೀಡುತ್ತದೆ.

**ಧನಸ್ಸು** ಮನೋಬಲದ ನಿಮ್ಮ ಕೊರತೆ ನಿಮ್ಮನ್ನು ಭಾವನಾತ್ಮಕ ಮತ್ತು ಮಾನಸಿಕ ವರ್ತನೆಯ ಬಲಿಪಶುವಾಗಿ ಮಾಡಬಹುದು. ಇಂದು ನಿಮಗೆ ಹಣದ ಲಾಭವಾಗುವ ಪೂರ್ತಿ ಸಾಧ್ಯತೆ ಇದೆ.

**ಮಕರ** ನಿಮ್ಮ ಸಂಗಾತಿಯ ನಿಷ್ಠಾವಂತ ಹೃದಯ ಮತ್ತು ಅದ್ಭುತ ಚೈತನ್ಯ ನಿಮಗೆ ಸಂತೋಷ ನೀಡಬಹುದು. ಹಿಂದಿನ ಬಂಡವಾಳದಿಂದ ಆದಾಯವನ್ನು ನಿರೀಕ್ಷಿಸಿದ್ದಲ್ಲಿ, ಸೋದರಿಯು ಪ್ರೀತಿ ನಿಮ್ಮನ್ನು ಉತ್ತೇಜಿಸುತ್ತದೆ.

**ಕುಂಭ** ನಿಮ್ಮ ಸಾಮಾಜಿಕ ಜೀವನವನ್ನು ನಿರ್ಲಕ್ಷಿಸಬೇಡಿ. ನಿಮ್ಮ ಬಿಡುವಿರದ ಕೆಲಸದಿಂದ ಸ್ವಲ್ಪ ಸಮಯ ತೆಗೆದುಕೊಳ್ಳಿ, ನಿಮ್ಮ ಕುಟುಂಬದೊಂದಿಗೆ ಯಾವುದಾದರೂ ಪಾರ್ಟಿಗೆ ಹೋಗಿ.

**ಮೀನ** ಧ್ಯಾನ ಪರಿಹಾರ ತರುತ್ತದೆ. ತೀರಾ ಖರ್ಚು ಮಾಡುವ ಮತ್ತು ಮನರಂಜನೆಗೆ ತುಂಬಾ ಖರ್ಚ ಮಾಡುವ ನಿಮ್ಮ ಪ್ರವೃತ್ತಿಗೆ ಕಡಿವಾಣ ಹಾಕಿ. ಕುಟುಂಬದ ಪರಿಸ್ಥಿತಿ ಇಂದು ನೀವು ಯೋಚಿಸುವ ಹಾಗೆ ಇರುವುದಿಲ್ಲ.

### ಸ್ವಯಂಪ್ರೇರಿತ ದೂರು ದಾಖಲಿಸಿಕೊಳ್ಳಲು ಉಪಲೋಕಾಯುಕ್ತ ನ್ಯಾಯಮೂರ್ತಿ ವೀರಪ್ಪ ಸೂಚನೆ

# ಜಿಲ್ಲಾಸ್ಪತ್ರೆ ಅವ್ಯವಸ್ಥೆ: ಲೆಕ್ಕ ತಪ್ಪಿದ ನಗರಸಭೆ ವಿರುದ್ಧ ಗರಂ

• ಉದಯವಾಹಿನಿ ಕೊಪ್ಪಳ

ಮಾಸಿದ ದಿಂಬು, ಕೊಳಕಾದ ಹಾಸಿಗೆ, ಎಚ್ಚರಿಕೆಯ ಕಾರಣಕ್ಕೆ ಸ್ವಚ್ಛಗೊಂಡ ಆಸ್ಪತ್ರೆ, ಸಮರ್ಪಕ ದಾಖಲೆಗಳ ನಿರ್ವಹಣೆ ಕೊರತೆ, ರೋಗಿಗಳು ಬಳಸುವ ಚರಂಡಿ ನೀರು ಸರಿಯಾಗಿ ಹೋಗಲು ವ್ಯವಸ್ಥೆ ಇಲ್ಲದಿರುವುದು ಹಾಗೂ ಕುಡಿಯುವ ನೀರಿನ ವ್ಯವಸ್ಥೆ ಬಳಿ ಅಸ್ವಚ್ಛತೆ.

ಇದು ಇಲ್ಲಿನ ಜಿಲ್ಲಾಸ್ಪತ್ರೆಯಲ್ಲಿ ಕಂಡುಬಂದ ಚಿತ್ರಣ. ಉಪಲೋಕಾಯುಕ್ತ ನ್ಯಾಯಮೂರ್ತಿ ಬಿ.ವೀರಪ್ಪ ಅವರು ಆಸ್ಪತ್ರೆಯಲ್ಲಿನ ಅವ್ಯವಸ್ಥೆ ಕಂಡು ಗರಂ ಆಗಿ ವೈದ್ಯಕೀಯ ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡರು. ತಕ್ಷಣವೇ ಹಾಸಿಗೆಗಳನ್ನು ಬದಲಿಸಿ ಮತ್ತೊಮ್ಮೆ ಬಂದು ನೋಡುತ್ತೇನೆ ಎನ್ನುವ ಸೂಚನೆ ನೀಡಿದರು. ನೆಲಮಹಡಿಯಿಂದ ಆಸ್ಪತ್ರೆಯ ವಿವಿಧ ವಿಭಾಗಗಳಿಗೆ ಭೇಟಿ ನೀಡಿದ ಉಪಲೋಕಾಯುಕ್ತರು ಹಾಗೂ ಅವರ ತಂಡದವರು ದಾಖಲೆಗಳನ್ನು ಪರಿಶೀಲಿಸಿ ಜನರಿಂದ ಮಾಹಿತಿ ಸಂಗ್ರಹಿಸಿದರು.

ಕುಡಿತದ ಕಾರಣಕ್ಕೆ ಅನಾರೋಗ್ಯಗೊಂಡು ಆಸ್ಪತ್ರೆ ಸೇರಿದ ಕೆಲ ಯುವಕ ಹಾಗೂ ಮಧ್ಯ ವಯಸ್ಕರಿಗೆ ಬುದ್ಧಿವಾದ ಹೇಳಿದ ಉಪಲೋಕಾಯುಕ್ತರು 'ಕುಡಿದು ಯಾಕೆ ದೇಹ ಹಾಳು ಮಾಡಿಕೊಳ್ಳುತ್ತೀರಿ. ಬೈಕ್‌ಗಳನ್ನು ವೇಗವಾಗಿ ಓಡಿಸಿ ದೇಹದ ಅಂಗಗಳನ್ನು ಯಾಕೆ ಕಳೆದುಕೊಳ್ಳುತ್ತೀರಿ. ಇನ್ನು ಮುಂದೆ ಈ ರೀತಿ ಮಾಡಿಕೊಳ್ಳಬೇಡಿ' ಎಂದು ಕಿವಿಮಾತು ಹೇಳಿದರು. ಚಿಕಿತ್ಸೆಗಾಗಿ ಬಂದಿದ್ದ ವೃದ್ಧರು, ಮಹಿಳೆಯರಿಗೆ ಧೈರ್ಯ ತುಂಬಿ ಗುಣಮುಖರಾಗುತ್ತೀರಿ ಎಂದು ಭರವಸೆ ತುಂಬಿದರು.

'ಔಷಧಿಗಳನ್ನು ಹೊರಗಡೆಯಿಂದ ತರಲು ವೈದರು ಚೀಟಿ ಬರೆದು ಕೊಡುತ್ತಾರೆ ಎಂದು ಜನ ಹೇಳುತ್ತಿದ್ದಾರೆ. ಹೊರಗಡೆ ಬರೆದುಕೊಡಲು ಸರ್ಕಾರಿ ಆಸ್ಪತ್ರೆಗಳಲ್ಲಿ ಅವಕಾಶವಿಲ್ಲ. ಔಷಧ ಲಭ್ಯವಿಲ್ಲದಿದ್ದರೂ ಆಸ್ಪತ್ರೆಯವರೇ ಹೊರಗಡೆಯಿಂದ ತಂದು ಕೊಡಬೇಕು' ಎಂದು ಎಚ್ಚರಿಕೆ ನೀಡಿದರು.


ಉದಯವಾಹಿನಿ ಚಿತ್ರ

> ಸರ್ಕಾರ ಸೌಲಭ್ಯಗಳನ್ನು ಒದಗಿಸಿದರೂ ಜನರಿಗೆ ತಲುಪಿಸಲು ಅಧಿಕಾರಿಗಳು ಪ್ರಾಮಾಣಿಕ ಪ್ರಯತ್ನ ಮಾಡುತ್ತಿಲ್ಲ. ಭ್ರಷ್ಟಾಚಾರ ನಿರ್ಮೂಲನೆ ಮಾಡಿ ದುಷ್ಟರ ಸಂಹಾರಕ್ಕೆ ಇಲ್ಲಿಗೆ ಬಂದಿದ್ದೇನೆ -ಬಿ.ವೀರಪ್ಪ ಉಪಲೋಕಾಯುಕ್ತ ನ್ಯಾಯಮೂರ್ತಿ

ಕುಡಿಯುವ ನೀರಿನ ಘಟಕ ತುಕ್ಕು ಹಿಡಿದಿದ್ದು, ಶೌಚಾಲಯಗಳು ದುರಸ್ತಿಯಲ್ಲಿವೆ. ತಾಯಿ ಮತ್ತು ಮಗುವಿನ ಆಸ್ಪತ್ರೆಯಲ್ಲಿಯೂ ಸರಿಯಾಗಿ ದಾಖಲೆ ನಿರ್ವಹಣೆ ಮಾಡದ ಕುರಿತು ಅಸಮಾಧಾನ ವ್ಯಕ್ತಪಡಿಸಿದ ಅವರು ಜಿಲ್ಲಾಸ್ಪತ್ರೆ ಅಧಿಕಾರಿಗಳ ಮೇಲೆ ಸ್ವಯಂಪ್ರೇರಿತ ದೂರು ದಾಖಲಿಸಿಕೊಳ್ಳಲಾಗುವುದು ಎಂದು ತಿಳಿಸಿದರು. ಇದಕ್ಕೂ ಮೊದಲು ಜಿಲ್ಲಾ ಕೇಂದ್ರದ ರೈಲು ನಿಲ್ದಾಣಕ್ಕೆ ಬಂದವರೇ ನೇರವಾಗಿ ಕೇಂದ್ರೀಯ ಬಸ್ ನಿಲ್ದಾಣಕ್ಕೆ ದಿಢೀರ್ ಭೇಟಿ ನೀಡಿ ಅಸ್ವಚ್ಛತೆಗೆ ಆಕ್ರೋಶ ವ್ಯಕ್ತಪಡಿಸಿ ಅಧಿಕಾರಿಗಳಿಗೆ ಚಾಟಿ ಬೀಸಿದರು.

ತಾಯಿ ಮತ್ತು ಮಗುವಿನ ಆಸ್ಪತ್ರೆ, ಬಳಿಕ ತಹಶೀಲ್ದಾರ್ ಕಚೇರಿ, ಭೂಮಿ ಕೇಂದ್ರ, ಉಪನೋಂದಣಾಧಿಕಾರಿಗಳ ಕಚೇರಿಯಲ್ಲಿ ಪರಿಶೀಲಿಸಿ ನಗರಸಭೆಗೆ ತೆರಳಿದರು. ಅಲ್ಲಿ ಒಬ್ಬಬ್ಬ ಸಿಬ್ಬಂದಿಯನ್ನು ಕರೆಯಿಸಿ ತರಾಟೆಗೆ ತೆಗೆದುಕೊಂಡ ಬಿ.ವೀರಪ್ಪ ಅವರು ದಾಖಲೆ ಸಮರ್ಪಕವಾಗಿ ನಿರ್ವಹಣೆ ಮಾಡದ್ದಕ್ಕೆ ಗರಂ ಆದರು.

ಸರ್ಕಾರಿ ಜಾಗದಲ್ಲಿ ಒತ್ತುವರಿ ಮಾಹಿತಿ, ಅಧಿಕಾರಿಗಳ ಲಾಗಿನ್‌ನಲ್ಲಿ ಇರುವ ಫೈಲ್‌ಗಳು, ಬೀದಿ ದೀಪದ ವ್ಯವಸ್ಥೆ, ಎಲ್ಲೆಂದರಲ್ಲಿ ಕಸ ಬೀಸಾಡಿರುವುದು, ಪರವಾನಗಿ ಇಲ್ಲದ ಅಂಗಡಿಗಳ ದಾಖಲೆ, ನಿಯಮ ಉಲ್ಲಂಘಿಸಿ ಕಟ್ಟಡ ನಿರ್ಮಾಣ ಮಾಡಿದವರ ವಿರುದ್ಧ ಕೈಗೊಂಡ ಕ್ರಮ ಹೀಗೆ ಅನೇಕ ವಿಷಯಗಳ ಕುರಿತು ಮಾಹಿತಿ ಪಡೆದುಕೊಂಡರು. ನಗರಸಭೆ ಲೆಕ್ಕಾಧಿಕಾರಿ ಜಿಎಸ್‌ಟಿಯ 17 ಕೋಟಿ ಮೊತ್ತವನ್ನು ಅಭಿವೃದ್ಧಿ ಕಾಮಗಾರಿಗಳಿಗೆ ಬಳಸಿಕೊಳ್ಳಲಾಗಿದೆ ಎನ್ನುವ ಮಾಹಿತಿ ತಿಳಿದು ಉಪಲೋಕಾಯುಕ್ತರು ಅಚ್ಚರಿಗೊಳಗಾದರು. ವಿವಿಧೆಡೆ ಸಿಬ್ಬಂದಿ ಮಾಹಿತಿ ನೀಡಲು ತಡವರಿಸಿದರು.

ಬಳಿಕ ತೋಟಗಾರಿಕೆ ಇಲಾಖೆ, ಗಾಂಧಿ ನಗರದ ಅಂಗನವಾಡಿ ಕೇಂದ್ರ, ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ತಾಲ್ಲೂಕು ಪಂಚಾಯಿತಿ ಕಚೇರಿ, ಜಿಲ್ಲಾಡಳಿತ ಭವನದಲ್ಲಿರುವ ಗಣಿ ಮತ್ತು ಭೂವಿಜ್ಞಾನ ಇಲಾಖೆ, ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ಜಿಲ್ಲಾ ನೋಂದಣಾಧಿಕಾರಿಗಳ ಕಚೇರಿ, ವಯಸ್ಕರ ಶಿಕ್ಷಣ ಇಲಾಖೆ, ಆಹಾರ ಮತ್ತು ನಾಗರಿಕರ ಸರಬರಾಜು ಇಲಾಖೆ, ಡಿಎಚ್‌ಒ ಕಚೇರಿ, ಸಮಾಜ ಕಲ್ಯಾಣ ಇಲಾಖೆ ಸೇರಿದಂತೆ ವಿವಿಧ ಇಲಾಖೆಗಳಿಗೆ ಭೇಟಿ ನೀಡಿ ದಾಖಲೆ, ಹಾಜರಾತಿ ಮತ್ತು ಇತರೆ ಕಾರ್ಯ ಚಟುವಟಿಕೆಗಳ ಬಗ್ಗೆ ಪರಿಶೀಲಿಸಿದರು.

**ಫೋನ್ ಪೇನಲ್ಲಿ ವಹಿವಾಟು ಪರಿಶೀಲನೆ**

ವಿವಿಧೆಡೆ ಕೆಲಸ ಮಾಡುವ ಸಿಬ್ಬಂದಿ ಮೊಬೈಲ್ ಪಡೆದುಕೊಂಡ ಲೋಕಾಯುಕ್ತ ಅಧಿಕಾರಿಗಳು ಹಣದ ವಹಿವಾಟು ಪರಿಶೀಲಿಸಿದರು. ಇದರಲ್ಲಿಯೂ ಕೆಲ ಸಿಬ್ಬಂದಿ ಚಾಣಾಕ್ಷತನ ತೋರಿ 'ಫೋನ್ ಪೇ' ಆ್ಯಪ್ ಮೊಬೈಲ್‌ನಿಂದ ತೆಗೆದು ಹಾಕಿದ್ದರೆ ಇನ್ನೂ ಕೆಲವರು ಈ ಪ್ಯಾಡ್ ಮೊಬೈಲ್ ಬಳಕೆ ಮಾಡಿದ ಚಿತ್ರಣ ಕಂಡುಬಂದಿತು. ನಗರಸಭೆ ಅವ್ಯವಸ್ಥೆಗೆ ಗರಂ ಆದ ಬಿ.ವೀರಪ್ಪ 'ತಪ್ಪಿತಸ್ಥರನ್ನೇ ಹೊಣೆ ಮಾಡಿ ಪ್ರಕರಣ ದಾಖಲಿಸಲಾಗುವುದು. ಇಲ್ಲಿನ ಪ್ರಮುಖ ಅಧಿಕಾರಿಗಳ ಒಂದು ವರ್ಷ ಬ್ಯಾಂಕ್ ಖಾತೆಯ ಸ್ಟೇಟ್‌ಮೆಂಟ್ ನೀಡಬೇಕು. ಎಲ್ಲಿಯೇ ವರ್ಗಾವಣೆಯಾದರೂ ಕ್ರಮ ಕೈಗೊಳ್ಳುತ್ತೇವೆ' ಎಂದು ಎಚ್ಚರಿಕೆ ನೀಡಿದರು.

**ಆಸ್ಪತ್ರೆಗೆ ದಾಖಲಿಸಿ**

ನಾಪತ್ತೆಯಾದ ಕುಟುಂಬಸ್ಥರು ಗಂಗಾವತಿಯ ಪಂಪಾನಗರದ ಹನುಮಂತಮ್ಮ ಅವರಿಗೆ ಕಾಲುಗಳಲ್ಲಿ ನಿಶ್ಯಕ್ತಿಯಾಗಿದ್ದು ಚಿಕಿತ್ಸೆಗಾಗಿ ಜಿಲ್ಲಾಸ್ಪತ್ರೆಗೆ ದಾಖಲಾಗಿದ್ದಾರೆ. ಅದರೆ ಅವರನ್ನು ಆಸ್ಪತ್ರೆಗೆ ದಾಖಲಿಸಿದ ಸಹೋದರ ವಿಜಯ್ ಬಳಿಕ ನಾಪತ್ತೆಯಾಗಿರುವ ಪ್ರಸಂಗ ಉಪಲೋಕಾಯುಕ್ತರ ಭೇಟಿ ವೇಳೆ ಬಹಿರಂಗವಾಗಿದೆ. ಅವರ ಮುಂದೆ ನೋವು ತೋಡಿಕೊಂಡ ಹನುಮಂತಮ್ಮ ತಂದೆ ಹಾಗೂ ತಾಯಿ ತೀರಿಕೊಂಡಿದ್ದಾರೆ. ಗಂಗಾವತಿ ತವರು ಮನೆ ಗದಗ ಜಿಲ್ಲೆ ಗಂಡನ ಮನೆ. ಸಹೋದರ ವಿಜಯ್ ಬಂದು ಅಡ್ಮಿಟ್ ಮಾಡಿ ಹೋದವರು ಬಂದಿಲ್ಲ, ಅವರ ಫೋನ್ ಸಂಖ್ಯೆ ಕೂಡ ಇಲ್ಲ, ಮೂರು ವರ್ಷದ ಮಗುವನ್ನು ಓಣಿಯಲ್ಲಿ ಬಿಟ್ಟು ಬಂದಿದ್ದೇನೆ ಎಂದು ಕಣ್ಣೀರು ಹಾಕಿದರು. ಆಗ ಬಿ.ವೀರಪ್ಪ ಅವರು ಹೆಚ್ಚುವರಿ ಜಿಲ್ಲಾಧಿಕಾರಿ ಸಿದ್ರಾಮೇಶ್ವರ ಅವರಿಗೆ ನೊಂದ ಮಹಿಳೆಯ ಕುಟುಂಬದವರನ್ನು ಪತ್ತೆ ಹಚ್ಚುವಂತೆ ಸೂಚಿಸಿ ಉತ್ತಮ ಚಿಕಿತ್ಸೆ ನೀಡಿ ಎಂದು ವೈದ್ಯರಿಗೆ ನಿರ್ದೇಶನ ನೀಡಿದರು.

## ಜೀವ ರಕ್ಷಣೆಗೆ ಪ್ರಥಮ ಚಿಕಿತ್ಸೆ ಅತ್ಯವಶ್ಯ: ಭಾಸ್ಕರ್ ರಾವ್

• ಉದಯವಾಹಿನಿ ಬಳ್ಳಾರಿ

ಜೀವ ರಕ್ಷಣೆಗೆ ಅಗತ್ಯವಾದ ಪ್ರಥಮ ಚಿಕಿತ್ಸಾ ಕೌಶಲವನ್ನು ಯುವ ರೆಡ್ ಕ್ರಾಸ್‌ನ ಮೂಲಕ ಪ್ರತಿಯೊಬ್ಬರು ಪಡೆಯಬೇಕು. ಈ ಮೂಲಕ ಜೀವ ರಕ್ಷಣೆ ಮಾಡಬೇಕು' ಎಂದು ಭಾರತೀಯ ಯುವ ರೆಡ್ ಕ್ರಾಸ್ ಸಂಸ್ಥೆಯ ರಾಜ್ಯ ಶಾಖೆ ಉಪಾಧ್ಯಕ್ಷ ಹಾಗೂ ಮಾಜಿ ಐಪಿಎಸ್ ಅಧಿಕಾರಿ ಭಾಸ್ಕರ್ ರಾವ್ ಹೇಳಿದರು. ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯದ ಯುವ ರೆಡ್ ಕ್ರಾಸ್ ಘಟಕದ ವತಿಯಿಂದ ವಿವಿ ಆವರಣದಲ್ಲಿ ಆಯೋಜಿಸಿದ್ದ 'ವಿಶ್ವ ಪ್ರಥಮ ಚಿಕಿತ್ಸಾ ದಿನಾಚರಣೆ'ಯಲ್ಲಿ ಅವರು ಮಾತನಾಡಿದರು.

'ರೆಡ್ ಕ್ರಾಸ್ ಸೇವೆಗೆ 4 ಬಾರಿ ನೊಬೆಲ್ ಪುರಸ್ಕಾರ ಲಭಿಸಿದೆ. 190 ರಾಷ್ಟ್ರಗಳಲ್ಲಿ ಶಾಖೆಗಳನ್ನು ಹೊಂದಿದೆ. ಮಾನವೀಯ ಮೌಲ್ಯಗಳನ್ನು ವಿಶ್ವಕ್ಕೆ ತಿಳಿಸುವುದು ರೆಡ್ ಕ್ರಾಸ್‌ನ ಮೂಲ ಉದ್ದೇಶ. ವಿಷಮ ಪರಿಸ್ಥಿತಿಯಲ್ಲಿ ಧೈರ್ಯ ಮತ್ತು


ಉದಯವಾಹಿನಿ ಚಿತ್ರ

ಕ್ಷಿಪ್ರ ನಿರ್ಧಾರ ತೆಗೆದುಕೊಳ್ಳಲು ರೆಡ್ ಕ್ರಾಸ್ ತರಬೇತಿ ಪಡೆಯುವುದರಿಂದ ಸಾಧ್ಯವಾಗುತ್ತದೆ. ವಿದ್ಯಾರ್ಥಿಗಳು ಪಠ್ಯ ಚಟುವಟಿಕೆಗಳ ಜೊತೆಗೆ ಸಮಾಜಮುಖಿ ಸೇವೆಗಳತ್ತ ತಮ್ಮನ್ನು ತೊಡಗಿಸಿಕೊಳ್ಳಬೇಕು' ಎಂದು ಕರೆ ನೀಡಿದರು. ಪ್ರೊ. ಸದ್ಯೋಜಾತಪ್ಪ ಎಸ್. ಮಾತನಾಡಿ, ವಿದ್ಯಾರ್ಥಿಗಳು ದೃಢವಿಶ್ವಾಸದಿಂದ ಕಲಿಕೆ, ಸೇವಾ ಮನೋಭಾವವನ್ನು ಬೆಳೆಸಿಕೊಳ್ಳಬೇಕು. ಕ್ರಮಬದ್ಧ ಜೀವನಶೈಲಿ ತಮ್ಮದಾಗಿಸಿಕೊಂಡು ರೆಡ್ ಕ್ರಾಸ್ ಮಾದರಿಯ ಮೌಲ್ಯಯುತ ಸೇವೆಗಳಲ್ಲಿ ತೊಡಗಿಸಿಕೊಳ್ಳಬೇಕು ಎಂದು ತಿಳಿಸಿದರು.


## ಗಿರಿಜನ ಉಪ ಯೋಜನೆ: ಶೇ 100ರಷ್ಟು ಗುರಿ ಸಾಧಿಸಲು ಡಿಸಿ ಸೂಚನೆ

• ಉದಯವಾಹಿನಿ ಹಾಸನ

ಪರಿಶಿಷ್ಟ ಜಾತಿ ಉಪ ಯೋಜನೆ ಮತ್ತು ಗಿರಿಜನ ಉಪ ಯೋಜನೆಯಡಿ ಶೇ ನೂರರಷ್ಟು ಗುರಿ ಸಾಧಿಸಲು ಜಿಲ್ಲಾಧಿಕಾರಿ ಕೆ.ಎಸ್. ಲತಾಕುಮಾರಿ, ಅಧಿಕಾರಿಗಳಿಗೆ ಸೂಚಿಸಿದರು. ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ನಡೆದ ಪರಿಶಿಷ್ಟ ಜಾತಿ ಉಪ ಯೋಜನೆ ಮತ್ತು ಗಿರಿಜನ ಉಪ ಯೋಜನೆಯಡಿ ವಿವಿಧ ಇಲಾಖೆಗಳು ಸಾಧಿಸಿರುವ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಪಿಎಂಕೆಎಸ್‌ವೈ, ಮುಖ್ಯ ಮಂತ್ರಿ ಸೂಕ್ಷ್ಮ ನೀರಾವರಿ ಯೋಜನೆಯಡಿ ಕೃಷಿ ಪರಿಕರ ಹಾಗೂ ಬಿತ್ತನೆ ಬೀಜ ವಿತರಣೆ ಮಾಡಬೇಕು. ಮಣ್ಣಿನ ಫಲವತ್ತತೆ ಪರೀಕ್ಷೆಗೂ ಒತ್ತು ನೀಡುವಂತೆ ಕೃಷಿ ಇಲಾಖೆ ಅಧಿಕಾರಿಗಳಿಗೆ ಸೂಚಿಸಿದರು.

ಪರಿಶಿಷ್ಟ ಜಾತಿ ರೈತರಿಗೆ ಹೆಚ್ಚಿನ ಪ್ರೋತ್ಸಾಹ ನೀಡಿ ತೋಟಗಾರಿಕೆ ಬೆಳೆಗಳನ್ನು ಬೆಳೆಯಲು ಉತ್ತೇಜನ ನೀಡುವಂತೆ ತೋಟಗಾರಿಕೆ ಇಲಾಖೆ ಉಪ ನಿರ್ದೇಶಕರಿಗೆ ಸೂಚಿಸಿದರು.

ಸಣ್ಣ ನೀರಾವರಿ ಇಲಾಖೆ ಹಾಗೂ ಚೆಸ್ಕಾಂ ಅಧಿಕಾರಿಗಳು, ಸಮನ್ವಯದಿಂದ ಕರ್ತವ್ಯ ನಿರ್ವಹಿಸುವ ಮೂಲಕ ಈಗಾಗಲೇ


ಉದಯವಾಹಿನಿ ಚಿತ್ರ

> ವೈದ್ಯಕೀಯ ಶಿಕ್ಷಣ ಇಲಾಖೆಯಲ್ಲಿ ಎಲ್ಲಾ ಪರಿಶಿಷ್ಟ ಜಾತಿ ಮತ್ತು ಪಂಗಡದ ರೋಗಿಗಳಿಗೆ ಉಚಿತ ಚಿಕಿತ್ಸೆ ನೀಡಲು ಕ್ರಮ ಕೈಗೊಳ್ಳಬೇಕು. ವೈದ್ಯಕೀಯ ವಿದ್ಯಾರ್ಥಿಗಳಿಗೆ ವೈದ್ಯಕೀಯ ಪರಿಕರಗಳ ವಿತರಣೆ ಮಾಡಬೇಕು -ಡಿಸಿ

ಕೊರೆದಿರುವ ಕೊಳವೆಬಾವಿಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಬೇಕು. ಬಾಲ ಕಾರ್ಮಿಕರಿಗೆ ಪುನರ್ವಸತಿ ಕಲ್ಪಿಸಲು ಕ್ರಮ ಕೈಗೊಳ್ಳುವಂತೆ ಸೂಚಿಸಿದರು.

## ಶಿಕ್ಷಕನಿಗೆ 26.31 ಲಕ್ಷ ವಂಚನೆ

• ಉದಯವಾಹಿನಿ ಕಲಬುರಗಿ

ಕೈಗಡವಾಗಿ ಕೊಟ್ಟ ಹಣ ಮರಳಿ ಕೊಡದೆ ನಿವೃತ್ತ ಶಿಕ್ಷಕರೊಬ್ಬರಿಗೆ 26,31,500 ರೂ.ವಂಚನೆ ಮಾಡಿರುವ ಪ್ರಕರಣ ಬೆಳಕಿಗೆ ಬಂದಿದೆ. ರಾಯಚೂರಿನ ಮಹ್ಮದ್ ಮುಜಾಮಿಲ್ (28) ಎಂಬುವವರೇ ಹಣ ಪಡೆದು ಮರಳಿ ನೀಡದೆ ವಂಚನೆ ಮಾಡಿದ್ದಾರೆ ಎಂದು ನಗರದ ಐವಾನ್-ಇ-ಶಾಹಿ ಏರಿಯಾ ನಿವಾಸಿಯಾದ ನಿವೃತ್ತ ಶಿಕ್ಷಕ ಅಬ್ದುಲ್ ನಯೀಮ್ ಜಾವೇದ್ (79) ಅವರು ಇಲ್ಲಿನ ಸ್ಟೇಷನ್ ಬಜಾರ್ ಪೊಲೀಸ್ ಠಾಣೆಯಲ್ಲಿ ದೂರು ಸಲ್ಲಿಸಿದ್ದಾರೆ. ನಿವೃತ್ತ ಶಿಕ್ಷಕ ಅಬ್ದುಲ್ ನಯೀಮ್ ಜಾವೇದ್ ಅವರು ತಮ್ಮ ಪರಿಚಯದ ಶಿಕ್ಷಕ ಮಹ್ಮದ್ ಫಜಲುದ್ದಿನ್ ಅವರ ಮೊಮ್ಮಗ ಮಹ್ಮದ್ ಮುಜಾಮಿಲ್‌ನನ್ನು ತಮ್ಮ ಮನೆಯಲ್ಲಿ ಇರಿಸಿಕೊಂಡಿದ್ದರು. ಈ ಸಮಯದಲ್ಲಿ ಮಹ್ಮದ್ ಮುಜಾಮಿಲ್ ಅವರು ತಮ್ಮ ತಂದೆಗೆ ಕೆಎಸ್‌ಆರ್‌ಟಿಸಿ ಇಲಾಖೆಯಿಂದ ಹಣ ಬರುವುದಿದೆ ಅದಕ್ಕೆ ಖರ್ಚಿಗಾಗಿ ಹಣ ಬೇಕು ಕೆಲವೇ ದಿನಗಳಲ್ಲಿ ಹಣವನ್ನು ಮರಳಿ ನೀಡುತ್ತೇನೆ ಎಂದು ಹೇಳಿ ಮೊದಲಿಗೆ 1,42, 500 ಪಡೆದಿದ್ದಾನೆ, ಆನಂತರ ಹಂತ ಹಂತವಾಗಿ 4.88 ಲಕ್ಷ, 8.17 ಲಕ್ಷ, 11.84 ಲಕ್ಷ ಸೇರಿ 26,31,500 ಪಡೆದು ಅದನ್ನು ಮರಳಿ ನೀಡದೆ ವಂಚನೆ ಮಾಡಿದ್ದಾನೆ ಎಂದು ಅಬ್ದುಲ್ ನಯೀಮ್ ಜಾವೇದ್ ಅವರು ದೂರಿನಲ್ಲಿ ತಿಳಿಸಿದ್ದಾರೆ. ಸ್ಟೇಷನ್ ಬಜಾರ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ತನಿಖೆ ನಡೆದಿದೆ.

## ಕನ್ನಡ ರಾಜ್ಯೋತ್ಸವದ ಅಂಗವಾಗಿ ರಕ್ತದಾನ ಶಿಬಿರ

### ವಿಶ್ವಾಸ್.ಡಿ.ಗೌಡ ಅವರ 'ನೆಮ್ಮದಿಯ ವಿಳಾಸವೆಲ್ಲಿದೆ? ಕೃತಿ ಲೋಕಾರ್ಪಣೆ

• ಉದಯವಾಹಿನಿ ಹಾಸನ

ಕನ್ನಡ ರಾಜ್ಯೋತ್ಸವದ ಅಂಗವಾಗಿ ರೋಟರಿ ಕ್ಲಬ್ ಆಫ್ ಹಾಸನ್ ಟೈಗರ್ಸ್ ವತಿಯಿಂದ ಅಕ್ಟೋಬರ್ 31, ಶುಕ್ರವಾರ ಬೆಳಗ್ಗೆ 11.30ಕ್ಕೆ, ರೋಟರಿ ಕ್ಲಬ್ ಆಫ್ ಹಾಸನ ಟೈಗರ್ಸ್ ಆಫೀಸ್, ಅಕ್ಷರ ಬುಕ್ ಹೌಸ್ ಎದುರು, ಶಂಕರ ಮಠ ರಸ್ತೆ, ಹಾಸನ ದಲ್ಲಿ ರಕ್ತದಾನ ಶಿಬಿರವನ್ನು ಆಯೋಜಿಸಲಾಗಿದೆ. ಅಂದೇ ಸಂಜೆ 6.30ಕ್ಕೆ ಹೋಟೆಲ್ ಸ್ಕೈ ಬರ್ಡ್, ಹಾಸನದಲ್ಲಿ, ಸಕಲೇಶಪುರದ ಖ್ಯಾತ ಬರಹಗಾರ ವಿಶ್ವಾಸ್.ಡಿ.ಗೌಡ ಅವರ ಎಂಟನೇ ಕೃತಿ 'ನೆಮ್ಮದಿಯ ವಿಳಾಸವೆಲ್ಲಿ' ಪುಸ್ತಕದ ಲೋಕಾರ್ಪಣೆ ಸಮಾರಂಭ ನಡೆಯಲಿದೆ.

'ಕತ್ತರಿಘಟ್ಟ ಮತ್ತು ಹರಿಸೇವಾ', 'ನೆನಪುಗಳ ಖಾತೆ', 'ಬಾಳೊಂದು ಚೈತ್ರಾಮಯ', 'ಚಿಂತನ ಚೈತ್ರ', 'ಭಾವನೆಗಳ ಪ್ರತಿರೂಪ', 'ವಿಶ್ವಾಸದ ವಿಮರ್ಶೆ' ಮೊದಲಾದ ಕೃತಿಗಳ ಮೂಲಕ ಸಾಹಿತ್ಯ ಲೋಕದಲ್ಲಿ ಗುರುತಿಸಿಕೊಂಡಿರುವ



ಉದಯವಾಹಿನಿ ಚಿತ್ರ

ವಿಶ್ವಾಸ್.ಡಿ.ಗೌಡ ಅವರು ಪತ್ರಿಕಾ ಅಂಕಣಗಳಲ್ಲಿಯೂ ವಿಶಿಷ್ಟ ಸ್ಥಾನ ಪಡೆದಿದ್ದಾರೆ. ಅವರ ಅನೇಕ ಕೃತಿಗಳು ಪ್ರಸ್ತುತ ಮುದ್ರಣ ಹಂತದಲ್ಲಿವೆ. ಈ ಸಂದರ್ಭದಲ್ಲಿ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಕನ್ನಡ ವಿಷಯದಲ್ಲಿ ಅತ್ಯಧಿಕ ಅಂಕಗಳನ್ನು ಗಳಿಸಿದ ವಿದ್ಯಾರ್ಥಿಗಳನ್ನು ಗುರುತಿಸಿ ಸನ್ಮಾನಿಸಲು ತೀರ್ಮಾನಿಸಲಾಗಿದೆ. ಕಾರ್ಯಕ್ರಮವನ್ನು ರೋಟರಿ ಕ್ಲಬ್ ಆಫ್ ಹಾಸನ್ ಟೈಗರ್ಸ್ ಅಧ್ಯಕ್ಷ ರೋಟೇರಿಯನ್ ನಿಶ್ಚಯ ಧನಪಾಲ್ ಅವರ ಅಧ್ಯಕ್ಷತೆಯಲ್ಲಿ ನಡೆಸಲಾಗಲಿದ್ದು, ಅಸಿಸ್ಟೆಂಟ್ ಗವರ್ನರ್ ರೋಟೇರಿಯನ್ ಮಂಜುನಾಥ್ ಹಾಗೂ ಝೋನಲ್ ಲೆಫ್ಟಿನೆಂಟ್ ಶಿವಕುಮಾರ್ ರವರು ಉಪಸ್ಥಿತರಿರುವರು. ಕೃತಿಯ ಲೋಕಾರ್ಪಣೆಯನ್ನು ಜಿಲ್ಲೆಯ ಅಧಿಕೃತ ಬೇಟಿಗಾಗಿ ಆಗಮಿಸುತ್ತಿರುವ ಡಿಸ್ಟ್ರಿಕ್ಟ್ ಗವರ್ನರ್ ರೋಟೇರಿಯನ್ ಪಾಲಾಕ್ಷರವರು ನೆರವೇರಿಸುವರು ಎಂದು ಕ್ಲಬ್ ಕಾರ್ಯದರ್ಶಿ ರೋಟೇರಿಯನ್ ಜಯಪ್ರಕಾಶ್ ತಿಳಿಸಿದ್ದಾರೆ. ಕಾರ್ಯಕ್ರಮದಲ್ಲಿ ರೋಟರಿ ಕ್ಲಬ್ ಆಫ್ ಹಾಸನ್ ಟೈಗರ್ಸ್‌ನ ಎಲ್ಲಾ ರೋಟೇರಿಯನ್ಸ್ ಭಾಗವಹಿಸಲಿದ್ದು, ಈ ರಕ್ತದಾನ ಶಿಬಿರದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಸಾರ್ವಜನಿಕರು ಭಾಗವಹಿಸಲು ವಿನಂತಿಸಲಾಗಿದೆ.

## ವಸತಿನಿಲಯದ ವಿದ್ಯಾರ್ಥಿಗಳ ಸಮಸ್ಯೆ ಆಲಿಸಿದ ತಾಪಂ.ಇಓ ಸಂತೋಷ ಚವ್ಹಾಣ


ಉದಯವಾಹಿನಿ ಚಿತ್ರ

• ಉದಯವಾಹಿನಿ,ಚಿಂಚೋಳಿ

ಪಟ್ಟಣದ ಚಂದಾಪೂರದ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಮೆಟ್ರಿಕ್ ನಂತರ ಬಾಲಕಿಯರ ವಸತಿ ನಿಲಯಕ್ಕೆ ತಾಲ್ಲೂಕಾ ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿ ಸಂತೋಷ ಚವ್ಹಾಣ ದಿಢೀರನೇ ಭೇಟಿ ನೀಡಿ ವಿಧ್ಯಾರ್ಥಿನಿಯರ ಊಟದ ವ್ಯವಸ್ಥೆ,ನೀರಿನ ವ್ಯವಸ್ಥೆ,ಶೌಚಾಲಯದ ವ್ಯವಸ್ಥೆ ಸೇರಿದಂತೆ ಸರ್ಕಾರದಿಂದ ನೀಡುವ ಸೌಲಭ್ಯಗಳನ್ನು ಪರಿಶೀಲಿಸಿದರು.

ತದನಂತರ ವಿದ್ಯಾರ್ಥಿಗಳ ಹಾಜರಾತಿ, ಸಿಬ್ಬಂದಿಯವರ ಹಾಜರಾತಿ ಹಾಗೂ ಇತರ ವ್ಯವಸ್ಥೆಯ ಬಗ್ಗೆ ಪರಿಶೀಲನೆ ನಡೆಸಿ ಸರ್ಕಾರದಿಂದ ಸಿಗುವ ಎಲ್ಲಾ ಸೌಲಭ್ಯಗಳನ್ನು ವಿದ್ಯಾರ್ಥಿನಿಯರಿಗೆ ಚಾಚುತಪ್ಪದೆ ತಲುಪಿಸಬೇಕು ಹಾಗೂ ಯಾವುದೇ ಮೂಲಭೂತ ಸೌಕರ್ಯಗಳಿಂದ ಓದುವ ವಿದ್ಯಾರ್ಥಿನಿಯರಿಗೆ ಸಮಸ್ಯೆ ಮಾಡಬಾರದು ಎಂದು ವಸತಿನಿಲಯದ ಮೇಲ್ವಿಚಾರಕರಿಗೆ ಸೂಚಿಸಿದರು. ವಿದ್ಯಾರ್ಥಿನಿಯರು ಯಾವುದೇ ತೊಂದರೆ ಸಮಸ್ಯೆ ಇದ್ದರೆ ನನ್ನನ್ನು ಕರೆ ಮಾಡಿ ತಿಳಿಸಿ ಸಮಸ್ಯೆಗೆ ಪರಿಹರಿಸುತ್ತೇನೆ ಎಂದು ತಾಪಂ.ಇಓ ಸಂತೋಷ ಚವ್ಹಾಣ ಹೇಳಿದರು. ವಸತಿ ನಿಲಯದ ಮೇಲ್ವಿಚಾರಕಿ ಆಫ್ರೀನ್ ಬೇಗಂ, ತಾ.ಐಇಸಿ ಸಂಯೋಜಕ ಭೀಮಾಶಂಕರ, ಇದ್ದರು.

## ಅರ್ಹ ಫಲಾನುಭವಿಗಳಿಗೆ ಅಕ್ಕಿ ಜೊತೆ ಜೋಳ ತಲುಪಿಸಿ: ಇಓ

• ಉದಯವಾಹಿನಿ ಬೀದರ್

ತಾಲ್ಲೂಕು ಪಂಚಾಯತಿ ಕಚೇರಿಯಲ್ಲಿ ತಾಪಂ ಕಾರ್ಯನಿರ್ವಾಹಕ ಅಧಿಕಾರಿಯವರ ಅಧ್ಯಕ್ಷತೆಯಲ್ಲಿ ತಾಲ್ಲೂಕ ಮಟ್ಟದ ಪಂಚ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಕುರಿತು ಪ್ರಗತಿ ಪರಿಶೀಲನಾ ಸಭೆ ನಡೆಯಿತು. ಅಧ್ಯಕ್ಷ ವಹಿಸಿ ಮಾತನಾಡಿದ ಇಓ ಮಾಣಿಕರಾವ್ ಪಾಟೀಲ್ ಪಂಚ ಗ್ಯಾರಂಟಿಗಳನ್ನು ಸರಿಯಾಗಿ ಅನುಷ್ಠಾನ ಮಾಡಬೇಕು. ಅಕ್ಕಿ ಜೊತೆ ಜೋಳ ಕೊಡಲು ಸರ್ಕಾರ ನಿರ್ಧರಿಸಿದ್ದು. ಅದನ್ನು ಅರ್ಹ ಫಲಾನುಭವಿಗಳಿಗೆ ವಿತರಿಸಬೇಕು ಎಂದರು.

## ಎಲ್ಲಾ ರೋಗಕ್ಕೂ ಮದ್ದು ಇದೆ, ಅಸೂಯೆಗೆ ಮದ್ದಿಲ್ಲ

• ಉದಯವಾಹಿನಿ ಮಂಗಳೂರು

ಎಲ್ಲಾ ರೋಗಕ್ಕೂ ಮದ್ದು ಇದೆ, ಅಸೂಯೆಗೆ ಮದ್ದಿಲ್ಲ. ಕರ್ನಾಟಕದ ಶಾಸಕಾಂಗದ ಬಗ್ಗೆ ರಾಷ್ಟ್ರೀಯ ಮಟ್ಟದಲ್ಲಿ ಮಾತ್ರವಲ್ಲದೆ ಜಾಗತಿಕ ಮಟ್ಟದಲ್ಲೂ ಗೌರವವಿದೆ. ಹಾಗಾಗಿ ಮಾಜಿ ಸ್ಪೀಕರ್ ಅವರು ಮಾಡಿರುವ ಭ್ರಷ್ಟಾಚಾರದ ಆರೋಪಗಳು ನಮ್ಮ ಶಾಸಕಾಂಗದ ಮೇಲೆ ದೃಷ್ಟಿ ಬೊಂಬೆಯಂತೆ ಇದೆ ಎಂದು ವಿಧಾನಸಭಾಧ್ಯಕ್ಷ ಯು.ಟಿ. ಖಾದರ್ ತಿಳಿಸಿದ್ದಾರೆ. ತನ್ನ ಮೇಲೆ ಮಾಜಿ ಸ್ಪೀಕರ್ ವಿಶ್ವೇಶ್ವರ ಹೆಗಡೆ ಕಾಗೇರಿ ಮಾಡಿರುವ ಭ್ರಷ್ಟಾಚಾರದ ಆರೋಪಕ್ಕೆ ಖಾದರ್ ಈ ಮೂಲಕ ತಿರುಗೇಟು ನೀಡಿದ್ದಾರೆ. ನನ್ನ ವಿರುದ್ಧ ಬಂದಿರುವ ಆರೋಪಗಳು ಇದೇನೂ ಮೊದಲಲ್ಲ. ಶಾಸಕನಾಗಿದ್ದ ವೇಳೆ ಕೂಡ ಈ ರೀತಿಯ ಆರೋಪಗಳು ಬರುತ್ತಲೇ ಇದ್ದವು.



ಆದರೆ ಕ್ಷೇತ್ರದ ಜನರು ನನ್ನನ್ನು ಇನ್ನೂ ಮುಂದಕ್ಕೆ ತೆಗೆದುಕೊಂಡು ಹೋಗುವ ವಿಶ್ವಾಸವಿದೆ.

ಅಭಿವೃದ್ಧಿ ಎಂಬುದು ನಿರಂತರವಾಗಿದ್ದು, ಹಂತ ಹಂತವಾಗಿ ನಡೆಯಲಿದೆ. ಯಾರಿಗಾದರೂ ಅದರ ಬಗ್ಗೆ ಸಂಶಯಗಳಿದ್ದರೆ ನೇರವಾಗಿ ನನ್ನ ಕಚೇರಿಗೆ ಬಂದು ಸಂಶಯ ನಿವಾರಿಸಿಕೊಳ್ಳಬಹುದು.

ಅವರ ಜೊತೆ ಸಕಾರಾತ್ಮಕ ಚರ್ಚೆ ನಡೆಸುತ್ತೇನೆ ಎಂದು ತಿಳಿಸಿದ ಖಾದರ್, ಸ್ಪೀಕರ್ ಕಚೇರಿ ವಿಚಾರ ಮಾಹಿತಿ ಹಕ್ಕು ವ್ಯಾಪ್ತಿಗೆ ಒಳಪಡಬೇಕೆಂಬ ಆಗ್ರಹದ ಬಗ್ಗೆ ಕೂಡ ಪ್ರತಿಕ್ರಿಯೆ ನೀಡಿದರು. ಎಲ್ಲೋ ಕುಳಿತುಕೊಂಡು ಹೇಳಿಕೆ ನೀಡಿದರೆ ಆಗಲ್ಲ. ನನ್ನ ಕಚೇರಿಗೆ ಬಂದು ಇದರ ಬಗ್ಗೆ ಸಮಗ್ರವಾಗಿ ಚರ್ಚೆಗೆ ಬನ್ನಿ ಎಂದು ಆಗ್ರಹಿಸಿದರು.

## ಡ್ರಗ್ಸ್ ಮಾಫಿಯಾ ಕಡಿವಾಣಕ್ಕೆ ಆಗ್ರಹ

• ಉದಯವಾಹಿನಿ ಉಡುಪಿ

ಉಡುಪಿ ಜಿಲ್ಲೆಯಲ್ಲಿ ಮಾದಕ ವಸ್ತು ಮಾರಾಟ ಹಾಗೂ ಬಳಕೆಗೆ ಕಡಿವಾಣ ಹಾಕುವಂತೆ ಕರ್ನಾಟಕ ರಕ್ಷಣಾ ವೇದಿಕೆ ವತಿಯಿಂದ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗೆ ಮನವಿ ಸಲ್ಲಿಸಿ ಆಗ್ರಹಿಸಲಾಯಿತು.

ಜಿಲ್ಲೆಯಲ್ಲಿ ಮಾದಕ ವಸ್ತುಗಳ ಮಾರಾಟ ಹಾಗೂ ಬಳಕೆ ಹೆಚ್ಚುತ್ತಿದ್ದು, ಅದಕ್ಕೆ ಬಲಿಯಾದ ಎಷ್ಟೋ ಕುಟುಂಬಗಳು ಬೀದಿಗೆ ಬಂದಿದೆ. ಇದಕ್ಕೆ ಬಲಿಯಾಗಿರುವ ಮಕ್ಕಳ ತಂದೆತಾಯಿಯರ ರೋದನ ಕೇಳತೀರದು. ಆದ್ದರಿಂದ ಮಾದಕ ದ್ರವ್ಯ ಜಾಲ ಸುಶಿಕ್ಷಿತರ ಜಿಲ್ಲೆಯನ್ನು ಬಲಿ ತೆಗೆದುಕೊಳ್ಳುವ ಮೊದಲು ಬುಡ ಸಮೇತ ಕಿತ್ತುಹಾಕಿ ಸ್ವಸ್ಥ ಹಾಗೂ ಅಪರಾಧರಹಿತ ಸಮಾಜವನ್ನು ನಿರ್ಮಿಸಬೇಕು ಎಂದು ಆಗ್ರಹಿಸಲಾಯಿತು. ವೇದಿಕೆಯ ಕಾರ್ಕಳ ತಾಲ್ಲೂಕು ಅಧ್ಯಕ್ಷ ಹನೀಫ್ ಈ ಸಂದರ್ಭ ಮನವಿ ಮಾಡಿದರು.

ಇತ್ತೀಚೆಗೆ ಹನಿಟ್ರ್ಯಾಪ್ ಜಾಲಕ್ಕೆ ಸಿಲುಕಿದ ಕಾರ್ಕಳದ ನಿಟ್ಟೆಯ ಅಭಿಷೇಕ್ ಆಚಾರ್ಯ ಮರ್ಯಾದೆಗಂಜಿ ಆತ್ಮಹತ್ಯೆಗೈದ ಘಟನೆಯನ್ನೂ ಪೊಲೀಸ್ ವರಿಷ್ಠಾಧಿಕಾರಿ ಗಮನ ಸೆಳೆಯಲಾಯಿತು ಮತ್ತು ನಿಷ್ಪಕ್ಷಪಾತ ತನಿಖೆ ನಡೆಸಿ ಈ ಜಾಲದ ಸತ್ಯಾಸತ್ಯತೆ ಜನತೆಯ ಮುಂದಿಡಬೇಕು ಎಂದು ಜಿಲ್ಲಾ ಹೆಚ್ಚುವರಿ ಪೊಲೀಸ್ ಅಧೀಕ್ಷಕ ಸುಧಾಕರ್ ನಾಯ್ಕ್ ಅವರಿಗೆ ಮನವಿ ನೀಡಲಾಯಿತು. ಸಂಘಟನೆ ಗೌರವಾಧ್ಯಕ್ಷ ಅನ್ಸಾರ್ ಅಹಮದ್, ಜಿಲ್ಲಾಧ್ಯಕ್ಷ ಸುಜಯ್ ಪೂಜಾರಿ, ಮಹಿಳಾ ಜಿಲ್ಲಾಧ್ಯಕ್ಷ ಜ್ಯೋತಿ ಸೇರಿಗಾರ್, ಉಪಾಧ್ಯಕ್ಷ ಸೈಯದ್ ನಿಜಾಮುದ್ದೀನ್, ಮಹಿಳಾ ಉಪಾಧ್ಯಕ್ಷೆ ದೇವಕಿ ಬಾರ್ಕೂರು, ಅನುಷಾ ಆಚಾರ್ ಪಳ್ಳಿ ಉಪಸ್ಥಿತರಿದ್ದರು.

# ವಿದ್ಯಾದಾಸ ಬಾಬಾ ಅವರನ್ನು ಅರ್ಚಕ ಸ್ಥಾನದಿಂದ ಕೆಳಗಿಳಿಸಲು ಷಡ್ಯಂತರ

### ಸರ್ಕಾರಕ್ಕೆ ಆದಾಯ: ಅಂಜನಾದ್ರಿಗಿಲ್ಲ ಸೌಕರ್ಯ, ವಿದ್ಯಾದಾಸ ಬಾಬಾರ ಪೂಜೆಗೆ ಅಡೆತಡೆ ಯಾಕೆ ?

• ಉದಯವಾಹಿನಿ ಗಂಗಾವತಿ

ಇತಿಹಾಸ ಪೌರಾಣಿಕ ಸ್ಥಳವಾದ ಆನೆಗುಂದಿ ಭಾಗದ ಹನುಮನ ಜನ್ಮ ಸ್ಥಾನವಾದ ಅಂಜನಾದ್ರಿಯಲ್ಲಿ ಭಕ್ತರ ಸಂಖ್ಯೆ ಏರಿಕೆಯಾಗುತ್ತಿದೆ, ಲಕ್ಷಾಂತರ ಭಕ್ತರು ಭೇಟಿ ನೀಡಿ ಹನುಮನ ದರ್ಶನ ಪಡೆಯುತ್ತಿದ್ದಾರೆ. ಅಂಜನಾದ್ರಿಯ ಹನುಮನ ಪೂಜೆಗೆ ದೇಶವಿದೇಶಗಳಿಂದ ಭಕ್ತರು ಬರುತ್ತಿದ್ದಾರೆ ಆದರೆ ಬರುವ ಭಕ್ತರಿಗೆ ಕನಿಷ್ಠ ಮೂಲಭೂತ ಸೌಕರ್ಯಗಳು ಇಲ್ಲದೆ ಪರದಾಡುವಂತಾಗಿದೆ,

ಅಂಜನಾದ್ರಿಯ ದೇಗುಲದಲ್ಲಿ ಅರ್ಚಕರಾದ ವಿದ್ಯಾದಾಸ್ ಬಾಬಾ ಇವರು ಎರಡು ದಶಕಗಳಿಂದಲೂ ಹನುಮನ ಪೂಜಾ



ಕಾರ್ಯಕ್ರಮಗಳನ್ನು ನೆರವೇರಿಸುತ್ತಿದ್ದಾರೆ. ವಿದ್ಯಾದಾಸ ಬಾಬಾ ಇವರು ಅವರ ಅಪಾರ ಶಿಷ್ಯ ಬಳಗದೊಂದಿಗೆ ದೇಗುಲದ ಮೇಲೆ ಬರುವ ಭಕ್ತರಿಗೆ ಊಟ ವ್ಯವಸ್ಥೆಯನ್ನು ಮಾಡಿ ಭಕ್ತರ ಪ್ರೀತಿಗೆ ಪಾತ್ರರಾಗಿದ್ದಾರೆ. ಬರುವ ಭಕ್ತರನ್ನು ಧಾರ್ಮಿಕ ಶ್ರದ್ಧಾ ಭಕ್ತಿ ಭಾವನೆಗಳೊಂದಿಗೆ ದೇಗುಲದ ಮೇಲೆ ಭಕ್ತರಲ್ಲಿ ಧನಾತ್ಮಕ ಭಾವನೆ ಮೂಡುವಂತೆ ಅಚ್ಚುಕಟ್ಟಾಗಿ ಹನುಮ ದೇವರ ಪೂಜಾ ಕಾರ್ಯಕ್ರಮಗಳನ್ನು ನೆರವೇರಿಸುತ್ತಾ ಬಂದು ದೇಗುಲದ ಪಾವಿತ್ರತೆಯನ್ನು ಕಾಪಾಡುತ್ತಿದ್ದಾರೆ. ಆದರೆ ಇತ್ತೀಚಿಗೆ ನಡೆದಂತ ಬೆಳವಣಿಗೆಗಳಿಂದ ವಿದ್ಯಾದಾಸ ಬಾಬಾ ಅವರನ್ನು ಅರ್ಚಕ ಸ್ಥಾನದಿಂದ ಕೆಳಗಿಳಿಸಲು ಕೆಲವು ಷಡ್ಯಂತರಗಳು


ಉದಯವಾಹಿನಿ ಚಿತ್ರ

**ಆದಾಯವನ್ನು ಸರ್ಕಾರ ಏನು ಮಾಡುತ್ತಿದೆ?**

ವಿಪರ್ಯಾಸ ಅಂದ್ರೆ, ಅಂಜನಾದ್ರಿ ದೇಗುಲ ಧಾರ್ಮಿಕ ದತ್ತಿ ಇಲಾಖೆಗೆ ಸೇರ್ಪಡೆಗೊಂಡು ದಶಕಗಳು ಕಳೆದರು ಸರ್ಕಾರ ಅಂಜನಾದ್ರಿಗೆ ಮೂಲಭೂತ ಸೌಕರ್ಯಗಳ ನೀಡುವಲ್ಲಿ ಸರ್ಕಾರ ಸಂಪೂರ್ಣ ವಿಫಲವಾಗಿದೆ. ಕೋಟ್ಯಂತರ ರೂಪಾಯಿ ಹುಂಡಿ ಆದಾಯವನ್ನು ಸರ್ಕಾರ ಏನು ಮಾಡುತ್ತಿದೆ ? ಎನ್ನುವಂತಹ ಪ್ರಶ್ನೆ ಉದ್ಭವಿಸುವಂತಾಗಿದೆ, ಅಂಜನಾದ್ರಿಯ ದೇಗುಲದ ಬಳಿ ಬರುವ ಭಕ್ತರಿಗೆ ಪಾರ್ಕಿಂಗ್ ವ್ಯವಸ್ಥೆ ಕುಡಿಯುವ ನೀರಿನ ಸೌಕರ್ಯ ಸ್ನಾನ ಗೃಹಗಳ ವ್ಯವಸ್ಥೆಯನ್ನು ಮಾಡಿರುವುದಿಲ್ಲ. ಭಕ್ತರಿಗಾಗಿ ವಸತಿ ಊಟ ಸೌಕರ್ಯವನ್ನು ಕಲ್ಪಿಸಬೇಕಾಗಿದೆ, ದಿನದ 24× 7 ವೈದ್ಯಕೀಯ ತಪಾಸಣಾ ಸೌಲಭ್ಯ ಭಕ್ತರಿಗೆ ನೀಡಬೇಕಾಗಿದೆ, ದೇಗುಲದ ಸುತ್ತಲೂ ಸರ್ಕಾರ ಸೆಕ್ಯೂರಿಟಿ ಗಾರ್ಡ್‌ಗಳನ್ನು ಪೋಲೀಸ್ ಸಿಬ್ಬಂದಿ ನೇಮಿಸಬೇಕಾಗಿದೆ.

ನಡೆದು ಹೋಗಿವೆ, ಆದರೆ ವಿದ್ಯಾದಾಸ ಬಾಬಾ ಅವರು ಕುಗ್ಗದೆ ನ್ಯಾಯಾಲಯದಲ್ಲಿ ಧಾವೆಯನ್ನು (ಧಾರವಾಡ ಹೈ ಕೋರ್ಟ್ ರಿಟ್ 14917/2025) ಹೂಡಿ ಅಂಜನಾದ್ರಿ ದೇಗುಲದಲ್ಲಿ ಅರ್ಚಕರಾಗಿ ಮುಂದುವರೆಯುವಂತೆ ನ್ಯಾಯಾಲಯ ತೀರ್ಪು ನೀಡಿರುವುದು ಭಕ್ತರು ಸ್ವಾಗತ ಮಾಡಿದ್ದಾರೆ.

**ಭಕ್ತರ ಸಂಖ್ಯೆ ಏರಿಕೆ**

ಧಾರವಾಡ ಕರ್ನಾಟಕ ಉಚ್ಚನ್ಯಾಯಾಲಯದ ರಿಟ್ ಅರ್ಜಿ ಸಂಖ್ಯೆ 14917/2025. ಸಿಸಿಪಿ ಸಂಖ್ಯೆ.100112/2025 ರಲ್ಲಿ 09-04-2025 ರಂದು ಹೊರಡಿಸಿದ ಅಂತಿಮ ತೀರ್ಪು ಮತ್ತು ಆದೇಶ ನೀಡಿರುತ್ತದೆ. ರಿಟ್ ಅರ್ಜಿಯಲ್ಲಿ ಹೈಕೋರ್ಟ್ 14.02.2023 ರಂದು ಹೊರಡಿಸಲಾದ ಮಧ್ಯಂತರ ಆದೇಶವನ್ನು ನಿಷ್ಠೆಯಿಂದ ಪಾಲಿಸಲು ಅಧಿಕಾರಿಗಳಿಗೆ ನಿರ್ದೇಶಿಸಲಾಗಿದೆ ಮತ್ತು ಅರ್ಜಿದಾರರು ದೇವಾಲಯದ ಅರ್ಚಕರಾಗಿ ಕರ್ತವ್ಯಗಳನ್ನು ನಿರ್ವಹಿಸುವುದನ್ನು ಮುಂದುವರಿಸಲು ಹಾಗೂ ಅವರಿಗೆ ಈ ಹಿಂದೆ ಒದಗಿಸಲಾದ ಎಲ್ಲಾ ಮೂಲಭೂತ ಸೌಕರ್ಯಗಳೊಂದಿಗೆ ಒಂದೇ ಕೋಣೆಯಲ್ಲಿ ಉಳಿಯಲು ಅವಕಾಶ ನೀಡಬೇಕು ಎಂದು ಆದೇಶದಲ್ಲಿ ತಿಳಿಸಲಾಗಿದೆ.

ಆದರೆ ಈ ಭಾಗದ ರಾಜಕೀಯ ಕುತಂತ್ರಗಳಿಂದ ವಿದ್ಯಾದಾಸ ಬಾಬಾ ಇವರು ಅರ್ಚಕರಾಗಿ ಮುಂದುವರಿಯದಂತೆ ಕೆಲವು ಹುನ್ನಾರಗಳು ನಡೆಯುತ್ತಲೇ ಇವೆ. ಇದರಿಂದಾಗಿ ವಿದ್ಯಾದಾಸ ಬಾಬಾ ಅವರ ಅರ್ಚಕ ಸೇವೆ ಕಾಯಕಕ್ಕೆ ನಿರಂತರ ಅಡೆತಡೆಗಳು ಎದುರಿಸುವಂತಾಗಿದೆ, ಸರ್ಕಾರ ವಿದ್ಯಾದಾಸ ಬಾಬಾ ಅವರ ಅರ್ಚಕ ಸೇವೆಗೆ ಅಡೆತಡೆಗಳು ಉಂಟಾಗದಂತೆ ಕ್ರಮ ಕೈಗೊಳ್ಳಲು ಹಿಂದೇಟು ಹಾಕುತ್ತಿರುವುದೇ ಇಲ್ಲಾ ವಿದ್ಯಾದಾಸ ಬಾಬಾ ಅವರನ್ನು ಅರ್ಚಕ ಸ್ಥಾನದಿಂದ ಕೆಳಗಿಳಿಸಲು ಪ್ರಯತ್ನ ನಡೆಸಿದೆಯಾ ಎನ್ನುವಂತಾಗಿದೆ. ಈ ಎಲ್ಲಾ ಬೆಳವಣಿಗೆಗಳು ಅಂಜನಾದ್ರಿ ಭಕ್ತರಲ್ಲಿ ಅಸಮಾಧಾನವು ಉಂಟು ಮಾಡುವಂತಾಗಿದೆ,

ಈ ಕೂಡಲೇ ಜಿಲ್ಲಾಡಳಿತ ಮತ್ತು ಸರ್ಕಾರ ನ್ಯಾಯಾಲಯದ ಆದೇಶವನ್ನು ಪಾಲಿಸಿ ಅರ್ಚಕರಾದ ವಿದ್ಯಾದಾಸ ಬಾಬಾ ಅವರಿಗೆ ರಕ್ಷಣೆ ನೀಡಬೇಕಾಗಿದೆ ಹಾಗೂ ಅಂಜನಾದ್ರಿಗೆ ಬರುವ ಭಕ್ತರಿಗಾಗಿ ಮೂಲಭೂತ ಸೌಕರ್ಯಗಳನ್ನು ನೀಡಲು ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕಾಗಿದೆ ಎನ್ನುವುದು ಅಪಾರ ಭಕ್ತರ ಒತ್ತಾಯವಾಗಿದೆ.

ಉದಯ UV ವಾಹಿನಿ

ಪ್ರಾದೇಶಿಕ

ಶುಕ್ರವಾರ
31 ಅಕ್ಟೋಬರ್ 2025 | 07

ಮಿನಿ ನ್ಯೂಸ್

# ವಿದೇಶಗಳಿಂದ ಭಾರತಕ್ಕೆ ಮರಳಿ ಬಂತು 64 ಟನ್ ಚಿನ್ನ



**ಮುಂಬೈ:** ಜಾಗತಿಕ ಹಣಕಾಸು ವಾಸ್ತವಿಕತೆಗಳತ್ತ ಪಲ್ಲಟಗೊಳ್ಳುತ್ತಿರುವುದರ ಕುರುಹಾಗಿ ಕಾರ್ಯತಂತ್ರಾತ್ಮಕ ಕ್ರಮವೊಂದರಲ್ಲಿ ಭಾರತೀಯ ರಿಸರ್ವ್ ಬ್ಯಾಂಕ್ 2025ರ ಮಾರ್ಚ್‌ನಿಂದ ಸೆಪ್ಟೆಂಬರ್ ನಡುವೆ ಸುಮಾರು 64 ಟನ್ ಚಿನ್ನವನ್ನು ತನ್ನ ದೇಶೀಯ ಮಾರುಕಟ್ಟೆಗೆ ಹರಿಸಿದೆ. ತನ್ಮೂಲಕ ಭಾರತದೊಳಗಡೆ ಇರುವ ಚಿನ್ನದ ಪ್ರಮಾಣವನ್ನು 545.8 ಟನ್‌ಗಳಿಗೆ ಹೆಚ್ಚಿಸಿದೆ. ವಿದೇಶಗಳಲ್ಲಿ ದಾಸ್ತಾನಿಗಿರುವ ಸಾರ್ವಭೌಮ ಆಸ್ತಿಗಳ ಭದ್ರತೆ ಕುರಿತು ಆತಂಕಗಳು ಹೆಚ್ಚುತ್ತಿರುವ ನಡುವೆ ಮತ್ತು ಭೂ ರಾಜಕೀಯ ಒತ್ತಡಗಳ ನಿವಾರಣೆಗೆ ದೇಶಗಳು ಶಸ್ತಾಸ ಹಣಕಾಸು ವ್ಯವಸ್ಥೆಯನ್ನು ಹೆಚ್ಚಿಸುತ್ತಿರುವ ನಡುವೆ ಆರ್‌ಬಿಐ ಈ ಕ್ರಮ ಕೈಗೊಂಡಿದೆ. 2025ರ ಸೆಪ್ಟೆಂಬರ್‌ನ ಕೊನೆಯಲ್ಲಿರುವಂತೆ ಭಾರತದ ಚಿನ್ನದ ದಾಸ್ತಾನು 880.8 ಟನ್‌ಗಳು. ಇವುಗಳ ಪೈಕಿ 240.3 ಟನ್‌ಗಳು ಬ್ಯಾಂಕ್ ಇಂಗ್ಲೆಂಡ್, ಬ್ಯಾಂಕ್ ಇಂಟರ್‌ನ್ಯಾಷನಲ್ ಸೆಟಲ್‌ಮೆಂಟ್ ಸುಪರ್ದಿಯಲ್ಲಿದ್ದರೆ, ಇತರ 14 ಟನ್‌ಗಳು ಜಾಗತಿಕ ಠೇವಣಿ ಯೋಜನೆಗಳಲ್ಲಿವೆ. ಹೀಗೆ ದೇಶೀಯವಾಗಿ ಚಿನ್ನದ ದಾಸ್ತಾನು ಕಳೆದ 18 ತಿಂಗಳುಗಳಲ್ಲಿ ಗಣನೀಯವಾಗಿ ಹೆಚ್ಚಿದೆ ಎಂದು ಆರ್‌ಬಿಐ ಬಿಡುಗಡೆ ಮಾಡಿದ ಅಧಿಕೃತ ದತ್ತಾಂಶ ತಿಳಿಸಿದೆ.

ಈ ಪ್ರಯತ್ನವು 2023ರಲ್ಲಿ ಪ್ರಾರಂಭವಾಗಿದ್ದು 2023ರ ಮಾರ್ಚ್‌ನಿಂದೀಚೆಗೆ ಆರ್‌ಬಿಐ 274 ಟನ್ ಚಿನ್ನವನ್ನು ಮರಳಿ ಭಾರತಕ್ಕೆ ತಂದಿದೆ. ಸಾಗರದಾಚೆಯ ಮೀಸಲುಗಳ ಸುರಕ್ಷತೆಯನ್ನು ಮರು ಅಂದಾಜಿಸುವ ಉದಯೋನ್ಮುಖ ಆರ್ಥಿಕತೆಗಳ ವ್ಯಾಪಕ ಪ್ರವೃತ್ತಿಯ ಭಾಗ ಇದಾಗಿದೆ. ಜಾಗತಿಕವಾಗಿ ಚಿನ್ನದ ಬೆಲೆ ಅಭೂತಪೂರ್ವವಾಗಿ ಏರಿಕೆ ಕಂಡಿರುವ ಕಾರಣ ಭಾರತದಲ್ಲಿ ದಾಸ್ತಾನಿರುವ ಚಿನ್ನದ ಬೆಲೆಯೂ ಹೆಚ್ಚಳವಾಗಿದೆ. 2025ರಲ್ಲಿ ಚಿನ್ನದ ಬೆಲೆಗಳು ಶೇ.50ಕ್ಕಿಂತ ಹೆಚ್ಚಾಗಿದ್ದು, ಔನ್ಸ್‌ಗೆ 4.381 ಡಾಲರ್‌ಗಳ ಸಾರ್ವಕಾಲೀಕ ಹೆಚ್ಚಳ ದಾಖಲಿಸಿದೆ.

## ಪಾಕಿಸ್ತಾನದ ಖೈಬರ್ ಪಖ್ತುಂಖ್ವಾದಲ್ಲಿ ಟಿಟಿಪಿ ಉಗ್ರರ ದಾಳಿ; 7 ಸೈನಿಕರು ಬಲಿ

# ಟಿಟಿಪಿ ಕಮಾಂಡರ್ ಅಹ್ಮದ್ ಕಾಝಿಂ ತಲೆಗೆ 10 ಕೋಟಿ ಬಹುಮಾನ



**ಇಸ್ಲಾಮಾಬಾದ್:** ಪಾಕಿಸ್ತಾನದ ಖೈಬರ್ ಪಖ್ತುಂಖ್ವಾ ಪ್ರಾಂತ್ಯದ ಕುರ್ರಂ ಜಿಲ್ಲೆಯಲ್ಲಿ ತೆಹ್ರಿಕ್-ಎ-ತಾಲಿಬಾನ್ ಪಾಕಿಸ್ತಾನ್ ಉಗ್ರರು ನಡೆಸಿದ ದಾಳಿಯಲ್ಲಿ ಪಾಕಿಸ್ತಾನಿ ಸೇನೆಯ ಕ್ಯಾಪ್ಟನ್ ಸೇರಿದಂತೆ ಏಳು ಸೈನಿಕರು ಮೃತಪಟ್ಟಿದ್ದಾರೆ ಎಂದು ಖಾಸಗಿ ಮಾಧ್ಯಮಗಳು ವರದಿ ಮಾಡಿವೆ. ತೆಹ್ರಿಕ್-ಎ-ತಾಲಿಬಾನ್ ಪಾಕಿಸ್ತಾನ್ ಮತ್ತು ಪಾಕಿಸ್ತಾನ ಸೇನಾ ಸಿಬ್ಬಂದಿ ಮಧ್ಯೆ ನಡೆದ ಭೀಕರ ಗುಂಡಿನ ಚಕಮಕಿಯಲ್ಲಿ ಮೃತಪಟ್ಟ ಸೇನಾ ಅಧಿಕಾರಿಯನ್ನು ಕ್ಯಾಪ್ಟನ್ ನೋಮನ್ ಎಂದು ಗುರುತಿಸಲಾಗಿದೆ.

17 ಭದ್ರತಾ ಸಿಬ್ಬಂದಿ ಗಾಯಗೊಂಡಿದ್ದಾರೆ. ಕುರ್ರಂ ಜಿಲ್ಲೆಯ ಸುಲ್ತಾನ್ ಕಾಲೇ ಪ್ರದೇಶದಲ್ಲಿ ಭದ್ರತಾ ಪಡೆಗಳನ್ನು ಗುರಿಯಾಗಿಸಿಕೊಂಡು ಟಿಟಿಪಿ ಉಗ್ರರು ಬಾಂಬ್ ಸ್ಫೋಟ ಹಾಗೂ ತೀವ್ರ ಗುಂಡಿನ ದಾಳಿ ನಡೆಸಿದ್ದಾರೆ. ಈ ಕೃತ್ಯವನ್ನು ಟಿಟಿಪಿಯ ಕುಖ್ಯಾತ ಕಮಾಂಡರ್ ಮತ್ತು ಟಿಟಿಪಿ ಫೀಲ್ಡ್ ಮಾರ್ಷಲ್ ಎಂದೇ ಕರೆಯಲ್ಪಡುವ ಅಹ್ಮದ್ ಕಾಝಿಂ ನಡೆಸಿರುವ ಸಾಧ್ಯತೆಯಿದೆ ಎಂದು ಹೇಳಲಾಗುತ್ತಿದೆ.

**10 ಕೋಟಿ ರೂಪಾಯಿ ಬಹುಮಾನ:** ಇಲ್ಲಿಯವರೆಗೂ ಟಿಟಿಪಿಯ ಕುಖ್ಯಾತ ಫೀಲ್ಡ್ ಮಾರ್ಷಲ್ ಅಹ್ಮದ್ ಕಾಝಿಂ 100 ಭದ್ರತಾ ಸಿಬ್ಬಂದಿಯನ್ನು ಹತ್ಯೆ ಮಾಡಿರುವ ಆರೋಪ ಹೊತ್ತಿದ್ದಾನೆ. ಈ ಹಿನ್ನೆಲೆ ಕಾಝಿಂ ತಲೆಗೆ ಪಾಕಿಸ್ತಾನ ಸರ್ಕಾರ 10 ಕೋಟಿ ಪಾಕಿಸ್ತಾನಿ ರೂಪಾಯಿ ಬಹುಮಾನ ಘೋಷಿಸಿದೆ. ಕಳೆದ ವಾರವಷ್ಟೇ ಲಕ್ಕಿ ಮರ್ವಾತ್ ಜಿಲ್ಲೆಯಲ್ಲಿ ನಡೆದ ಗುಪ್ತಚರ ಆಧಾರಿತ ಕಾರ್ಯಾಚರಣೆಯಲ್ಲಿ ಎಂಟು ಟಿಟಿಪಿ ಉಗ್ರರನ್ನು ಹತ್ಯೆ ಮಾಡಿ, ಐವರನ್ನು ಗಾಯಗೊಳಿಸಲಾಗಿತ್ತು.

ಈ ಘಟನೆಯ ಬೆನ್ನಲ್ಲೇ ಈ ಪ್ರತೀಕಾರದ ದಾಳಿ ನಡೆದಿದೆ. ಅಫ್ಘಾನ್ ತಾಲಿಬಾನ್‌ನೊಂದಿಗಿನ ಸಂಘರ್ಷ, ಪಾಕ್ ಆಕ್ರಮಿತ ಕಾಶ್ಮೀರದಲ್ಲಿನ ಆಂತರಿಕ ಉದ್ವಿಗ್ನತೆಯ ನಡುವೆ, ಪಾಕಿಸ್ತಾನವು ಇತ್ತೀಚೆಗೆ, ವಿಶೇಷವಾಗಿ ಅಫ್ಘಾನಿಸ್ತಾನದ ಗಡಿಯಲ್ಲಿರುವ ಪ್ರಾಂತ್ಯಗಳಲ್ಲಿ ಭಯೋತ್ಪಾದಕ ಚಟುವಟಿಕೆಗಳಲ್ಲಿ ತೀವ್ರ ಏರಿಕೆ ಕಂಡಿದೆ.

**ಪಾಕ್-ಅಫ್ಘಾನ್ ನಡುವೆ ಸಂಘರ್ಷ:** ಪಾಕಿಸ್ತಾನ, ಅಫಘಾನಿಸ್ತಾನ ಗಡಿಯಲ್ಲಿ ಉಭಯ ದೇಶಗಳ ನಡುವೆ ಸೇನಾ ಸಂಘರ್ಷ ಇನ್ನಷ್ಟು ಉಲ್ಬಣಗೊಂಡಿದೆ. ಪ್ರತ್ಯೇಕ ಗಡಿ ಸಂಘರ್ಷದಲ್ಲಿ 40ಕ್ಕೂ ಹೆಚ್ಚು ತಾಲಿಬಾನ್ ದಾಳಿಕೋರರನ್ನು ಕೊಂದುಹಾಕಲಾಗಿದೆ ಎಂದು ಪಾಕ್ ಸೇನೆ ಹೇಳಿಕೊಂಡಿದೆ. ರಾತ್ರಿ ಪಾಕ್‌ನ ಖೈಬರ್ ಪಖ್ತುಂಖ್ವಾ ಪ್ರಾಂತ್ಯದ ಗಡಿಯ ಒರಕ್‌ಝಾಯಿ, ಚಾಮನ್ ಜಿಲ್ಲೆಯ ಸನಿಹ ತಾಲಿಬಾನ್ ಪಡೆಗಳು ಗುಂಡಿನ ದಾಳಿ ನಡೆಸಿದ್ದವು. ಇದರ ಬೆನ್ನಲ್ಲೇ ಪಾಕಿಸ್ತಾನ ಸೇನೆಯು ಅಫ್ಘನ್‌ನ ಕಂದಹಾರ್ ಪ್ರಾಂತ್ಯದ ಸ್ಪಿನ್ ಬೋಲ್ಡಕ್ ಜಿಲ್ಲೆಯ ನಾಲ್ಕು ಪ್ರದೇಶಗಳ ನಾಲ್ಕು ಸ್ಥಳಗಳ ಮೇಲೆ ಗುಂಡಿನ ದಾಳಿ ಹಾಗೂ ವೈಮಾನಿಕ ದಾಳಿ ನಡೆಸಿದೆ ಎಂದು ವರದಿಯಾಗಿದೆ.

ಪಾಕ್ ನಡೆಸಿದ ದಾಳಿಯಲ್ಲಿ 15ಕ್ಕೂ ಹೆಚ್ಚು ನಾಗರಿಕರು ಮೃತಪಟ್ಟಿದ್ದು, 100ಕ್ಕೂ ಹೆಚ್ಚು ಜನರು ಗಾಯಗೊಂಡಿದ್ದಾರೆಂದು ಅಫ್ಘನ್ ಸರಕಾರ ಹೇಳಿದೆ. ತಾಲಿಬಾನ್ ನಡೆಸಿದ ಪ್ರತಿದಾಳಿಯಲ್ಲಿ ಗಡಿಭಾಗದ ಪಾಕ್-ಅಫ್ಘನ್ ಫ್ರೆಂಡ್‌ಶಿಪ್ ಗೇಟ್ ಧ್ವಂಸಗೊಂಡಿದೆ.

**ಬಲಿಯಾದವರ ಸಂಖ್ಯೆ ಎಷ್ಟು?**

**ಕಳೆದ ವಾರ ಪ್ರಕಟವಾದ ಭಯೋತ್ಪಾದನಾ ನಿಗ್ರಹ ಇಲಾಖೆ ವರದಿಯ ಪ್ರಕಾರ, ಈ ವರ್ಷ ಅಕ್ಟೋಬರ್ 22 ರವರೆಗೆ ಖೈಬರ್ ಪಖ್ತುಂಖ್ವಾದಲ್ಲಿ ಭಯೋತ್ಪಾದನೆಗೆ 298 ಜನರು ಬಲಿಯಾಗಿದ್ದಾರೆ. ಮೃತಪಟ್ಟವರಲ್ಲಿ 117 ಪೊಲೀಸ್ ಸಿಬ್ಬಂದಿ ಮತ್ತು 181 ನಾಗರಿಕರು ಸೇರಿದ್ದು, 486 ಜನರು ಗಾಯಗೊಂಡಿದ್ದಾರೆ. ಪ್ರಾಂತ್ಯದಾದ್ಯಂತ ನಡೆಸಲಾದ 2,366 ಗುಪ್ತಚರ ಕಾರ್ಯಾಚರಣೆಗಳಲ್ಲಿ 368 ಭಯೋತ್ಪಾದಕರನ್ನು ಹತ್ಯೆ ಮಾಡಲಾಗಿದ್ದು, 1,124 ಉಗ್ರರನ್ನು ಬಂಧಿಸಲಾಗಿದೆ ಎಂಬ ವರದಿ ಬಿಡುಗಡೆ ಮಾಡಿದೆ.**

**17 ಮಂದಿಗೆ ಗಾಯ**

**ಪಾಕಿಸ್ತಾನದ ಖೈಬರ್ ಪಖ್ತುಂಖ್ವಾ ಪ್ರಾಂತ್ಯದಲ್ಲಿ ಟಿಟಿಪಿ ಉಗ್ರರು ನಡೆಸಿದ ದಾಳಿಯಲ್ಲಿ ಪಾಕ್ ಸೇನೆಯ ಕ್ಯಾಪ್ಟನ್ ಸೇರಿದಂತೆ ಏಳು ಸೈನಿಕರು ಮೃತಪಟ್ಟಿದ್ದಾರೆ. 17 ಮಂದಿ ಗಾಯಗೊಂಡಿದ್ದಾರೆ. ಈ ದಾಳಿಯ ಹೊಣೆಯನ್ನು ಕುಖ್ಯಾತ ಟಿಟಿಪಿ ಕಮಾಂಡರ್ ಅಹ್ಮದ್ ಕಾಝಿಂ ಹೊತ್ತಿರುವ ಶಂಕೆ ವ್ಯಕ್ತವಾಗಿದೆ ಎಂದು ಖಾಸಗಿ ಮಾಧ್ಯಮಗಳು ವರದಿ ಮಾಡಿವೆ. ಪಾಕಿಸ್ತಾನದಲ್ಲಿ ಇತ್ತೀಚೆಗೆ ಭಯೋತ್ಪಾದಕ ಕೃತ್ಯಗಳು ಹೆಚ್ಚಾಗಿದೆ. ಈ ವರ್ಷವೊಂದರಲ್ಲೇ ಪ್ರಾಂತ್ಯದಲ್ಲಿ ಸುಮಾರು 300 ಜನರು ಸಾವನ್ನಪ್ಪಿದ್ದಾರೆ.**

## ಡಾಲರ್ ಎದುರು 21 ಪೈಸೆ ಕುಸಿತ ಕಂಡ ರೂಪಾಯಿ

**ಮುಂಬೈ:** ಗುರುವಾರ ಆರಂಭಿಕ ವಹಿವಾಟಿನಲ್ಲಿ ಡಾಲರ್ ಎದುರು ರೂಪಾಯಿ 21 ಪೈಸೆ ಕುಸಿದು, 88.43 ಕ್ಕೆ ತಲುಪಿದೆ. ಅಂತರ ಬ್ಯಾಂಕ್ ವಿದೇಶಿ ವಿನಿಮಯದಲ್ಲಿ, ಯುಎಸ್ ಡಾಲರ್ ಎದುರು ರೂಪಾಯಿ 88.37 ಕ್ಕೆ ತೆರೆದು 88.43 ಕ್ಕೆ ಇಳಿದು ಹಿಂದಿನ ದಿನದ ಮುಕ್ತಾಯಕ್ಕಿಂತ 21 ಪೈಸೆ ಕುಸಿತ ಕಂಡಿತು.ಬುಧವಾರ, ಯುಎಸ್ ಡಾಲರ್ ಎದುರು ರೂಪಾಯಿ 88.22 ಕ್ಕೆ ಸ್ಥಿರವಾಗಿತ್ತು. ಈ ವರ್ಷ ಮತ್ತೊಂದು ದರ ಕಡಿತವು ಪೂರ್ವಭಾವಿ ತೀರ್ಮಾನವಲ್ಲ ಎಂದು ಅಧ್ಯಕ್ಷರು ಘೋಷಿಸಿದ ನಂತರ ಡಾಲರ್ ಸೂಚ್ಯಂಕವು ಏರಿತು, ಮಾರುಕಟ್ಟೆ ವ್ಯತ್ಯಯ, ಮಿಶ್ರ ಆರ್ಥಿಕತೆ ಪರಿಣಾಮ ಬೀರಿದೆ ಎಂದು ಖಜಾನೆ ಮುಖ್ಯಸ್ಥ ಮತ್ತು ಕಾರ್ಯನಿರ್ವಾಹಕ ನಿರ್ದೇಶಕ ಅನಿಲ್ ಕುಮಾರ್ ಬನ್ಸಾಲಿ ಹೇಳಿದರು. ಜಾಗತಿಕ ತೈಲ ಮಾನದಂಡವಾದ ಬ್ರೆಂಟ್ ಕಚ್ಚಾ ತೈಲವು ಭವಿಷ್ಯದ ವಹಿವಾಟಿನಲ್ಲಿ ಪ್ರತಿ ಬ್ಯಾರೆಲ್‌ಗೆ 64.75 ಕ್ಕೆ ಶೇ. 0.25 ರಷ್ಟು ಕಡಿಮೆಯಾಗಿ ವಹಿವಾಟು ನಡೆಸುತ್ತಿದೆ.

# ಪರಮಾಣು ಶಸ್ತ್ರಾಸ್ತ್ರ ಪರೀಕ್ಷೆಗೆ ಆದೇಶ ನೀಡಿದ ಡೊನಾಲ್ಡ್ ಟ್ರಂಪ್


## ■ ದೇಶದ ಪರಮಾಣು ಪ್ರತಿಸ್ಪರ್ಧಿಗಳೊಂದಿಗಿನ ಸಂಬಂಧ ಮತ್ತಷ್ಟು ಹದಗೆಡುವ ಭೀತಿ

**ಶಾಕಿಂಗ್ ನಿರ್ಧಾರ**

**ವಾಷಿಂಗ್ಟನ್:** ಅಮೆರಿಕಾದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ದೇಶದ ಇತಿಹಾಸದಲ್ಲೇ ಅಪರೂಪ ಎನ್ನುವಂತಹ ನಿರ್ಧಾರವನ್ನು ತೆಗೆದುಕೊಂಡಿದ್ದಾರೆ.

1992ರಲ್ಲಿ ಸ್ಥಗಿತಗೊಳಿಸಲಾಗಿದ್ದ ಪರಮಾಣು ಶಸ್ತ್ರಾಸ್ತ್ರ ಪರೀಕ್ಷೆಯನ್ನು ತಕ್ಷಣದಿಂದಲೇ ಜಾರಿಗೆ ಬರುವಂತೆ ಪುನರ್ ಆರಂಭಿಸುವುದಾಗಿ ಘೋಷಿಸಿದ್ದಾರೆ. ವಿಶ್ವದ ಬಲಾಢ್ಯ ದೇಶಗಳಾದ ರಷ್ಯಾ ಮತ್ತು ಚೀನಾ ತಮ್ಮತಮ್ಮ ನ್ಯೂಕ್ಲಿಯರ್ ಕಾರ್ಯಕ್ರಮಗಳನ್ನು ವಿಸ್ತರಿಸುತ್ತಿರುವ ಈ ಹೊತ್ತಿನಲ್ಲಿ, ಟ್ರಂಪ್ ಅವರ ನಿರ್ಧಾರ ಮಹತ್ವವನ್ನು ಪಡೆದುಕೊಂಡಿದೆ. ಆ ಮೂಲಕ, ಜಾಗತಿಕ ಶಾಂತಿ ಮತ್ತೆ ಕದಡುವ ಸಾಧ್ಯತೆಗೆ ಮುನ್ನುಡಿ ಬರೆದಂತಾಗಿದೆ.

ಕೊಂಚವೂ ಸುಳಿವು ನೀಡದೇ ಟ್ರಂಪ್ ಅವರು ತೆಗೆದುಕೊಂಡಿರುವ ನಿರ್ಧಾರಕ್ಕೆ ಖುದ್ದು ರಿಪಬ್ಲಿಕನ್ ಪಾರ್ಟಿಯ ಸದಸ್ಯರೂ ಶಾಕ್ ಆಗಿದ್ದಾರೆ. 1992ರವರೆಗೆ ಅಮೆರಿಕಾ, ಕಂಪ್ಯೂಟರ್ ಸಿಮ್ಯುಲೇಶನ್‌ಗಳ ಮತ್ತು ಸಣ್ಣ ಪ್ರಮಾಣದ ಪರೀಕ್ಷೆಗಳನ್ನು ನಡೆಸುವ ಮೂಲಕ, ಶಸ್ತ್ರಾಸ್ತ್ರಗಳ ಸುರಕ್ಷತೆ ವಿಶ್ವಾಸಾರ್ಹತೆಯನ್ನು ಖಚಿತ ಪಡಿಸಿಕೊಳ್ಳುತ್ತಿತ್ತು. ಈಗ 32ವರ್ಷಗಳ ನಂತರ, ಟ್ರಂಪ್ ಸರ್ಕಾರ ತೆಗೆದುಕೊಂಡ ನಿರ್ಧಾರದಿಂದ, ಜಾಗತಿಕ ಮಟ್ಟದಲ್ಲಿ ಇದರ ನಿಯಂತ್ರಣಕ್ಕೆ ನಡೆಯುತ್ತಿರುವ ಪ್ರಯತ್ನಕ್ಕೆ ಅಡ್ಡಿಯಾಗಬಹುದು ಎಂದು ವ್ಯಾಖ್ಯಾನಿಸಲಾಗುತ್ತಿದೆ.




ಇನ್ನೊಂದು ಕಡೆ, ಚೀನಾ ಕೂಡಾ ತನ್ನ ಶಸ್ತ್ರಾಸ್ತ್ರಗಳ ಆಧುನೀಕರಣವನ್ನು ಇನ್ನಷ್ಟು ವೇಗಗೊಳಿಸುತ್ತಿದೆ. ಅಮೆರಿಕಾದ ಗುಪ್ತಚರ ಇಲಾಖೆಯು ಸರ್ಕಾರಕ್ಕೆ ನೀಡಿರುವ ವರದಿಯ ಪ್ರಕಾರ, ಚೀನಾವು, ಮುಂದಿನ ಐದು ವರ್ಷಗಳಲ್ಲಿ ಅಮೆರಿಕಾ ಮತ್ತು ರಷ್ಯಾದ ಪರಮಾಣು ಸಾಮರ್ಥ್ಯಕ್ಕೆ ಸಮನಾಗಿ ನಿಲ್ಲಬಹುದು ಎಂದು ತನ್ನ ವರದಿಯಲ್ಲಿ ಉಲ್ಲೇಖಿಸಿದೆ. ದಕ್ಷಿಣ ಕೊರಿಯಾ ಪ್ರವಾಸದಲ್ಲಿರುವ ಡೊನಾಲ್ಡ್ ಟ್ರಂಪ್ ಅವರ ಘೋಷಣೆ, ಚೀನಾದ ಅಧ್ಯಕ್ಷ ಕ್ಸಿ ಜಿನ್ ಪಿಂಗ್ ಅವರೊಂದಿಗೆ ಸಭೆಯ ಕೆಲವೇ ಗಂಟೆಗಳ ಮುನ್ನ ಹೊರಬಿದ್ದಿದೆ. ನ್ಯೂಕ್ಲಿಯರ್ ಶಸ್ತ್ರಾಸ್ತ್ರ ಪರೀಕ್ಷೆಯ ಮಾಹಿತಿಯನ್ನು ಪೆಂಟಗನ್ ಇನ್ನೂ ಅಧಿಕೃತವಾಗಿ ನೀಡಿಲ್ಲ. ಈ ವಾರಾಂತ್ಯದಲ್ಲಿ ಇದರ ಘೋಷಣೆಯಾಗಬಹುದು. ಟ್ರೂತ್ ಸೋಶಿಯಲ್ ಪೋಸ್ಟ್‌ನಲ್ಲಿ ಟ್ರಂಪ್, ಅಮೆರಿಕಾವು ವಿಶ್ವದ ಯಾವುದೇ ದೇಶಕ್ಕಿಂತ ಹೆಚ್ಚಿನ ಪರಮಾಣು ಶಸ್ತ್ರಾಸ್ತ್ರವನ್ನು ಹೊಂದಿದೆ. ರಷ್ಯಾವು ಎರಡನೇ ಮತ್ತು ಚೀನಾ ದೇಶವು ಮೂರನೇ ಸ್ಥಾನದಲ್ಲಿದೆ. ಆದರೆ, ಮುಂದಿನ ಐದು ವರ್ಷಗಳಲ್ಲಿ ಇದರ ಬದಲಾವಣೆಯಾಗಬಹುದು ಎಂದು ಹೇಳಿದ್ದಾರೆ.

ಇತರ ದೇಶಗಳ ಪರಮಾಣು ಪರೀಕ್ಷಾ ಕಾರ್ಯಕ್ರಮಗಳಿಂದಾಗಿ, ನಾನು ನಮ್ಮ ರಕ್ಷಣಾ ಇಲಾಖೆಗೆ, ಸಮಾನ ಆಧಾರದ ಮೇಲೆ ಪರೀಕ್ಷೆ ನಡೆಸಲು ಸೂಚಿಸಿದ್ದೇನೆ. ಈ ಪ್ರಕ್ರಿಯೆ ತಕ್ಷಣದಿಂದಲೇ ಜಾರಿಗೆ ಬರಲಿದೆ. ಇದರ ಭಯಾನಕ ಮತ್ತು ವಿನಾಶಕಾರಿ ಶಕ್ತಿಯ ಅರಿವು ನನಗಿದೆ. ಆದರೆ, ಇದನ್ನು ಹೊರತು ಪಡಿಸಿ, ಅಮೆರಿಕಾಗೆ ಬೇರೆ ದಾರಿಯಿಲ್ಲ ಎಂದು ತಮ್ಮ ನಿರ್ಧಾರವನ್ನು ಡೊನಾಲ್ಡ್ ಟ್ರಂಪ್ ಸಮರ್ಥಿಸಿಕೊಂಡಿದ್ದಾರೆ.

**ರಷ್ಯಾ ಮತ್ತು ಚೀನಾಗೆ ಎಚ್ಚರಿಕೆ**

**ಸದಾ ಒಂದಲ್ಲಾ ಒಂದು ಗೊಂದಲದ ನಿರ್ಧಾರವನ್ನು ತೆಗೆದುಕೊಳ್ಳುವ ಅಮೆರಿಕಾದ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ಮೂವತ್ತು ವರ್ಷ ಸ್ಥಗಿತಗೊಳಿಸಿದ್ದ ಪರಮಾಣು ಶಸ್ತ್ರಾಸ್ತ್ರ ಪರೀಕ್ಷೆಯನ್ನು ತಕ್ಷಣದಿಂದಲೇ ಪುನರ್ ಆರಂಭಿಸುವುದಾಗಿ ಹೇಳಿದ್ದಾರೆ. ಆ ಮೂಲಕ, ರಷ್ಯಾ ಮತ್ತು ಚೀನಾಗೆ ಎಚ್ಚರಿಕೆ ನೀಡುವ ಪ್ರಯತ್ನವನ್ನು ಮಾಡಿದ್ದಾರೆ.**



**ಇನ್ನೊಂದು ಕಡೆ, ಪರಮಾಣು ಅಸ್ತ್ರವನ್ನು ಹೊಂದಿರುವ ರಾಷ್ಟ್ರಗಳ ನಡುವಿನ ಸಂಬಂಧ ಇನ್ನಷ್ಟು ಹದಗೆಡಬಹುದು. ಇತ್ತೀಚೆಗೆ, ರಷ್ಯಾವು ಶಸ್ತ್ರಾಸ್ತ್ರ ನಿಯಂತ್ರಣ ಒಪ್ಪಂದಕ್ಕೆ ಸಹಿ ಹಾಕದೇ ಹಿಂದಕ್ಕೆ ಸರಿದಿತ್ತು. ಅಲ್ಲದೇ, ತಮ್ಮಲ್ಲಿರುವ ಸುಧಾರಿತ ಪರಮಾಣು ಸಾಮರ್ಥ್ಯಗಳನ್ನು ಜಗತ್ತಿಗೆ ಪ್ರದರ್ಶಿಸಿತ್ತು. ಅಕ್ಟೋಬರ್ 21ರಂದು, ರಷ್ಯಾದ ಪೋಸಿಡಾನ್ ಪರಮಾಣು ಚಾಲಿತ ಸೂಪರ್ ಟಾರ್ಪಿಡೋದ, ಪರಮಾಣು ಚಾಲಿತ ಬ್ಯೂರೆವೆಸ್ಟನಿಕ್ ಕ್ರೂಸ್ ಕ್ಷಿಪಣಿ ಪರೀಕ್ಷೆಯನ್ನು ಯಶಸ್ವಿಯಾಗಿ ನಡೆಸಿದ್ದೇವೆ.**

**-ವ್ಲಾಡಿಮಿರ್ ಪುಟಿನ್, ರಷ್ಯಾದ ಅಧ್ಯಕ್ಷ**

## ಸರ್ದಾರ್ ಪಟೇಲ್ 150ನೇ ಜನ್ಮ ದಿನ, ನ.1ರಿಂದ ಭಾರತ್ ಪರ್ವ

**ಪಾಟ್ನಾ:** ಸರ್ದಾರ್ ವಲ್ಲಭಭಾಯಿ ಪಟೇಲ್ ಅವರ 150 ನೇ ಜನ್ಮ ದಿನಾಚರಣೆ ಪ್ರಯುಕ್ತ ಹದಿನೈದು ದಿನಗಳ ಕಾಲ ಭಾರತ್ ಪರ್ವ-2025 ಕಾರ್ಯಕ್ರಮ ಹಮಿಕೊಳ್ಳಲಾಗಿದೆ ಎಂದು ಕೇಂದ್ರ ಗೃಹಸಚಿವ ಅಮಿತ್ ಶಾ ತಿಳಿಸಿದ್ದಾರೆ. ನ. 1 ರಿಂದ 15 ರವರೆಗೆ ಭಾರತ್ ಪರ್ವ್ 2025 ಅನ್ನು ಆಚರಿಸಲಾಗುವುದು ಎಂದು ತಿಳಿಸಿರುವ ಅವರು, ಸರ್ದಾರ್ ಪಟೇಲ್ ಅವರ ಜನ್ಮ ದಿನಾಚರಣೆಯನ್ನು ಗುರುತಿಸಲು ಇಂದಿನಿಂದ ಪ್ರತಿ ಅಕ್ಟೋಬರ್ 31 ರಂದು ಗುಜರಾತ್‌ನ ಏಕ್ತಾ ನಗರದಲ್ಲಿ ಭವ್ಯ ಮೆರವಣಿಗೆ ನಡೆಸಲಾಗುವುದು ಎಂದು ಘೋಷಿಸಿದರು. ಪ್ರಧಾನಿ ನರೇಂದ್ರ ಮೋದಿ ಶುಕ್ರವಾರ ಬೆಳಿಗ್ಗೆ 7.55 ರಿಂದ ಮೊದಲ ಮೆರವಣಿಗೆಯಲ್ಲಿ ಭಾಗವಹಿಸಲಿದ್ದಾರೆ ಎಂದು ಅವರು ಹೇಳಿದರು. ಮಹಾತ್ಮ ಗಾಂಧಿಯವರ ಜೊತೆಗೆ, ಸರ್ದಾರ್ ಪಟೇಲ್ ಭಾರತದ ಸ್ವಾತಂತ್ರ್ಯ ಹೋರಾಟದ ಬೆನ್ನೆಲುಬಾಗಿದ್ದರು. ರಾಷ್ಟ್ರದ ಅಡಿಪಾಯವನ್ನು ನಿರ್ಮಿಸುವಲ್ಲಿ ಅವರ ಕೊಡುಗೆ ಅಪಾರ ಎಂದರು. ಆದರೂ, ಕಾಂಗ್ರೆಸ್ ಪಕ್ಷವೂ ಸರ್ದಾರ್ ಪಟೇಲ್ ಅವರನ್ನು ಮರೆಯುವಂತೆ ಮಾಡಲು ಯಾವುದೇ ಅವಕಾಶವನ್ನು ಬಿಟ್ಟುಕೊಟ್ಟಿತು ಮತ್ತು ಅವರ ಹೆಸರಿನಲ್ಲಿ ಯಾವುದೇ ಪ್ರತಿಮೆ ಅಥವಾ ಸ್ಮಾರಕವನ್ನು ನಿರ್ಮಿಸಲಿಲ್ಲ ಎಂದು ಅವರು ಹೇಳಿದ್ದಾರೆ. ಮತ್ತೊಂದೆಡೆ, ಎನ್‌ಡಿಎ ಏಕತಾ ಪ್ರತಿಮೆಯನ್ನು ನಿರ್ಮಿಸಿತು, ಆ ಪ್ರತಿಮೆ ಇಂದು ವಿಶ್ವದ ಗಮನ ಸೆಳೆದಿದೆ ಎಂದು ಅವರು ತಿಳಿಸಿದರು.

## ಆರ್‌ಎಸ್‌ಎಸ್ ಕಾರ್ಯಕಾರಿಣಿ ಸಭೆಗೆ ಚಾಲನೆ

**ಜಬಲ್ಪುರ:** ರಾಷ್ಟ್ರೀಯ ಸ್ವಯಂಸೇವಕ ಸಂಘದ ಕಾರ್ಯಕಾರಿ ಮಂಡಳಿಯ ಸಭೆಯು ಗುರುವಾರ ಜಬಲ್ಪುರದಲ್ಲಿ ಆರಂಭಗೊಂಡಿದೆ. ದೇಶದಾದ್ಯಂತ ಹಿಂದೂ ಸಮಾವೇಶಗಳನ್ನು ನಡೆಸುವ ಕುರಿತು ಮೂರು ದಿನಗಳ ಸಭೆಯಲ್ಲಿ ಚರ್ಚೆ ನಡೆಯಲಿದೆ. ಆರ್‌ಎಸ್‌ಎಸ್ ಸರಸಂಘಸಂಚಾಲಕ ಮೋಹನ್ ಭಾಗವತ್ ಮತ್ತು ಸರಕಾರ್ಯವಾಹ ದತ್ತಾತ್ರೇಯ ಹೊಸಬಾಳೆ ಅಖಿಲ ಭಾರತೀಯ ಕಾರ್ಯಕಾರಿ ಮಂಡಲದ ಸಭೆಯನ್ನು ಉದ್ಘಾಟಿಸಿದರು.


ಸಂಘ 101ನೇ ವರ್ಷಕ್ಕೆ ಕಾಲಿಡುತ್ತಿದ್ದು. ಶತಮಾನೋತ್ಸವ ಆಚರಣೆ ಪಂಚಪರಿವರ್ತನೆಯ ಕುರಿತು ಚರ್ಚೆ ನಡೆಯಲಿದೆ. ದೇಶದಾದ್ಯಂತ ಒಂದು ಲಕ್ಷಕ್ಕೂ ಅಧಿಕ ಹಿಂದೂ ಸಮಾವೇಶಗಳನ್ನು ಆಯೋಜಿಸುವ ಗುರಿಯನ್ನು ಹೊಂದಲಾಗಿದೆ ಎಂದು ಆರ್‌ಎಸ್‌ಎಸ್ ತಿಳಿಸಿದೆ. ಸಂಘಚಾಲಕರು, ಕಾರ್ಯವಾಹರು, ಪ್ರಚಾರಕರು ಸೇರಿದಂತೆ ಒಟ್ಟು 407 ಜನರು ಸಭೆಯಲ್ಲಿ ಭಾಗಿಯಾಗಿದ್ದಾರೆ ಎಂದು ಸಂಘದ ಪದಾಧಿಕಾರಿಯೊಬ್ಬರು ತಿಳಿಸಿದ್ದಾರೆ.

# ಟ್ರಂಪ್ ಹೇಳಿಕೆ ವಿರೋಧಿಸುವ ಧೈರ್ಯ ಮೋದಿಗಿಲ್ಲ

**ಬಿಹಾರ:** ಭಾರತ ಮತ್ತು ಪಾಕಿಸ್ತಾನ ನಡುವಿನ ಯುದ್ಧವನ್ನು ನಾನೇ ನಿಲ್ಲಿಸಿದೆ ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಪದೇ ಪದೇ ಹೇಳುತ್ತಿದ್ದರೂ ಅದನ್ನು ವಿರೋಧಿಸುವ ಧೈರ್ಯ ಪ್ರಧಾನಿ ನರೇಂದ್ರ ಮೋದಿಗೆ ಇಲ್ಲ ಎಂದು ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಹೇಳಿದ್ದಾರೆ.

**ಬಿಹಾರದಲ್ಲಿ ಇಂಡಿಯಾ ಬಣ ಅಧಿಕಾರಕ್ಕೆ ಬಂದರೆ, ಅದು ರೈತರು, ಕಾರ್ಮಿಕರು, ದಲಿತರು, ದುರ್ಬಲ ವರ್ಗಗಳ ಸರ್ಕಾರವಾಗಿರುತ್ತದೆ. ಎಲ್ಲಾ ಸಮುದಾಯಗಳ ಪ್ರಾತಿನಿಧ್ಯವನ್ನು ಹೊಂದಿರುತ್ತದೆ ಎಂದು ಕಾಂಗ್ರೆಸ್ ನಾಯಕ ಹೇಳಿದ್ದಾರೆ. ಇಂಡಿಯಾ ಬಣ ಅಧಿಕಾರಕ್ಕೆ ಬಂದರೆ ವಿಶ್ವದ ಅತ್ಯುತ್ತಮ ವಿಶ್ವವಿದ್ಯಾಲಯ ನಳಂದದಲ್ಲಿ ತಲೆ ಎತ್ತಲಿದೆ.**

**- ರಾಹುಲ್ ಗಾಂಧಿ, ಲೋಕಸಭೆ ವಿರೋಧ ಪಕ್ಷದ ನಾಯಕ**



ಬಿಹಾರ ವಿಧಾನಸಭೆ ಚುನಾವಣೆ ಹಿನ್ನೆಲೆಯಲ್ಲಿ ನಳಂದದಲ್ಲಿ ನಡೆದ ಚುನಾವಣಾ ರ‍್ಯಾಲಿ ಉದ್ದೇಶಿಸಿ ಮಾತನಾಡಿದ ರಾಹುಲ್, ಬಿಹಾರವು ಈಗ ಪ್ರಶ್ನೆಪತ್ರಿಕೆ ಸೋರಿಕೆ ಮತ್ತು ಕಳಪೆ ಆರೋಗ್ಯ ಮೂಲಸೌಕರ್ಯಗಳಿಂದ ಸುದ್ದಿ ಮಾಡುತ್ತಿದೆ ಎಂದಿದ್ದಾರೆ. ಭಾರತ, ಪಾಕಿಸ್ತಾನ ನಡುವಿನ ಸಂಘರ್ಷವನ್ನು ನಾನು ನಿಲ್ಲಿಸಿದೆ ಎಂದು ಅಮೆರಿಕ ಅಧ್ಯಕ್ಷರು ಹಲವು ಬಾರಿ ಹೇಳಿಕೊಂಡಿದ್ದಾರೆ.. ಆದರೆ, ನಮ್ಮ ಪ್ರಧಾನಿಗೆ ಅವರನ್ನು ಎದುರಿಸುವ ಧೈರ್ಯವಿಲ್ಲ ಎಂದು ರಾಹುಲ್ ಆರೋಪಿಸಿದ್ದಾರೆ. ಬಿಹಾರದಲ್ಲಿ ಚಿಭೂಮಿ ಲಭ್ಯವಿಲ್ಲ ಎಂಬ ಗೃಹ ಸಚಿವ ಅಮಿತ್ ಶಾ ಅವರ ಹೇಳಿಕೆಯನ್ನು ಟೀಕಿಸಿದ ರಾಹುಲ್, ರಾಜ್ಯ ಸರ್ಕಾರವು ಕೈಗಾರಿಕೆಗಳಿಗೆ ಕಡಿಮೆ ಬೆಲೆಗೆ ನಿವೇಶನಗಳನ್ನು ನೀಡಿದೆ ಎಂದು ಆರೋಪಿಸಿದ್ದಾರೆ.

ಕಳೆದ ಲೋಕಸಭಾ ಚುನಾವಣೆಯಲ್ಲಿ ಎನ್‌ಡಿಎ ವೋಟ್ ಚೋರಿ ಮೂಲಕ ಸರ್ಕಾರವನ್ನು ರಚಿಸಿತ್ತು. ಎನ್‌ಡಿಎ, ಪ್ರಧಾನಿ ಮೋದಿ, ಭೀಮರಾವ್ ಅಂಬೇಡ್ಕರ್ ರಚಿಸಿದ ಸಂವಿಧಾನವನ್ನು ನಾಶಮಾಡಲು ಮುಂದಾಗಿದ್ದಾರೆ ಎಂದು ರಾಹುಲ್ ಗಾಂಧಿ ಕಿಡಿಕಾರಿದ್ದಾರೆ.

## ಉದಯಾಸ್ತಮಾನ ಪೂಜೆ ನಿಲ್ಲಿಸುವಂತಿಲ್ಲ: ಸುಪ್ರೀಂ ಕೋರ್ಟ್





**ನವದೆಹಲಿ:** ಡಿ.1ರಂದು ಇರುವ ಏಕಾದಶಿಯಂದು ಕೇರಳದ ಗುರುವಾಯೂರು ಕೃಷ್ಣ ದೇಗುಲದಲ್ಲಿ ಸಂಪ್ರದಾಯದಂತೆ ಉದಯಾಸ್ತಮಾನ ಪೂಜೆಯನ್ನು ಕೈಗೊಳ್ಳಬೇಕು ಅದರಲ್ಲಿ ಯಾವುದೇ ಬದಲಾವಣೆಗಳಿಲ್ಲ ಎಂದು ಸುಪ್ರೀಂ ಕೋರ್ಟ್ ಗುರುವಾರ ಹೇಳಿದೆ. ಗುರುವಾಯೂರಿನಲ್ಲಿ ಏಕಾದಶಿಯಂದು ಉದಯಾಸ್ತಮಾನ ಪೂಜೆಯನ್ನು ಮಾಡಲಾಗುತ್ತದೆ. ಅಂದರೆ ಈ ದಿನ ಸೂರ್ಯೋದಯದಿಂದ ಸೂರ್ಯಾಸ್ತದವರೆಗೆ ವಿವಿಧ ಪೂಜೆಗಳನ್ನು ಮಾಡಲಾಗುತ್ತದೆ. ಆದರೆ, ಅಂದು ದೇಗುಲಕ್ಕೆ ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಭೇಟಿ ಕೊಡುವ ಕಾರಣ, ಜನರ ನಿರ್ವಹಣೆ ಕಷ್ಟವಾಗಲಿದೆ ಎಂದು ದೇಗುಲದ ಆಡಳಿತ ಮಂಡಳಿ ಉದಯಾಸ್ತಮಾನ ಪೂಜೆಯನ್ನು ಕೈಬಿಡಲು ನಿರ್ಧರಿಸಿತ್ತು. ಜತೆಗೆ ಅಂದು ಹೆಚ್ಚಿನ ಸಂಖ್ಯೆಯ ಭಕ್ತರಿಗೆ ದೇವರ ದರ್ಶನಕ್ಕೆ ಅವಕಾಶ ಕಲ್ಪಿಸಿಕೊಡಲು ನಿರ್ಧರಿಸಿತ್ತು.

ಇದನ್ನು ಪ್ರಶ್ನಿಸಿ, ಪಿ. ಸಿ. ಹ್ಯಾರಿ ಎನ್ನುವವರು ಮತ್ತು ದೇವಾಲಯದಲ್ಲಿ ಪುರೋಹಿತ ಹಕ್ಕುಗಳನ್ನು ಹೊಂದಿರುವ ಕುಟುಂಬದ ಇತರ ಸದಸ್ಯರು, ಏಕಾದಶಿ ದೇವಾಲಯದ ಪ್ರಮುಖ ಹಬ್ಬವಾಗಿದೆ. ಉದಯಾಸ್ತಮಾನ ಪೂಜೆಯನ್ನು 1972ರಿಂದ ಏಕಾದಶಿ ದಿನದಂದು ನಡೆಸಲಾಗುತ್ತಿದೆ ಎಂಬುದು ಒಪ್ಪಿಕೊಂಡ ಸತ್ಯವಾದರೂ, ವಾಸ್ತವದಲ್ಲಿ ಅದನ್ನು ಹಿಂದಿನಿಂದಲೂ ನಡೆಸಲಾಗುತ್ತಿದೆ. ಅಲ್ಲದೆ ಈ ಸಂಪ್ರದಾಯವನ್ನು ಆದಿ ಶಂಕರಾಚಾರ್ಯರು ಜಾರಿಗೆ ತಂದಿದ್ದು ಎನ್ನಲಾಗಿದೆ ಎಂದು ಅರ್ಜಿ ಸಲ್ಲಿಸಿದ್ದರು. ಈ ಪ್ರಕರಣದ ವಿಚಾರಣೆ ನಡೆಸಿದ, ನ್ಯಾಯಮೂರ್ತಿಗಳಾದ ಜೆ.ಕೆ. ಮಹೇಶ್ವರಿ ಮತ್ತು ವಿಜಯ ಬಿಷ್ಣೋಯಿ, ಈ ಪೂಜೆಯನ್ನು 1972ರಿಂದಲೂ ನಡೆಸಲಾಗುತ್ತಿದೆ ಎನ್ನುವುದನ್ನು ಪರಿಗಣಿಸಿ, ಉದಯಾಸ್ತಮಾನ ಪೂಜೆಯನ್ನು ನಿಲ್ಲಿಸಕೂಡದು ಎಂದು ನಿರ್ದೇಶಿಸಿದೆ.

## ಬಿಜೆಪಿ ನಿತೀಶ್ ಕುಮಾರ್‌ರನ್ನು ಸಿಎಂ ಆಗಿ ಮುಂದುವರಿಯಲು ಬಿಡಲ್ಲ


**ಲಖನೌ:** ಬಿಹಾರ ವಿಧಾನಸಭಾ ಚುನಾವಣೆಯಲ್ಲಿ ಜೆಡಿಯು ನಾಯಕ ನಿತೀಶ್ ಕುಮಾರ್ ಅವರನ್ನು ಬಿಜೆಪಿ ದೋಣಿಯಂತೆ ಬಳಸಿಕೊಳ್ಳುತ್ತಿದೆ, ಚುನಾವಣೆ ಮುಗಿದ ಬಳಿಕ ಅವರನ್ನು ಮುಖ್ಯಮಂತ್ರಿ ಸ್ಥಾನದಲ್ಲಿ ಇರಲು ಬಿಡುವುದಿಲ್ಲ ಎಂದು ಸಮಾಜವಾದಿ ಪಕ್ಷದ ಅಧ್ಯಕ್ಷ ಅಖಿಲೇಶ್ ಯಾದವ್ ಹೇಳಿದ್ದಾರೆ.

ಘಾಜಿಪುರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅಖಿಲೇಶ್, ನಿತೀಶ್ ಕುಮಾರ್ ನಿಜವಾಗಲೂ ಬಿಜೆಪಿಯ ಚುನಾವಣೆಯ ವರ ಆದರೆ ಸಿಎಂ ಹುದ್ದೆಗೆ ಅವರು ವರ ಅಲ್ಲ. ಬಿಹಾರದ ಜನರಿಗೆ ಎಲ್ಲಾ ಸತ್ಯವೂ ಗೊತ್ತು. ನಿತೀಶ್ ಕುಮಾರ್ ಕೇವಲ ಚುನಾವಣೆಗೆ ಸೀಮಿತ ಎನ್ನುವುದು ವಿಪಕ್ಷಗಳಿಗೂ ಗೊತ್ತು ಎಂದರು. ಬಿಜೆಪಿ ಖಂಡಿತವಾಗಿಯೂ ನಿತೀಶ್ ಅವರನ್ನು ಮುಖ್ಯಮಂತ್ರಿಯನ್ನಾಗಿ ಮಾಡದು. ಇದನ್ನು ಯಾವ ಆಧಾರದಲ್ಲಿ ಹೇಳುತ್ತಿದ್ದೀರಿ ಎಂದು ನೀವು ಕೇಳಿದರೆ, ಮಹಾರಾಷ್ಟ್ರ ಮತ್ತು ಇತರ ರಾಜ್ಯಗಳಲ್ಲಿ ಆಗಿರುವುದನ್ನು ಗಮನಿಸಿ. ಚುನಾವಣೆಗೆ ಮುನ್ನ ಘೋಷಿಸಿದ ಸಿಎಂ ಅಭ್ಯರ್ಥಿ, ಹುದ್ದೆಗೇರುವ ವ್ಯಕ್ತಿ ಬೇರೆಯೇ ಆಗಿರುತ್ತಾರೆ. ಅದೇ ಬಿಹಾರದಲ್ಲೂ ಆಗಲಿದೆ ಎಂದರು.

# ಟ್ರಂಪ್ ಹೆಸರಿನಲ್ಲಿ ಆಧಾರ್ ಕಾರ್ಡ್ ಮಾಡಿದವರ ವಿರುದ್ಧ ಎಫ್‌ಐಆರ್

**ಮುಂಬೈ:** ಎನ್‌ಸಿಪಿ ಶಾಸಕ ರೋಹಿತ್ ಪವಾರ್ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಹೆಸರಿನಲ್ಲಿ ನಕಲಿ ಆಧಾರ್ ಕಾರ್ಡ್ ತಯಾರಿಸುವುದನ್ನು ಮತ್ತು ನಕಲಿ ಮತದಾರರನ್ನು ನೋಂದಾಯಿಸಲು ಅದರ ಬಳಕೆಯನ್ನು ತೋರಿಸಿದ್ದು ಮುಂಬೈ ಪೊಲೀಸರು ಅಪರಿಚಿತ ವ್ಯಕ್ತಿಗಳ ವಿರುದ್ಧ ಎಫ್‌ಐಆರ್ ದಾಖಲಿಸಿದ್ದಾರೆ. ಅ. 16 ರಂದು ಪತ್ರಿಕಾಗೋಷ್ಠಿಯಲ್ಲಿ ಪವಾರ್ ಅವರು, ವೆಬ್‌ಸೈಟ್‌ನಲ್ಲಿ ನಕಲಿ ಆಧಾರ್ ಕಾರ್ಡ್‌ಗಳನ್ನು ಹೇಗೆ ತಯಾರಿಸಲಾಗುತ್ತಿದೆ ಮತ್ತು ನಕಲಿ ಮತದಾರರನ್ನು ನೋಂದಾಯಿಸಲು ಬಳಸಲಾಗುತ್ತಿದೆ ಎಂಬುದನ್ನು ಪ್ರದರ್ಶಿಸಿದ್ದರು.

ಬಿಜೆಪಿಯ ಸಾಮಾಜಿಕ ಮಾಧ್ಯಮ ಕೋಶದ ಸಹ-ಸಂಚಾಲಕ ಧನಂಜಯ್ ವಾಗಸ್ಕರ್ ಅವರು ಯೂಟ್ಯೂಬ್ ಚಾನೆಲ್‌ನಲ್ಲಿ ಈ ವಿಷಯವನ್ನು ವೀಕ್ಷಿಸಿದ್ದರು, ಅದರಲ್ಲಿ ಅವರ ಪಕ್ಷದ ಪದಾಧಿಕಾರಿಯ ವಿರುದ್ಧವೂ ಆರೋಪಗಳನ್ನು ಮಾಡಲಾಗಿದೆ.ಇದನ್ನು ಗಂಭೀರವಾಗಿ ಪರಿಗಣಿಸಿದ ವಾಗಸ್ಕರ್ ವೆಬ್‌ಸೈಟ್‌ನ ಗುರುತಿಸಲಾಗದ ಸೃಷ್ಟಿಕರ್ತ, ಮಾಲೀಕರು ಮತ್ತು ಬಳಕೆದಾರರು ಮತ್ತು ಇತರರ ವಿರುದ್ಧ ಪೊಲೀಸ್ ದೂರು ದಾಖಲಿಸಿದ್ದಾರೆ ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಎಫ್‌ಐಆರ್ ಪ್ರಕಾರ, ಭಾರತದಲ್ಲಿನ ಸ್ವಾಯತ್ತ ಸಂಸ್ಥೆ ಮತ್ತು ಅವರ ಪಕ್ಷದ ವಿರುದ್ಧ ಸಾರ್ವಜನಿಕರಲ್ಲಿ ಕೋಪ ಮತ್ತು ದ್ವೇಷವನ್ನು ಪ್ರಚೋದಿಸುವ ಮೂಲಕ ಸಾಮಾಜಿಕ ಭದ್ರತೆಗೆ ಅಪಾಯ ಉಂಟುಮಾಡುವ ರಾಜಕೀಯ ನಾಯಕನಿಂದ ವಂಚನೆಯ ಕೃತ್ಯ ಎಸಗಲಾಗಿದೆ ಎಂದು ದೂರುದಾರರು ಹೇಳಿದ್ದಾರೆ.




**48 ಲಕ್ಷ ಮತದಾರರು ಸೇರ್ಪಡೆ**

ನಕಲಿ ವೆಬ್‌ಸೈಟ್ ಮೂಲಕ ನಕಲಿ ಆಧಾರ್ ಕಾರ್ಡ್‌ಗಳನ್ನು ಸೃಷ್ಟಿಸುವ ಮೂಲಕ, ಸಮಾಜದಲ್ಲಿ ಎರಡು ಗುಂಪುಗಳ ನಡುವೆ ದಾರಿತಪ್ಪಿಸುವ ಮತ್ತು ವೈಷಮ್ಯ ಮತ್ತು ದ್ವೇಷವನ್ನು ಸೃಷ್ಟಿಸುವ ಪ್ರಯತ್ನ ನಡೆದಿದೆ ಎಂದು ಅವರು ಆರೋಪಿಸಿದ್ದಾರೆ. ದೂರಿನ ಆಧಾರದ ಮೇಲೆ, ಇಲ್ಲಿನ ಸೈಬರ್ ಪೊಲೀಸರು ಇಬ್ಬರು ಅಪರಿಚಿತ ವ್ಯಕ್ತಿಗಳ ವಿರುದ್ಧ ಭಾರತೀಯ ನ್ಯಾಯ ಸಂಹಿತಾ ವಿಭಾಗಗಳ ಅಡಿಯಲ್ಲಿ ನಕಲಿ, ಗುರುತಿನ ಕಳ್ಳತನ, ಸುಳ್ಳು ಮಾಹಿತಿ ಪ್ರಸಾರ ಮತ್ತು ಮಾಹಿತಿ ತಂತ್ರಜ್ಞಾನ ಕಾಯ್ದೆಯ ನಿಬಂಧನೆಗಳ ಅಡಿಯಲ್ಲಿ ಪ್ರಕರಣ ದಾಖಲಿಸಿದ್ದಾರೆ ಎಂದು ಅವರು ಹೇಳಿದರು.


ಕಳೆದ ವರ್ಷ ನಡೆದ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ ನೇತೃತ್ವದ ಮಹಾಯುತಿಯ ಪ್ರತಿಕೂಲ ಫಲಿತಾಂಶಗಳ ನಂತರ, ನಕಲಿ ಮತದಾರರ ನೋಂದಣಿ, ನಿಜವಾದ ಮತದಾರರ ಸಾಮೂಹಿಕ ಅಳಿಸುವಿಕೆ ಮತ್ತು ಮತದಾರರ ಡಬಲ್ ನೋಂದಣಿಯಂತಹ ದುಷ್ಕೃತ್ಯಗಳು ನಡೆದಿವೆ ಎಂದು ರೋಹಿತ್ ಪವಾರ್ ಅಕ್ಟೋಬರ್ 16 ರಂದು ಆರೋಪಿಸಿದ್ದರು. ಅನುಕೂಲಕರ ಮತದಾರರನ್ನು ಸತ್ತವರು ಎಂದು ತೋರಿಸಲಾಗಿದೆ ಮತ್ತು ಸತ್ತ ವ್ಯಕ್ತಿಗಳ ಹೆಸರಿನಲ್ಲಿ ನಕಲಿ ಮತದಾನ ನಡೆದಿದೆ ಎಂದು ಪವಾರ್ ಹೇಳಿದ್ದಾರೆ. 2019 ಮತ್ತು 2024 ರ ಲೋಕಸಭಾ ಚುನಾವಣೆಯ ನಡುವೆ, 32 ಲಕ್ಷ ಮತದಾರರನ್ನು ಸೇರಿಸಲಾಯಿತು, ಇದು ವರ್ಷಕ್ಕೆ 6.5 ಲಕ್ಷ ಮತದಾರರು ಅಥವಾ ತಿಂಗಳಿಗೆ 54,000 ಮತದಾರರ ಸೇರ್ಪಡೆಗೆ ಸಮನಾಗಿತ್ತು. ಆದರೆ 2024 ರ ಲೋಕಸಭಾ ಚುನಾವಣೆ ಮತ್ತು ಮಹಾರಾಷ್ಟ್ರ ವಿಧಾನಸಭಾ ಚುನಾವಣೆಯ ನಡುವೆ, ಕೇವಲ ಆರು ತಿಂಗಳಲ್ಲಿ 48 ಲಕ್ಷ ಮತದಾರರು ಸೇರ್ಪಡೆಯಾಗಿದ್ದಾರೆ ಎಂದು ಎನ್‌ಸಿಪಿ (ಎಸ್‌ಪಿ) ನಾಯಕ ಹೇಳಿದ್ದರು.

## ರಾಹುಲ್, ತೇಜಸ್ವಿ ನಡುವೆ ಎಣ್ಣೆ ಸೀಗೆಕಾಯಿ ಸಂಬಂಧ; ನರೇಂದ್ರ ಮೋದಿ ಬಿಚ್ಚಿಟ್ಟರು ಅಸಲಿ ಅನುಬಂಧ

# ವಿಪಕ್ಷ ಮಹಾಘಟ ಬಂಧನ್ ಮೈತ್ರಿಕೂಟದ ವಿರುದ್ಧ ಮೋದಿ ವಾಗ್ದಾಳಿ

**ಭರ್ಜರಿ ಚುನಾವಣಾ ಪ್ರಚಾರ**

**ಮುಜಫರ್‌ಪುರ್:** ಈ ಬಾರಿಯ ಬಿಹಾರ ವಿಧಾನಸಭೆ ಚುನಾವಣೆ, ರಾಜಕೀಯ ನಾಯಕರ ನಡುವಿನ ರಂಗುರಂಗಿನ ಹೇಳಿಕೆಗಳಿಗೆ ವೇದಿಕೆ ಒದಗಿಸಿದೆ. ಒಬ್ಬರ ಬಗ್ಗೆ ಇನ್ನೊಬ್ಬರು ನೀಡುತ್ತಿರುವ ಹೇಳಿಕೆಗಳು ಕೇವಲ ರಾಜಕೀಯ ಮನರಂಜನೆಯನ್ನಷ್ಟೇ ಅಲ್ಲ, ಬದಲಿಗೆ ಬಿಹಾರ ಮತದಾರರ ಮೇಲೂ ಪರಿಣಾಮ ಬೀರುತ್ತಿದೆ. ಮತಗಳಿಗಾಗಿ ಪ್ರಧಾನಿ ಮೋದಿ ಡ್ಯಾನ್ಸ್ ಮಾಡಲೂ ಸಿದ್ಧ ಎಂಬ ರಾಹುಲ್ ಗಾಂಧಿ ಹೇಳಿಕೆಗೆ ತಿರುಗೇಟು ನೀಡಿರುವ ಪ್ರಧಾನಿ ಮೋದಿ, ನನ್ನ ಮೇಲೆ ವೈಯಕ್ತಿಕ ದಾಳಿ ನಡೆಸುವುದು ವಿಪಕ್ಷ ನಾಯಕರ ದೈನಂದಿನ ಕಾರ್ಯವಾಗಿದೆ ಎಂದು ತಿರುಗೇಟು ನೀಡಿದ್ದಾರೆ. ಬಿಹಾರದ ಮುಜಫರ್‌ಪುರ್‌ನಲ್ಲಿ ಎನ್‌ಡಿಎ ಚುನಾವಣಾ ಪ್ರಚಾರ ಸಭೆಯನ್ನುದ್ದೇಶಿಸಿ ಮಾತನಾಡಿದ ಪ್ರಧಾನಿ ಮೋದಿ, ತೇಜಸ್ವಿ ಯಾದವ್ ಮತ್ತು ರಾಹುಲ್ ಗಾಂಧಿ ವಿರುದ್ಧ ತೀವ್ರ ವಾಗ್ದಾಳಿ ನಡೆಸಿದರು. ಮಹಾಘಟ ಬಂಧನ್ ಮೈತ್ರಿಕೂಟ ಕೇವಲ ಅಧಿಕಾರದ ಆಸೆಗೆ ಜೋತು ಬಿದ್ದಿದೆ ಎಂದು ಆರೋಪಿಸಿರುವ ಪ್ರಧಾನಿ ಮೋದಿ, ಅಧಿಕಾರಕ್ಕಾಗಿ ಒಂದಾಗಿರುವವರ ನಡುವೆ ಪರಸ್ಪರ ದ್ವೇಷ ಮನೆ ಮಾಡಿದೆ ಎಂದು ಕಿಡಿಕಾರಿದ್ದಾರೆ. ಆರ್‌ಜೆಡಿ ನಾಯಕ ತೇಜಸ್ವಿ ಯಾದವ್, ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ನಡುವೆ ಎಣ್ಣೆ-ಸೀಗೆಕಾಯಿ ಸಂಬಂಧವಿದೆ ಎಂದು ಹೇಳುವ ಮೂಲಕ, ಪ್ರಧಾನಿ ಮೋದಿ ಅವರು ಇಬ್ಬರೂ ನಾಯಕರು ಪರಸ್ಪರರನ್ನು ದ್ವೇಷಿಸುತ್ತಾರೆ ಎಂದು ಹೇಳಿದರು.



ತಮ್ಮ ಭಾಷಣದುದ್ದಕ್ಕೂ ತೇಜಸ್ವಿ ಯಾದವ್ ಮತ್ತು ರಾಹುಲ್ ಗಾಂಧಿ ವಿರುದ್ಧ ತೀವ್ರ ವಾಗ್ದಾಳಿ ನಡೆಸಿದ ಪ್ರಧಾನಿ ಮೋದಿ, ಭ್ರಷ್ಟಾಚಾರದ ಯುವರಾಜರು ಬಿಹಾರದಲ್ಲಿ ಸುಳ್ಳು ಭರವಸೆಗಳ ಅಂಗಡಿ ತೆರೆದಿದ್ದಾರೆ ಎಂದು ತರಾಟೆಗೆ ತೆಗೆದುಕೊಂಡಿದ್ದಾರೆ. ಮಹಾಘಟಬಂಧನ್ ಮೈತ್ರಿಕೂಟದ ಚುನಾವಣಾ ಪ್ರಣಾಳಿಕೆಯನ್ನು ಸುಳ್ಳಿನ ಸೌಧ ಎಂದು ಕರೆದಿರುವ ಪ್ರಧಾನಿ ಮೋದಿ, ಈಡೇರಿಸಲಾಗದ ಭರವಸೆಗಳ ಬಗ್ಗೆ ಬಿಹಾರದ ಮತದಾರರಿಗೆ ಯಾವುದೇ ಒಲವಿಲ್ಲ ಎಂದು ಅಭಿಪ್ರಾಯಪಟ್ಟರು.

ತೇಜಸ್ವಿ ಯಾದವ್, ರಾಹುಲ್ ಗಾಂಧಿ ಸೇರಿದಂತೆ ಮಹಾಘಟ ಬಂಧನ್ ಮೈತ್ರಿಕೂಟದ ನಾಯಕರಿಗೆ, ನನ್ನನ್ನು ವೈಯಕ್ತಿಕವಾಗಿ ನಿಂದಿಸುವುದು ಎಂದರೆ ಬಹಳ ಇಷ್ಟ. ಈ ಹಿಂದೆ ಸ್ವರ್ಗದಲ್ಲಿರುವ ನನ್ನ ತಾಯಿಯ ಬಗ್ಗೆ ಕೀಳು ಮಟ್ಟದ AI ವಿಡಿಯೋ ಮಾಡಿದ್ದ ವಿಪಕ್ಷಗಳು, ಈಗ ಭಾರತೀಯ ಜಾನಪದ ಸಂಸ್ಕೃತಿಯನ್ನು ಗೌರವಿಸಲು ನಾನು ಹಾಕಿದ ಎರಡು ಹೆಜ್ಜೆಗಳನ್ನು ಅಣಕಿಸುತ್ತಿವೆ. ಬಿಹಾರದ ಮತದಾರ ವಿಪಕ್ಷ ನಾಯಕರ ದರ್ಪದ ವರ್ತನೆಯನ್ನು ಸೂಕ್ಷ್ಮವಾಗಿ ಗಮನಿಸುತ್ತಿದ್ದಾನೆ ಎಂದು ಪ್ರಧಾನಿ ಮೋದಿ ಎಚ್ಚರಿಸಿದರು.

ಒಟ್ಟಿನಲ್ಲಿ ರಾಹುಲ್ ಗಾಂಧಿ ಅವರ ಡ್ಯಾನ್ಸ್ ಹೇಳಿಕೆಗೆ ತಮ್ಮದೇ ಶೈಲಿಯಲ್ಲಿ ತಿರುಗೇಟು ನೀಡಿರುವ ಪ್ರಧಾನಿ ಮೋದಿ, ಮಹಾಘಟ ಬಂಧನ್ ಮೈತ್ರಿಕೂಟವೇ ದ್ವೇಷದ ತಳಹದಿಯ ಮೇಲೆ ನಿಂತಿದೆ ಎಂದು ಹೇಳುವ ಮೂಲಕ ಬಿಹಾರದ ಮತದಾರರ ಮನಗೆಲ್ಲಲು ಪ್ರಯತ್ನಿಸಿದ್ದಾರೆ.

**ಸೀಟು ಹಂಚಿಕೆ ವಿಚಾರವಾಗಿ ಆರ್‌ಜೆಡಿ ಮತ್ತು ಕಾಂಗ್ರೆಸ್ ನಡುವೆ ತಿಕ್ಕಾಟವಿದೆ. ಎರಡೂ ಪಕ್ಷಗಳು ಬಹಿರಂಗವಾಗಿ ಎಷ್ಟೇ ಅನ್ಯೋನ್ಯತೆಯನ್ನು ಪ್ರದರ್ಶಿಸಿದರೂ, ಆಂತರಿಕವಾಗಿ ಇಬ್ಬರಿಗೂ ಒಬ್ಬರನ್ನು ಕಂಡರೆ ಒಬ್ಬರಿಗೆ ಆಗುವುದಿಲ್ಲ. ಈ ಬಾರಿಯ ಬಿಹಾರ ವಿಧಾನಸಭೆ ಚುನಾವಣೆ ಎನ್‌ಡಿಎ vs ಮಹಾಘಟ ಬಂಧನ್ ಮಾತ್ರವಾಗಿರದೇ ಮಹಾಘಟ ಬಂಧನ್ vs ಮಹಾಘಟ ಬಂಧನ್ ಕೂಡ ಆಗಿದೆ.**

**- ನರೇಂದ್ರ ಮೋದಿ, ಪ್ರಧಾನಿ**

**ರಾಹುಲ್ ಗಾಂಧಿಗೆ ಮೋದಿ ತಿರುಗೇಟು**

**ಮತಗಳಿಕೆಗಾಗಿ ವೇದಿಕೆ ಮೇಲೆ ಪ್ರಧಾನಮಂತ್ರಿ ನರೇಂದ್ರ ಮೋದಿ ನೃತ್ಯ ಮಾಡಲೂ ತಯಾರಿರುತ್ತಾರೆ ಎಂಬ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರ ಹೇಳಿಕೆಗೆ, ಖುದ್ದು ಪ್ರಧಾನಿ ಮೋದಿ ತಿರುಗೇಟು ನೀಡಿದ್ದಾರೆ. ರಾಹುಲ್ ಗಾಂಧಿ ಚುನಾವಣಾ ಪ್ರಚಾರ ನಡೆಸಿದ್ದ ಮುಜಫರ್‌ಪುರ್‌ನಲ್ಲೇ ಚುನಾವಣಾ ಪ್ರಚಾರ ನಡೆಸಿದ ಪ್ರಧಾನಿ ಮೋದಿ, ಕೇವಲ ಅಧಿಕಾರಕ್ಕಾಗಿ ಒಂದಾಗಿರುವ ಮಹಾಘಟ ಬಂಧನ್ ನಾಯಕರಾದ ತೇಜಸ್ವಿ ಯಾದವ್ ಮತ್ತು ರಾಹುಲ್ ಗಾಂಧಿ ನಡುವೆ ತೀವ್ರ ವೈಮನಸ್ಸು ಇದೆ ಎಂದು ಹೇಳಿದ್ದಾರೆ.**

# ಟೆನ್ಷನ್‌ಗೆ ಬೈ ಬೈ ಕಾಮಿಡಿಗೆ ಜೈ ಜೈ!



ಜೀ ಕನ್ನಡ ಈಗ ಎಲ್ಲರ ಅಚ್ಚುಮೆಚ್ಚಿನ ನಾನ್-ಫಿಕ್ಷನ್ ಶೋ ಕಾಮಿಡಿ ಖಿಲಾಡಿಗಳನ್ನು ಮತ್ತೆ ತಂದಿದೆ.

ಇಡೀ ರಾಜ್ಯವನ್ನೇ ನಗಿಸಿದ ಯಶಸ್ವಿ ಸೀಸನ್‌ಗಳನ್ನು ನೀಡಿದ ನಂತರ, ಕಾಮಿಡಿಯನ್ನು ಮತ್ತಷ್ಟು ಉನ್ನತ ಮಟ್ಟಕ್ಕೆ ಕೊಂಡೊಯ್ಯಲು ವಾಹಿನಿ ಸಿದ್ಧವಾಗಿದೆ. ಇನ್ನು ಎಲ್ಲರೂ ಕಾತುರತೆಯಿಂದ ಕಾಯುತ್ತಿರುವ ಕಾಮಿಡಿ ಕಿಲಾಡಿಗಳು ಇದೇ 25 ರಿಂದ ರಾತ್ರಿ 9 ಗಂಟೆಗೆ ಶುರುವಾಗಲಿದೆ. ಪ್ರತಿ ವಾರಾಂತ್ಯದಲ್ಲಿ ಜೀ ಕನ್ನಡದಲ್ಲಿ ಪ್ರಸಾರವಾಗುವ ಶೋ ನಿರೂಪಣೆ ನಿರಂಜನ್ ದೇಶಪಾಂಡೆ ಅವರದು. ನಗುವಿನ ಪಯಣದ ಸಾರಥಿಗಳಾಗಿ ಜಗ್ಗೇಶ್ ನಿರ್ದೇಶಕ ಯೋಗರಾಜ್ ಭಟ್, ನಟಿ ತಾರಾ ಅನುರಾಧ ಇರಲಿದ್ದಾರೆ. ಈ ಶೋನಲ್ಲಿ ಕರ್ನಾಟಕದ ವಿವಿಧ ಭಾಗಗಳಿಂದ ಪ್ರತಿಭಾನ್ವಿತ ನವಹಾಸ್ಯನಟರು ಪಾಲ್ಗೊಳ್ಳಲಿದ್ದು, ಪ್ರೇಕ್ಷಕರನ್ನು ನಗೆಗಡಲಿನಲ್ಲಿ ತೇಲಿಸಲಿದ್ದಾರೆ. ಹಾಸ್ಯಮಯ, ಪ್ರೇಕ್ಷಕರನ್ನು ನಗೆಗಡಲಲ್ಲಿ ತೇಲಿಸುವ ನೂತನ ಸ್ಕಿಟ್ ಗಳನ್ನೂ ಈ ಪ್ರತಿಭೆಗಳು ಪ್ರದರ್ಶಿಸಲಿದ್ದಾರೆ. ಈ ಸೀಸನ್ ನ ಕಾಮಿಡಿ ಕಿಲಾಡಿಗಳು ಕ್ರಿಯೇಟಿವಿಟಿ ಮತ್ತು ಹೊಸತನದ ಪ್ರತಿರೂಪವಾಗಿದೆ. ಇನ್ನು ಪ್ರತಿಸಂಚಿಕೆಯಲ್ಲೂ ಹಾಸ್ಯ,ತರಲೆ ಇರಲಿದೆ.


# ಈ ವಾರ ತೆರೆಗೆ ಬಹು ನಿರೀಕ್ಷಿತ ಬ್ಯಾಟ್

ಡಾಲ್ಫಿನ್ ಎಂಟರ್ಟೈನ್ಮೆಂಟ್ ಲಾಂಛನದಲ್ಲಿ ಮಂಜುನಾಥ್ ಕಂದಕೂರ್ ನಿರ್ಮಿಸಿರುವ, ಶಶಾಂಕ್ ನಿರ್ದೇಶನದ ಡಾರ್ಲಿಂಗ್ ಕೃಷ್ಣ ನಾಯಕನಾಗಿ ನಟಿಸಿರುವ ಬಹು ನಿರೀಕ್ಷಿತ ಬ್ಯಾಟ್ ಚಿತ್ರ ಈ ವಾರ ಅಕ್ಟೋಬರ್ 31 ರಂದು ರಾಜ್ಯಾದ್ಯಂತ ಅದ್ದೂರಿಯಾಗಿ ಬಿಡುಗಡೆಯಾಗುತ್ತಿದೆ.

ಯಶಸ್ವಿಕೌಸಲ್ಯ ಸುಪ್ರಜಾ ರಾಮ ಚಿತ್ರದ ನಂತರ ಶಶಾಂಕ್ ಹಾಗೂ ಡಾರ್ಲಿಂಗ್ ಕೃಷ್ಣ ಕಾಂಬಿನೇಶನ್‌ನಲ್ಲಿ ಮೂಡಿ ಬಂದಿರುವ ಬ್ಯಾಟ್ ಚಿತ್ರ ಆರಂಭದಿಂದಲೂ ಸಾಕಷ್ಟು ಸದ್ದು ಮಾಡುತ್ತಿದೆ. ಅರ್ಜುನ್ ಜನ್ಯ ಸಂಗೀತ ನೀಡಿರುವ ಈ ಚಿತ್ರದ ಹಾಡುಗಳು ಆನಂದ್ ಆಡಿಯೋ ಮೂಲಕ ಬಿಡುಗಡೆಯಾಗಿದ್ದು, ಜನರ ಮನ ಗೆದ್ದಿದೆ. ಟೀಸರ್ ಹಾಗೂ ಟ್ರೇಲರ್‌ಗೂ ಮೆಚ್ಚುಗೆಯ ಮಹಾಪೂರವೇ ಹರಿದು ಬಂದಿದೆ. ಕೃಷ್ಣ ಅವರ ಲುಕ್‌ಗೆ ಅಭಿಮಾನಿಗಳು ಫಿದಾ ಆಗಿದ್ದಾರೆ. ಚಿತ್ರವನ್ನು ತೆರೆಯ ಮೇಲೆ ನೋಡುವ ಕಾತುರದಲ್ಲಿದ್ದಾರೆ.

ಫಸ್ಟ್ ರಾಜು ಚಿತ್ರದ ನಂತರ ಮಂಜುನಾಥ್ ವಿ ಕಂದಕೂರ್ ಈ ಚಿತ್ರವನ್ನು ನಿರ್ಮಾಣ ಮಾಡಿದ್ದಾರೆ. ಡಾರ್ಲಿಂಗ್ ಕೃಷ್ಣ ಅವರಿಗೆ ನಾಯಕಿಯಾಗಿ ಮನಿಶಾ ಕಂದಕೂರ್ ನಟಿಸಿದ್ದಾರೆ. ಅಚ್ಯುತಕುಮಾರ್,ಮಾನಸಿ ಸುಧೀರ್ ರಮೇಶ್ ಇಂದಿರಾ, ಡ್ರ್ಯಾಗನ್ ಮಂಜು ಮುಂತಾದವರು ಚಿತ್ರದ ತಾರಾಬಳಗದಲ್ಲಿದ್ದಾರೆ.

ಅರ್ಜುನ್ ಜನ್ಯ ಸಂಗೀತ ನಿರ್ದೇಶನ, ಅಭಿಲಾಶ್ ಕಲ್ಲತ್ತಿ ಛಾಯಾಗ್ರಹಣ, ಗಿರಿ ಮಹೇಶ್ ಸಂಕಲನ ಹಾಗೂ ಮಾಸ್ ಮಾದ ಅವರ ಸಾಹಸ ನಿರ್ದೇಶನ ಬ್ಯಾಟ್ ಚಿತ್ರಕ್ಕಿದೆ.



# ಸೆಟ್ಟೇರಿದ ಹಲ್ಕಾ ಡಾನ್



ಕೆಪಿ ಶ್ರೀಕಾಂತ್ ಇದೀಗ ಹೊಸ ಸಿನಿಮಾ ಘೋಷಣೆ ಮಾಡಿದ್ದಾರೆ. ವೀನಸ್ ಎಂಟರ್‌ಟೈನರ್ ಬ್ಯಾನರ್ ಅಡಿಯಲ್ಲಿ ಮೂಡಿ ಬರ್ತಿರುವ ನಾಲ್ಕನೇ ಚಿತ್ರಕ್ಕೆ ಹಲ್ಕಾ ಡಾನ್ ಎಂಬ ಶೀರ್ಷಿಕೆ ಇಡಲಾಗಿದೆ.ಶುಕ್ರವಾರ ಚಿತ್ರದ ಮುಹೂರ್ತ ಸಮಾರಂಭ ನಡೆದಿದೆ. ಶಿವಣ್ಣ ದಂಪತಿ, ಸುದೀಪ್, ರಚಿತಾ ರಾಮ್, ದುನಿಯಾ ವಿಜಯ್, ವಿನಯ್ ರಾಜ್ ಕುಮಾರ್, ನಿರ್ದೇಶಕ ಆರ್ ಚಂದ್ರು, ಸೇರಿದಂತೆ ಸೇರಿದಂತೆ ಹಲವು ಗಣ್ಯರು ಹಾಜರಾಗಿ ಶುಭ ಕೋರಿದ್ದಾರೆ.

ಇದೇ ವೇಳೆ ಚಿತ್ರರಂಗದಲ್ಲಿ 50 ವರ್ಷ ಪೂರೈಸಿದ ಸಾಯಿ ಕುಮಾರ್ ಅವರನ್ನು ಚಿತ್ರತಂಡ ಸನ್ಮಾನಿಸಿದೆ.



ಕಿಚ್ಚ ಸುದೀಪ್ ಚಿತ್ರಕ್ಕೆ ಕ್ಲ್ಯಾಪ್ ಮಾಡಿದರು.

ಗೀತ ಹಾಗೂ ರಚಿತಾ ರಾಮ್ ಕ್ಯಾಮೆರಾಗೆ ಚಾಲನೆ ಕೊಟ್ಟರು. ಶಿವಣ್ಣ ಮೊದಲ ದೃಶ್ಯಕ್ಕೆ ಆಕ್ಷನ್ ಕಟ್ ಹೇಳಿದರು. ರತ್ನನ್ ಪ್ರಪಂಚ ಖ್ಯಾತಿಯ ಪ್ರಮೋದ್ ನಾಯಕನಾಗಿ, ಅಮೃತಾ ಅಯ್ಯಂಗಾರ್ ನಾಯಕಿಯಾಗಿ ಚಿತ್ರದಲ್ಲಿ ನಟಿಸುತ್ತಿದ್ದಾರೆ. ಸಾಯಿಕುಮಾರ್ ಕೂಡ ಪ್ರಮುಖ ಪಾತ್ರದಲ್ಲಿ ಬಣ್ಣ ಹಚ್ಚಿದ್ದಾರೆ. ರಮೇಶ್ ಇಂದಿರಾ, ಜ್ಯೋತಿ ರೈ ತಾರಾಬಳಗದಲ್ಲಿದ್ದಾರೆ. ಬಳಿಕ ದುನಿಯಾ ವಿಜಯ್ ಮಾತನಾಡಿ, ಶ್ರೀಕಾಂತ್ ಮೇಲೆ ಪ್ರೀತಿ, ಕೋಪ ಎರಡು ಇದೆ. ಸಿನಿಮಾ ಮಾಡದೇ ಇದ್ದಾಗ ಕೋಪ, ಮಾಡಿದಾಗ ಖುಷಿ ಇರುತ್ತದೆ. ನಾನು ಒಂದು ಹಂತದಿಂದ ದೊಡ್ಡ ಮಟ್ಟಕ್ಕೆ ಹೋಗಲು ಕಾರಣ ಶ್ರೀಕಾಂತ್ ಬ್ಯಾನರ್, ಸಲಗ ಸಿನಿಮಾ ಬಳಿಕ ಭೀಮ ಸಿನಿಮಾ. ನನಗೆ ಮತ್ತೊಂದು ಜನ್ಮ ಕೊಟ್ಟ ಪ್ರೊಡಕ್ಷನ್ ಹೌಸ್. ಹಲ್ಕಾ ಡಾನ್ ಸಿನಿಮಾ ಸೂಪರ್ ಹಿಟ್ ಆಗಲಿ. ಈ ಚಿತ್ರದ ಕಾಂಬಿನೇಷನ್ ಸೂಪರ್ ಆಗಿದೆ. ಸತ್ಯ ಹೆಗ್ಡೆ ಹಾಗೂ ಸೂರಿ ಅವರನ್ನು ನಾನು ಯಾವತ್ತೂ ಮರೆಯುವ ಆಗಿಲ್ಲ. ಹರಿಕೃಷ್ಣ ಸೂಪರ್ ಹಿಟ್ ಹಾಡು ಕೊಟ್ಟವರು. ಗಾಂಧಿ ನಗರದಲ್ಲಿ ರೇಸ್ ಕುದುರೆಗಳ ಕರೆಕ್ಟ್ ಕುನ್ನಿಸ್ ಬಾಯಿ ಹಿಡಿಯುವವರು ಅಂದರೆ ಅದು ಶ್ರೀಕಾಂತ್ . ರತ್ನನ್ ಪ್ರಪಂಚದಲ್ಲಿ ಪ್ರಮೋದ್ ಆಕ್ಟಿಂಗ್ ಚೆನ್ನಾಗಿ ಮಾಡಿದ್ದಾರೆ. ಇಡೀ ತಂಡಕ್ಕೆ ಒಳ್ಳೆಯದಾಗಲಿ ಎಂದರು. ನಿರ್ಮಾಪಕರಾದ ಶ್ರೀಕಾಂತ್ ಮಾತನಾಡಿ, ಹಲ್ಕಾ ಡಾನ್ ಸಿನಿಮಾದ ಮುಹೂರ್ತ ನೋಡಿದರೆ ಎಂಥ ಎನರ್ಜಿ ಬಂದಿದೆ ಎಂದರೆ ಮುಂದೆ ಶಿವಣ್ಣ ಹಾಗೂ ವಿಜಯ್ ಅವರ ಜೊತೆ ಸಿನಿಮಾ ಮಾಡುತ್ತೇನೆ. ಅವರಿಬ್ಬರ ಜೊತೆ ಹರಿಕೃಷ್ಣ ಮ್ಯೂಸಿಕ್ ಇರಲಿದೆ.

# ಸತ್ಯ ಪ್ರಕಾಶ್ ಜೊತೆ ಧೀರೆನ್ ಹೊಸ ಸಿನಿಮಾ

ಡಿ. ಸತ್ಯ ಪ್ರಕಾಶ್ ಕಥೆ, ಚಿತ್ರಕಥೆ, ಸಂಭಾಷಣೆ ಬರೆದು ಹೊಸ ಚಿತ್ರದ ನಿರ್ದೇಶನದ ಕಾರ್ಯ ಯೋಜನೆಯೊಂದಿಗೆ ಕಣಕಿಳಿದಿದ್ದಾರೆ. ಈ ಚಿತ್ರಕ್ಕಾಗಿ ಅವರು ನಾಯಕ ನಟ ''ಶಿವ 143 ಖ್ಯಾತಿಯ ಧೀರೆನ್'' ಅವರ ಜೊತೆ ಕೈ ಜೋಡಿಸಿದ್ದಾರೆ.

ನಿರ್ದೇಶಕ ''ಡಿ. ಸತ್ಯ ಪ್ರಕಾಶ್'' ಇಲ್ಲೂ ಕುತೂಹಲ ಹೆಚ್ಚಿಸುತ್ತಿದ್ದಾರೆ. ಪ್ರಸ್ತುತ ಹೊಸ ಚಿತ್ರದ ಹೆಚ್ಚುವರಿ ವಿವರಗಳನ್ನು ಅತಿ ಸಮೀಪದಲ್ಲೆ ನೀಡುವುದಾಗಿ ''ಆರ್.ವಿ ಮಲ್ಟಿ ಸಿನಿಸ್ ಕ್ರಿಯೇಟರ್ಸ್'' ಸಂಸ್ಥೆ ಹೇಳಿಕೊಂಡಿದೆ.



ಸಿನಿ ವಾಹಿನಿ

# ಕಿತ್ತೂರು ಉತ್ಸವದಲ್ಲಿ ಕಲ್ಟ್ ಹಾಡು

ಕಲ್ಟ್ ಚಿತ್ರದ ಎರಡನೇ ಹಾಡು ಕಿತ್ತೂರು ಉತ್ಸವದಲ್ಲಿ ಬಿಡುಗಡೆಯಾಗಿದೆ. ನಿರ್ದೇಶಕ ಅನಿಲ್ ಕುಮಾರ್ ಬರೆದ ಈ ಹಾಡನ್ನು ಚಂದನ್ ಶೆಟ್ಟಿ ಹಾಡಿದ್ದಾರೆ.

ಅರ್ಜುನ್ ಜನ್ಯ ಸಂಗೀತ ನೀಡಿದ್ದಾರೆ. ಆನಂದ್ ಆಡಿಯೋ ಯೂಟ್ಯೂಬ್ ಚಾನಲ್ ಮೂಲಕ ಬಿಡುಗಡೆಯಾಗಿರುವ ಈ ಹಾಡು ಅಧಿಕ ಸಂಖ್ಯೆಯಲ್ಲಿ ವೀಕ್ಷಣೆಯಾಗುತ್ತಿದೆ. ಜನವರಿ 23 ರಂದು ಕಲ್ಟ್ ಬಿಡುಗಡೆಯಾಗುತ್ತಿದೆ.



ಹಾಡು ಬಿಡುಗಡೆ ಸಮಾರಂಭದ ನಂತರ ನಾಯಕಹಾಗೂ ನಾಯಕಿ ಮಾತನಾಡಿದರು. ಕಿತ್ತೂರು ಉತ್ಸವಕ್ಕೆ ನಾನು ಇದೇ ಮೊದಲ ಬಾರಿ ಬಂದಿರುವುದು. ಇಲ್ಲಿಗೆ ಬಂದು ಬಹಳ ಖುಷಿಯಾಗಿದೆ ಎಂದರು ನಾಯಕ.. ನಾನು ದಾವಣಗೆರೆ ಹುಡುಗಿ. ನನ್ನ ನಟನೆಯ ಆರಂಭದ ದಿನಗಳಿಂದಲೂ ತಾವೆಲ್ಲಾ



ತೋರುತ್ತಿರುವ ಪ್ರೋತ್ಸಾಹಕ್ಕೆ ಚಿರ ಋಣಿ. ಎಂದರು ನಾಯಕಿ ಮಲೈಕಾ. ಕೆ.ವಿ.ಎನ್ ಪ್ರೊಡಕ್ಷನ್ಸ್ ಅರ್ಪಿಸುವ, ಲೋಕಿ ಸಿನಿಮಾಸ್ ಲಾಂಛನದಲ್ಲಿ ನಿರ್ಮಾಣವಾಗುತ್ತಿರುವ ಕಲ್ಟ್ ಚಿತ್ರದ ರಚನೆ ಹಾಗೂ ನಿರ್ದೇಶನ ಅನಿಲ್ ಕುಮಾರ್ ಅವರದು. ಜೆ.ಎಸ್ ವಾಲಿ ಛಾಯಾಗ್ರಹಣ, ಅರ್ಜುನ್ ಜನ್ಯ ಸಂಗೀತ ನಿರ್ದೇಶನ, ಕೆ.ಎಂ.ಪ್ರಕಾಶ್ ಸಂಕಲನ ಹಾಗೂ ರವಿವರ್ಮ ಅವರ ಸಾಹಸ ನಿರ್ದೇಶನ ಈ ಚಿತ್ರಕ್ಕಿದೆ.

# ಪ್ರಮುಖ ಬದಲಾವಣೆಗೆ ಮುಂದಾದ ಬಿಸಿಸಿಐ

ಭಾರತ ಮತ್ತು ದಕ್ಷಿಣ ಆಫ್ರಿಕಾ ನಡುವಿನ ಗುವಾಹಟಿ ಟೆಸ್ಟ್ ಪಂದ್ಯದ ಸೆಷನ್ ಗಳಲ್ಲಿ ಬಿಸಿಸಿಐ ಮಹತ್ವದ ಬದಲಾವಣೆ ತಂದಿದೆ. ನವೆಂಬರ್ 22 ರಂದು ನಡೆಯುವ ಈ ಎರಡನೇ ಟೆಸ್ಟ್‌ನಲ್ಲಿ, ಮೊದಲ ಸೆಷನ್ ನಂತರ ಊಟದ ಬದಲು ಚಹಾ ವಿರಾಮ ನೀಡಲಾಗುವುದು. ಗುವಾಹಟಿಯಲ್ಲಿ ಬೇಗ ಸೂರ್ಯಾಸ್ತವಾಗುವುದರಿಂದ



ಭಾರತ-ಆಫ್ರಿಕಾ ಟೆಸ್ಟ್ ಸರಣಿ

ಈ ನಿರ್ಧಾರ ಕೈಗೊಳ್ಳಲಾಗಿದೆ. ಈ ಬದಲಾವಣೆ ರಣಜಿ ಟ್ರೋಫಿಯಲ್ಲೂ ಪ್ರಯೋಗಗೊಂಡಿತ್ತು.

ಭಾರತ ಮತ್ತು ದಕ್ಷಿಣ ಆಫ್ರಿಕಾ ನಡುವಿನ ಎರಡು ಟೆಸ್ಟ್ ಪಂದ್ಯಗಳ ಸರಣಿ ನವೆಂಬರ್ 14 ರಂದು ಆರಂಭವಾಗಲಿದೆ. ಮೊದಲ ಟೆಸ್ಟ್ ಪಂದ್ಯ ಕೋಲ್ಕತ್ತಾದ ಈಡನ್ ಗಾರ್ಡನ್ಸ್‌ನಲ್ಲಿ ನಡೆಯಲಿದೆ. ನಂತರ ಎರಡನೇ ಟೆಸ್ಟ್ ನವೆಂಬರ್ 22 ರಂದು ಗುವಾಹಟಿಯಲ್ಲಿ ಆರಂಭವಾಗಲಿದೆ. ಇದೀಗ ಈ ಪಂದ್ಯದ ಸೆಷನ್‌ಗಳಲ್ಲಿ ಪ್ರಮುಖ ಬದಲಾವಣೆ ಮಾಡಲು ಬಿಸಿಸಿಐ ಮುಂದಾಗಿದೆ. ಅಂದರೆ ಈ ಟೆಸ್ಟ್‌ನಲ್ಲಿ ಮೊದಲ ಸೆಷನ್ ನಂತರ ಊಟದ ಬದಲು ಚಹಾ ವಿರಾಮ ನೀಡಲು ಚಿಂತಿಸಲಾಗಿದೆ. ಇದಕ್ಕೆ ಕಾರಣವನ್ನು ಸಹ ಬಿಸಿಸಿಐ ವಿವರಿಸಿದೆ.

ವಾಸ್ತವವಾಗಿ ಟೆಸ್ಟ್ ಕ್ರಿಕೆಟ್‌ನಲ್ಲಿ ದಿನದಾಟ ಆರಂಭವಾದ ಬಳಿಕ ಮೊದಲ ಸೆಷನ್ ಅಂತ್ಯಕ್ಕೆ ಊಟದ ವಿರಾಮವನ್ನು ನೀಡಲಾಗುತ್ತದೆ. ಆ ಬಳಿಕ ಎರಡನೇ ಸೆಷನ್ ಆರಂಭವಾಗಲಿದ್ದು, ಈ ಸೆಷನ್ ಅಂತ್ಯಕ್ಕೆ ಚಹಾ ವಿರಾಮ ನೀಡಲಾಗುತ್ತದೆ. ನಂತರ ದಿನದಾಟದ ಕೊನೆಯ ಸೆಷನ್ ಅಂದರೆ ಮೂರನೇ ಸೆಷನ್ ಆರಂಭವಾಗುತ್ತದೆ. ಇದು ಟೆಸ್ಟ್ ಪಂದ್ಯಗಳಲ್ಲಿ ಸಾಮಾನ್ಯ ಅನುಕ್ರಮವಾಗಿದೆ. ಆದರೆ ನವೆಂಬರ್ 22 ರಿಂದ ಗುವಾಹಟಿಯಲ್ಲಿ ನಡೆಯಲಿರುವ ಭಾರತ ಮತ್ತು ದಕ್ಷಿಣ ಆಫ್ರಿಕಾ ನಡುವಿನ ಎರಡನೇ ಟೆಸ್ಟ್‌ನಲ್ಲಿ ಈ ಅನುಕ್ರಮವು ಬದಲಾಗಲಿದೆ. ಇಂಡಿಯನ್ ಎಕ್ಸ್‌ಪ್ರೆಸ್‌ನ ವರದಿಗಳ ಪ್ರಕಾರ, ಮೊದಲ ಸೆಷನ್ ಅಂತ್ಯಕ್ಕೆ ಊಟದ ಬದಲು ಚಹಾ ವಿರಾಮವನ್ನು ನೀಡಲಾಗುತ್ತದೆ.

ಗುವಾಹಟಿಯಲ್ಲಿ ಬೇಗನೇ ಸೂರ್ಯಾಸ್ತವಾಗುವುದು ಇದಕ್ಕೆ ಕಾರಣವಾಗಿದೆ. ಹೀಗಾಗಿ ಗುವಾಹಟಿಯ ಬರ್ಸಪರ ಕ್ರೀಡಾಂಗಣದಲ್ಲಿ ನಡೆಯಲಿರುವ ಎರಡನೇ ಟೆಸ್ಟ್‌ನ ಮೊದಲ ಸೆಷನ್ ಬೆಳಿಗ್ಗೆ 9 ರಿಂದ ಬೆಳಿಗ್ಗೆ 11 ರವರೆಗೆ ಇರಲಿದ್ದು, ನಂತರ ಬೆಳಿಗ್ಗೆ 11 ರಿಂದ ಬೆಳಿಗ್ಗೆ 11:20 ರವರೆಗೆ ಚಹಾ ವಿರಾಮವಿರುತ್ತದೆ. ಎರಡನೇ ಸೆಷನ್ ಬೆಳಿಗ್ಗೆ 11:20 ರಿಂದ ಆರಂಭವಾಗಿ ಮಧ್ಯಾಹ್ನ 1:20 ರವರೆಗೆ ನಡೆಯಲಿದೆ. ಊಟದ ವಿರಾಮ ಮಧ್ಯಾಹ್ನ 1:20 ರಿಂದ ಮಧ್ಯಾಹ್ನ 2 ರವರೆಗೆ ಇದ್ದರೆ, ಮೂರನೇ ಸೆಷನ್ ಮಧ್ಯಾಹ್ನ 2 ರಿಂದ ಸಂಜೆ 4 ರವರೆಗೆ ಇರುತ್ತದೆ. ಭಾರತದಲ್ಲಿ ಟೆಸ್ಟ್ ಪಂದ್ಯಗಳು ಸಾಮಾನ್ಯವಾಗಿ ಬೆಳಿಗ್ಗೆ 9:30 ಕ್ಕೆ ಪ್ರಾರಂಭವಾಗುತ್ತವೆ. 40 ನಿಮಿಷಗಳ ಊಟದ ವಿರಾಮ (ಬೆಳಿಗ್ಗೆ 11:30 ರಿಂದ ಮಧ್ಯಾಹ್ನ 12:10 ರವರೆಗೆ) ಇರುತ್ತದೆ. ಇದರ ನಂತರ, ಎರಡನೇ ಸೆಷನ್ ಪುನರಾರಂಭವಾಗುತ್ತದೆ. ಎರಡೂ ತಂಡಗಳು 20 ನಿಮಿಷಗಳ ಚಹಾ ವಿರಾಮವನ್ನು ತೆಗೆದುಕೊಳ್ಳುತ್ತವೆ (ಮಧ್ಯಾಹ್ನ 2:10 ರಿಂದ ಮಧ್ಯಾಹ್ನ 2:30 ರವರೆಗೆ). ಇದರ ನಂತರ ಮಧ್ಯಾಹ್ನ 2:30 ರಿಂದ ಸಂಜೆ 4:30 ರವರೆಗೆ ಮೂರನೇ ಸೆಷನ್ ಇರುತ್ತದೆ. ಪಂದ್ಯದ ಅಧಿಕಾರಿಗಳು ತಂಡಗಳಿಗೆ ದಿನಕ್ಕೆ 90 ಓವರ್‌ಗಳನ್ನು ಪೂರ್ಣಗೊಳಿಸಲು ಹೆಚ್ಚುವರಿ ಅರ್ಧ ಗಂಟೆ ನೀಡಬಹುದು. ಈ ಹಿಂದೆ, ಬಿಸಿಸಿಐ ಸೂರ್ಯಾಸ್ತವನ್ನು ಗಣನೆಗೆ ತೆಗೆದುಕೊಂಡು ರಣಜಿ ಟ್ರೋಫಿ ಪಂದ್ಯಗಳಿಗೂ ಸೆಷನ್ ಸಮಯದಲ್ಲಿ ಬದಲಾವಣೆ ಮಾಡಿತ್ತು.

# ಚೇತರಿಸಿಕೊಳ್ಳುತ್ತಿರುವ ಅಯ್ಯರ್

ಸಿಡ್ನಿಯಲ್ಲಿ ನಡೆದ ಆಸ್ಟ್ರೇಲಿಯಾ ವಿರುದ್ಧದ ಮೂರನೇ ಏಕದಿನ ಪಂದ್ಯದ ವೇಳೆ ಶ್ರೇಯಸ್ ಅಯ್ಯರ್ ಗಂಭೀರವಾಗಿ ಗಾಯಗೊಂಡಿದ್ದರು. ಹೀಗಾಗಿ ಅವರನ್ನು ಸಿಡ್ನಿಯಲ್ಲಿರುವ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಇದೀಗ ವೈದ್ಯರ ಮೇಲ್ವಿಚಾರಣೆಯಲ್ಲಿರುವ ಅಯ್ಯರ್ ಅವರು ತಮ್ಮ ಆರೋಗ್ಯದ ಬಗ್ಗೆ ಸೋಷಿಯಲ್ ಮೀಡಿಯಾದಲ್ಲಿ ಮಾಹಿತಿ ಹಂಚಿಕೊಂಡಿದ್ದಾರೆ. ಸಿಡ್ನಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಭಾರತ ಏಕದಿನ ತಂಡದ ಉಪನಾಯಕ ಶ್ರೇಯಸ್ ಅಯ್ಯರ್ ತನ್ನ ಆರೋಗ್ಯದ ಬಗ್ಗೆ ಮಾಹಿತಿ ನೀಡಿದ್ದಾರೆ. ಕಳೆದ ಕೆಲ ದಿನಗಳಿಂದ ಆಸ್ಪತ್ರೆಯಲ್ಲಿರುವ ಅಯ್ಯರ್, ಇದೀಗ ನಾನು ಚೇತರಿಕೆಯ ಹಂತದಲ್ಲಿದ್ದೇನೆ ಎಂದು ತಿಳಿಸಿದ್ದಾರೆ. ಈ ಬಗ್ಗೆ ಸೋಷಿಯಲ್ ಮೀಡಿಯಾ ಪೋಸ್ಟ್ ಹಂಚಿಕೊಂಡಿರುವ ಶ್ರೇಯಸ್ ಅಯ್ಯರ್, ನಾನು ಪ್ರಸ್ತುತ ಚೇತರಿಕೆಯ ಪ್ರಕ್ರಿಯೆಯಲ್ಲಿದ್ದೇನೆ ಮತ್ತು ದಿನ ಕಳೆದಂತೆ ಸುಧಾರಿಸುತ್ತಿದ್ದೇನೆ. ನಿಮ್ಮಿಂದ ದೊರೆತ ಎಲ್ಲಾ ರೀತಿಯ ಹಾರೈಕೆ ಮತ್ತು ಬೆಂಬಲಕ್ಕೆ ನಾನು ತುಂಬಾ ಕೃತಜ್ಞನಾಗಿದ್ದೇನೆ. ಇವೆಲ್ಲವೂ ನನ್ನ ಪಾಲಿಗೆ ಬಹಳ ಅರ್ಥಪೂರ್ಣ ವಿಷಯ. ನನ್ನನ್ನು ನಿಮ್ಮ ಆಲೋಚನೆಗಳಲ್ಲಿ ಇರಿಸಿಕೊಂಡಿದ್ದಕ್ಕಾಗಿ ಧನ್ಯವಾದಗಳು ಎಂದು ಶ್ರೇಯಸ್ ಇನ್‌ಸ್ಟಾಗ್ರಾಮ್‌ನಲ್ಲಿ ಬರೆದಿದ್ದಾರೆ. ಇದರೊಂದಿಗೆ ಶ್ರೇಯಸ್ ಅಯ್ಯರ್ ಅವರ ಆರೋಗ್ಯದ ಬಗ್ಗೆ ಮೂಡಿದ್ದ ಆತಂಕಗಳು ದೂರವಾಗಿದೆ. ಅಲ್ಲದೆ ಚೇತರಿಕೆಯು ಪ್ರಗತಿಯಲ್ಲಿರುವ ಕಾರಣ ಅವರು ಇನ್ನೊಂದು ವಾರದಲ್ಲಿ ಡಿಸ್ಚಾರ್ಜ್ ಆಗಿ ಭಾರತಕ್ಕೆ ಮರಳಬಹುದು. ಅಲ್ಲದೆ ಮುಂಬೈನಲ್ಲಿ ಚಿಕಿತ್ಸೆ ಮುಂದುವರೆಸುವ ಸಾಧ್ಯತೆಯಿದೆ.

**ಗಾಯಗೊಂಡಿದ್ದೇಗೆ:** ಸಿಡ್ನಿಯಲ್ಲಿ ನಡೆದ ಆಸ್ಟ್ರೇಲಿಯಾ ವಿರುದ್ಧದ ಮೂರನೇ ಏಕದಿನ ಪಂದ್ಯದ ವೇಳೆ ಹರ್ಷಿತ್ ರಾಣಾ ಅವರ ಎಸೆತದಲ್ಲಿ ಅಲೆಕ್ಸ್ ಕ್ಯಾರಿ ಭರ್ಜರಿ ಹೊಡೆತ ಬಾರಿಸಿದ್ದರು.

ಈ ವೇಳೆ ಬ್ಯಾಕ್‌ವರ್ಡ್ ಪಾಯಿಂಟ್‌ನಲ್ಲಿ ನಿಂತಿದ್ದ ಅಯ್ಯರ್ ವೇಗವಾಗಿ ಓಡಿ ಹೋಗಿ ಡೈವಿಂಗ್ ಕ್ಯಾಚ್ ಹಿಡಿದಿದ್ದರು.

ಈ ಡೈವಿಂಗ್ ವೇಳೆ ಅವರ ಎಡ ಪಕ್ಕೆಲುಬುಗಳಿಗೆ ಗಂಭೀರ ಪೆಟ್ಟಾಗಿದೆ. ಇದರಿಂದ ಅವರ ಪಕ್ಕೆಲುಬಿನ ಮೇಲ್ಭಾಗದ ಅಂಗದಲ್ಲಿ (ಗುಲ್ಮ) ಆಂತರಿಕ ರಕ್ತಸ್ರಾವವಾಗಿತ್ತು. ಇದರಿಂದಾಗಿ ಅವರು ಅಸ್ವಸ್ಥರಾಗಿದ್ದರು. ಸ್ಕ್ಯಾನಿಂಗ್ ರಿಪೋರ್ಟ್‌ನಲ್ಲಿ ಶ್ರೇಯಸ್ ಅಯ್ಯರ್ ಅವರ ಗುಲ್ಮದ ಭಾಗವು ಛಿದ್ರವಾಗಿರುವುದು ಕಂಡು ಬಂದಿದೆ. ಹೀಗಾಗಿ ಅವರನ್ನು ಇಂಟರ್ವೆನ್ಷನಲ್ ಟ್ರಾನ್ಸ್-ಕ್ಯಾತಿಟರ್ ಎಂಬೋಲೈಸೇಶನ್ ಚಿಕಿತ್ಸೆಗೆ ಒಳಪಡಿಸಲಾಗಿತ್ತು. ಇದೀಗ ಚೇತರಿಸಿಕೊಂಡಿರುವ ಅವರನ್ನು ಐಸಿಯುನಿಂದ ವಾರ್ಡ್‌ಗೆ ಶಿಫ್ಟ್ ಮಾಡಲಾಗಿದೆ.



ಮಾಹಿತಿ ಹಂಚಿಕೊಂಡ ಶ್ರೇಯಸ್

# ಓರ್ವ ಆಟಗಾರ ಅಲಭ್ಯ

ಭಾರತ ಮತ್ತು ಆಸ್ಟ್ರೇಲಿಯಾ ನಡುವಣ ಐದು ಪಂದ್ಯಗಳ ಟಿ20 ಸರಣಿ ಶುರುವಾಗಿದೆ. ಈ ಸರಣಿಯ ಮೊದಲ ಮ್ಯಾಚ್ ಮಳೆಗೆ ಆಹುತಿಯಾಗಿದೆ. ಇದೀಗ ಉಭಯ ತಂಡಗಳು ದ್ವಿತೀಯ ಪಂದ್ಯಕ್ಕಾಗಿ ಸಜ್ಜಾಗುತ್ತಿದೆ.

ಅತ್ತ ಮೊದಲ ಪಂದ್ಯ ರದ್ದಾದ ಕಾರಣ ಈ ಸರಣಿಯನ್ನು ಗೆಲ್ಲಲು 3 ಮ್ಯಾಚ್‌ಗಳಲ್ಲಿ ಜಯ ಸಾಧಿಸಲೇಬೇಕು.

ಭಾರತ ಆಸ್ಟ್ರೇಲಿಯಾ ನಡುವಣ 2ನೇ ಟಿ20 ಪಂದ್ಯ ನಾಳೆ (ಅಕ್ಟೋಬರ್ 31) ನಡೆಯಲಿದೆ. ಮೆಲ್ಬೋರ್ನ್‌ನ ಎಂಸಿಜಿ ಸ್ಟೇಡಿಯಂನಲ್ಲಿ ನಡೆಯಲಿರುವ ಈ ಪಂದ್ಯಕ್ಕಾಗಿ ಟೀಮ್ ಇಂಡಿಯಾ ತನ್ನ ಆಡುವ ಬಳಗದಲ್ಲಿ ಬದಲಾವಣೆ ಮಾಡಿಕೊಳ್ಳುವ ಸಾಧ್ಯತೆಯಿಲ್ಲ. ಏಕೆಂದರೆ ಮೊದಲ ಪಂದ್ಯವು ಮಳೆಯಿಂದಾಗಿ ರದ್ದಾಗಿರುವ ಕಾರಣ, ಆ ಮ್ಯಾಚ್‌ನಲ್ಲಿ ಕಣಕ್ಕಿಳಿಸಲಾದ ಆಟಗಾರರನ್ನೇ ದ್ವಿತೀಯ ಪಂದ್ಯಕ್ಕೂ ಆಯ್ಕೆ ಮಾಡಲಿದ್ದಾರೆ.

ಒಂದು ವೇಳೆ ಒಂದು ಬದಲಾವಣೆ ಮಾಡಿಕೊಂಡರೂ ನಿತೀಶ್ ಕುಮಾರ್ ರೆಡ್ಡಿ ಕಾಣಿಸಿಕೊಳ್ಳುವುದಿಲ್ಲ.

ನಿತೀಶ್ ಕುಮಾರ್ ರೆಡ್ಡಿ ಬೆನ್ನಿನ ಬಿಗಿತದ ಸಮಸ್ಯೆಯಿಂದ ಬಳಲುತ್ತಿದ್ದಾರೆ. ಹೀಗಾಗಿಯೇ ಮೊದಲ ಮ್ಯಾಚ್‌ನಲ್ಲಿ ಕಣಕ್ಕಿಳಿದಿರಲಿಲ್ಲ. ಅಲ್ಲದೆ ದ್ವಿತೀಯ ಮತ್ತು ತೃತೀಯ ಪಂದ್ಯಗಳ ವೇಳೆಯೂ ವಿಶ್ರಾಂತಿ ತೆಗೆದುಕೊಳ್ಳುವಂತೆ ವೈದ್ಯರು ಸೂಚಿಸಿದ್ದಾರೆ. ಹೀಗಾಗಿ ಮೆಲ್ಬೋರ್ನ್‌ನಲ್ಲಿ ನಡೆಯಲಿರುವ 2ನೇ ಪಂದ್ಯದಲ್ಲೂ ನಿತೀಶ್ ಕಾಣಿಸಿಕೊಳ್ಳುವುದಿಲ್ಲ. ಇನ್ನು ಕ್ಯಾನ್‌ಬೆರಾದಲ್ಲಿ ಕಣಕ್ಕಿಳಿದ ಆಡುವ ಬಳಗವನ್ನೇ ಎಂಸಿಜಿ ಮೈದಾನದಲ್ಲೂ ಕಣಕ್ಕಿಳಿಸುವ ಸಾಧ್ಯತೆಯಿದೆ. ಹೀಗಾಗಿ ದ್ವಿತೀಯ ಪಂದ್ಯದಲ್ಲೂ ಅರ್ಷದೀಪ್ ಸಿಂಗ್ ಅವಕಾಶವಂಚಿತರಾಗಬಹುದು. ಅವರ ಬದಲಿಗೆ ಹರ್ಷಿತ್ ರಾಣಾ ಕಾಣಿಸಿಕೊಳ್ಳಲಿದ್ದಾರೆ.



ಅವಕಾಶ ವಂಚಿತ ಅರ್ಷದೀಪ್

ಅದರಂತೆ ದ್ವಿತೀಯ ಪಂದ್ಯಕ್ಕೆ ಟೀಮ್ ಇಂಡಿಯಾದ ಸಂಭಾವ್ಯ ಪ್ಲೇಯಿಂಗ್ ಇಲೆವೆನ್ ಈ ಕೆಳಗಿನಂತಿರಲಿದೆ... ಅಭಿಷೇಕ್ ಶರ್ಮಾ, ಶುಭ್‌ಮನ್ ಗಿಲ್, ಸೂರ್ಯಕುಮಾರ್ ಯಾದವ್ (ನಾಯಕ), ತಿಲಕ್ ವರ್ಮಾ, ಸಂಜು ಸ್ಯಾಮ್ಸನ್ (ವಿಕೆಟ್ ಕೀಪರ್), ಶಿವಂ ದುಬೆ, ಅಕ್ಷರ್ ಪಟೇಲ್, ಹರ್ಷಿತ್ ರಾಣಾ, ಕುಲ್ದೀಪ್ ಯಾದವ್, ವರುಣ್ ಚಕ್ರವರ್ತಿ, ಜಸ್‌ಪ್ರೀತ್ ಬುಮ್ರಾ.

**ಭಾರತ ಟಿ20 ತಂಡ:** ಸೂರ್ಯಕುಮಾರ್ ಯಾದವ್ (ನಾಯಕ), ಅಭಿಷೇಕ್ ಶರ್ಮಾ, ಶುಭಮನ್ ಗಿಲ್ (ಉಪನಾಯಕ), ತಿಲಕ್ ವರ್ಮಾ, ನಿತೀಶ್ ಕುಮಾರ್ ರೆಡ್ಡಿ, ಶಿವಂ ದುಬೆ, ಅಕ್ಷರ್ ಪಟೇಲ್, ಜಿತೇಶ್ ಶರ್ಮಾ (ವಿಕೆಟ್ ಕೀಪರ್), ವರುಣ್ ಚಕ್ರವರ್ತಿ, ಜಸ್‌ಪ್ರೀತ್ ಬುಮ್ರಾ, ಅರ್ಷದೀಪ್ ಸಿಂಗ್, ಕುಲದೀಪ್ ಯಾದವ್, ವಾಷಿಂಗ್ಟನ್ ಸುಂದರ್, ರಿಂಕು ಸಿಂಗ್, ಸಂಜು ಸ್ಯಾಮ್ಸನ್ (ವಿಕೆಟ್ ಕೀಪರ್), ಹರ್ಷಿತ್ ರಾಣಾ.

# ಶತಕ ಸಿಡಿಸಿದ ಆಸೀಸ್ ಓಪನರ್

2025 ರ ಮಹಿಳಾ ವಿಶ್ವಕಪ್ ಸೆಮಿಫೈನಲ್‌ನಲ್ಲಿ ಆಸ್ಟ್ರೇಲಿಯಾದ ಫೋಬೆ ಲಿಚ್‌ಫೀಲ್ಡ್ ಭಾರತದ ವಿರುದ್ಧ ಸ್ಫೋಟಕ ಶತಕ ಬಾರಿಸಿ ವಿಶ್ವ ದಾಖಲೆ ನಿರ್ಮಿಸಿದ್ದಾರೆ. ಕೇವಲ 77 ಎಸೆತಗಳಲ್ಲಿ ಶತಕ ಪೂರೈಸಿದ ಅವರು ವಿಶ್ವಕಪ್ ನಾಕೌಟ್ ಪಂದ್ಯದಲ್ಲಿ ವೇಗದ ಶತಕ ಬಾರಿಸಿದ ಅತಿ ಕಿರಿಯ ಆಟಗಾರ್ತಿ ಎಂಬ ಹೆಗ್ಗಳಿಕೆಗೆ ಪಾತ್ರರಾದರು. ಈ ಅದ್ಭುತ ಪ್ರದರ್ಶನ ಆಸ್ಟ್ರೇಲಿಯಾಕ್ಕೆ ಬಲ ತುಂಬಿದೆ.

2025 ರ ಐಸಿಸಿ ಮಹಿಳಾ ವಿಶ್ವಕಪ್‌ನ ಎರಡನೇ ಸೆಮಿಫೈನಲ್ ಪಂದ್ಯ ನವಿ ಮುಂಬೈನ ಡಿವೈ ಪಾಟೀಲ್ ಕ್ರೀಡಾಂಗಣದಲ್ಲಿ ನಡೆಯುತ್ತಿದೆ. ಈ ಪಂದ್ಯದಲ್ಲಿ ಟಾಸ್ ಗೆದ್ದ ಆಸ್ಟ್ರೇಲಿಯಾ ಬ್ಯಾಟಿಂಗ್ ಮಾಡುತ್ತಿದ್ದು, ತಂಡದ ಯುವ ಆರಂಭಿಕ ಆಟಗಾರ್ತಿ ಫೋಬೆ ಲಿಚ್‌ಫೀಲ್ಡ್ ಭಾರತದ ವಿರುದ್ಧ ಸ್ಫೋಟಕ ಶತಕ ಬಾರಿಸಿದ್ದಾರೆ. ಆರಂಭದಿಂದಲೂ ಭಾರತದ ಬೌಲರ್‌ಗಳ ಮೇಲೆ ಸವಾರಿ ಮಾಡಿದ ಲಿಚ್‌ಫೀಲ್ಡ್ ಕೇವಲ 77 ಎಸೆತಗಳಲ್ಲಿ ಚೊಚ್ಚಲ ವಿಶ್ವಕಪ್ ಶತಕ ಬಾರಿಸಿದರು. ತನ್ನ ಮೊದಲ ವಿಶ್ವಕಪ್‌ನಲ್ಲಿ ಆಡುತ್ತಿರುವ 22 ವರ್ಷದ ಲಿಚ್‌ಫೀಲ್ಡ್, ಟೀಂ ಇಂಡಿಯಾ ವಿರುದ್ಧ ಎರಡನೇ ಶತಕ ಬಾರಿಸಿ ತಂಡಕ್ಕೆ ಭದ್ರ ಬುನಾದಿ ಹಾಕಿಕೊಟ್ಟಿದ್ದಾರೆ.

**ಆಸೀಸ್‌ಗೆ ಆರಂಭಿಕ ಆಘಾತ:** ಮೊದಲು ಬ್ಯಾಟಿಂಗ್ ಆಯ್ದುಕೊಂಡು ಕಣಕ್ಕಿಳಿದ ಆಸ್ಟ್ರೇಲಿಯಾಕ್ಕೆ ಇನ್ನಿಂಗ್ಸ್‌ನ ಐದನೇ ಓವರ್‌ನಲ್ಲೇ ಯುವ ವೇಗಿ ಕ್ರಾಂತಿ ಗೌಡ್ ಆಘಾತ ನೀಡಿ ಆಸೀಸ್ ನಾಯಕಿ ಅಲಿಸಾ ಹೀಲಿ ಅವರನ್ನು ಪೆವಿಲಿಯನ್‌ಗಟ್ಟಿದರು. ವಾಸ್ತವವಾಗಿ ಹೀಲಿ 3 ರನ್ ಗಳಿಸಿದ್ದಾಗ ಹರ್ಮನ್‌ಪ್ರೀತ್ ಕೌರ್‌ಗೆ ಸುಲಭ ಕ್ಯಾಚ್ ನೀಡಿದ್ದರು. ಆದರೆ ಹರ್ಮನ್ ಆ ಕ್ಯಾಚ್ ಕೈಚೆಲ್ಲಿದರು. ಆದರೆ ಈ ಜೀವದಾನದ ಲಾಭ ಪಡೆಯುವಲ್ಲಿ ವಿಫಲರಾದ ಹೀಲಿ ಕೇವಲ 5 ರನ್ ಬಾರಿಸಿ ವಿಕೆಟ್ ಒಪ್ಪಿಸಿದರು.

**45 ಎಸೆತಗಳಲ್ಲಿ ಅರ್ಧಶತಕ:** ಈ ವಿಕೆಟ್ ಪತನದ ಹೊರತಾಗಿಯೂ ಆಸೀಸ್ ರನ್ ವೇಗಕ್ಕೆ ಕಡಿವಾಣ ಬೀಳಲಿಲ್ಲ. ಇದಕ್ಕೆ ಕಾರಣ ಲಿಚ್‌ಫೀಲ್ಡ್. ಭಾರತದ ಪ್ರತಿಯೊಬ್ಬ ಬೌಲರ್‌ಗಳ ಮೇಲೆ ದಾಳಿ ಮಾಡಿ ಬೌಂಡರಿಗಳ ಮಳೆ ಸುರಿಸಿದರು. ಅದರಲ್ಲೂ ಯುವ ವೇಗಿ ಕ್ರಾಂತಿ ಗೌಡ್ ಮತ್ತು ಅನುಭವಿ ಸ್ಪಿನ್ನರ್ ದೀಪ್ತಿ ಶರ್ಮಾ ಗುರಿಯಾಗಿಸಿಕೊಂಡ ಲಿಚ್‌ಫೀಲ್ಡ್, ಕೇವಲ 45 ಎಸೆತಗಳಲ್ಲಿ ಅರ್ಧಶತಕ ಪೂರೈಸಿದರು.




ಕ್ಯಾಚ್ ಕೈಚೆಲ್ಲಿದ ಹರ್ಮನ್

Printed by : A. BALACHANDRA, Printed at : RAJHANS ENTERPRISES No. 134, 4th Main Road, Industrial Town, Rajajinagar, Bengaluru - 560044, Karnataka. Owned By, Published By, Editor :T. HOMBE GOWDA, No. 1230, Jayamahal, Ground Floor, 13th Cross, 2nd Phase, Girinagar, Bengaluru - 560 085, Karnataka. Email Id: udayavahininews@yahoo.com , epaper.udayavahini.in www.udayavahini.in Udaya vahini news Udaya vahini news
ಉದಯವಾಹಿನಿ ಪತ್ರಿಕೆ ಹೆಸರಿನಲ್ಲಿ ಯಾರಾದರೂ ಬ್ಲ್ಯಾಕ್‌ಮೇಲ್ ಮಾಡಿದರೆ ಅಥವಾ ಹೆಸರು ದುರ್ಬಳಕೆ ಮಾಡಿಕೊಳ್ಳುತ್ತಿದ್ದರೆ ಕೂಡಲೇ ಈ ನಂಬರ್‌ಗೆ ಕರೆ ಮಾಡಿ: 9448225966